# ಮೈಸೂರು ವಿಶ್ವವಿದ್ಯಾನಿಲಯ

## ಪೂರಕ ಕಾರ್ಯಸೂಚಿ

**"ಸಿಂಡಿಕೇಟಿನ ಮೂರನೇ ಸಾಮಾನ್ಯ ಸಭೆ"**

**ದಿನಾಂಕ : 20-06-2024, ಗುರುವಾರ**

**ಪೂರ್ವಾಹ್ನ : 11-30 ಗಂಟೆಗೆ**

❖

**ಸ್ಥಳ : ಸಿಂಡಿಕೇಟ್ ಸಭಾಂಗಣ**

**ಕ್ರಾಫರ್ಡ್ ಭವನ, ಮೈಸೂರು ವಿ.ವಿ.**

**ಮೈಸೂರು**

## ಮೈಸೂರು ವಿಶ್ವವಿದ್ಯಾನಿಲಯ

ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದ ಸಿಂಡಿಕೇಟ್ ಸಭಾಂಗಣದಲ್ಲಿ ದಿನಾಂಕ:20-06-2024ರ ಗುರುವಾರ, ಪೂರ್ವಾಹ್ನ 11-30 ಗಂಟೆಗೆ ನಡೆಯಲಿರುವ "ಮೂರನೇ ಸಾಮಾನ್ಯ ಸಿಂಡಿಕೇಟಿನ ಸಭೆ"ಯಲ್ಲಿ ಮಂಡಿಸಲಿರುವ ವಿಷಯಗಳು.

### ಪೂರಕ ಕಾರ್ಯಸೂಚಿ

| ವಿಷಯ ಸಂಖ್ಯೆ | ವಿಷಯ ಸಂಕ್ಷಿಪ್ತವಾಗಿ | ಪುಟ ಸಂಖ್ಯೆ ಮತ್ತು ಅಡಕ |
|---|---|---|
| 2024/3.1 ರಿಂದ 2024/ 3.18ರವರೆಗೆ | ದಿನಾಂಕ : 11-06-2024ರ "ಮೂರನೇ ಸಾಮಾನ್ಯ ಸಿಂಡಿಕೇಟ್ ಸಭೆ"ಯ "ಪೂರ್ವಭಾವಿ ಕಾರ್ಯಸೂಚಿ"ಯಲ್ಲಿರುವಂತೆ | 1-101 |
| ಸಾಮಾನ್ಯ ಸಭೆ 2024/3.19 | ಡಾ. ಸಿ. ಸುಮಂಗಲ, ಪ್ರಾಧ್ಯಾಪಕರು, ವ್ಯವಹಾರ ಆಡಳಿತ ವಿಭಾಗ, ಯುವರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರಿಗೆ ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕ ದೇಶಕ್ಕೆ ಹೋಗಿಬರಲು ನೀಡಿದ್ದ ಅನುಮತಿಯನ್ನು ವಿಸ್ತರಿಸಿರುವ ಕುರಿತು ಸಿಂಡಿಕೇಟ್ ಸಭೆಯ ಅನುಸಮರ್ಥನೆ ಪಡೆಯುವುದರ ಬಗೆಗೆ. | 102-104 |
| ಸಾಮಾನ್ಯ ಸಭೆ 2024/3.20 | ಶ್ರೀಮತಿ ಎಸ್. ನೇತ್ರಾ, ಅಧೀಕ್ಷಕರು, ಯೋಜನೆ, ಅಭಿವೃದ್ಧಿ ಮತ್ತು ಅನುಷ್ಠಾನ ವಿಭಾಗ, ಆಡಳಿತ ಶಾಖೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ವಿದೇಶ ಪ್ರವಾಸ ಕೈಗೊಳ್ಳಲು ಅನುಮತಿ ನೀಡುವ ಬಗ್ಗೆ. | 105 |
| ಸಾಮಾನ್ಯ ಸಭೆ 2024/3.21 | ಶ್ರೀಮತಿ ನವೀದ ಖಾನಂ, ಪ್ರಥಮ ದರ್ಜೆ ಸಹಾಯಕಿ, ರೇಷ್ಮೆಕೃಷಿ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರು ಸೌದಿ ಅರೇಬಿಯಾ ದೇಶಕ್ಕೆ ಪ್ರವಾಸ ಕೈಗೊಳ್ಳಲು ಅನುಮತಿ ನೀಡಿರುವ ಬಗ್ಗೆ. | 106-107 (ಅನುಬಂಧ-ಅ) |
| ಸಾಮಾನ್ಯ ಸಭೆ 2024/3.22 | 2023-24ನೇ ಸಾಲಿನ ವಿವಿಧ ಆಯವ್ಯಯ ಅಂದಾಜುಗಳಲ್ಲಿ ಪರಿಷ್ಕರಿಸಿರುವುದನ್ನು "ಸಿಂಡಿಕೇಟ್" ಸಭೆಯ ಅನುಮೋದನೆಗಾಗಿ. | 108-119 |
| ಸಾಮಾನ್ಯ ಸಭೆ 2024/3.23 | 2024-2025ನೇ ಆರ್ಥಿಕ ಸಾಲಿನ ಮೈಸೂರು ವಿಶ್ವವಿದ್ಯಾನಿಲಯದ ಆಯವ್ಯಯ ಅಂದಾಜುಗಳ "ಕರಡು" ಪಟ್ಟಿ (ಅನುಬಂಧ-1)ಯನ್ನು "ಸಿಂಡಿಕೇಟ್" ಸಭೆಯ ಅನುಮೋದನೆಗಾಗಿ. | 120-122 |
| ಸಾಮಾನ್ಯ ಸಭೆ 2024/3.24 | Department of Studies in Genetics & Genomics, Manasagangotri, Mysuru ಮತ್ತು HCG Cancer Care Centre, Bangalore ಇವರುಗಳ ನಡುವೆ ಪರಸ್ಪರ ಒಡಂಬಡಿಕೆಯನ್ನು ಮಾಡಿಕೊಳ್ಳಲು ಕೋರಿರುವ ಬಗ್ಗೆ. | 123 |
| ಸಾಮಾನ್ಯ ಸಭೆ 2024/3.25 | ವಿಶ್ವವಿದ್ಯಾನಿಲಯದ ವಿದ್ಯಾರ್ಥಿನಿಲಯಗಳ ಆಡಳಿತ, ನಿರ್ವಹಣೆ ಹಾಗೂ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ಸಲಹಾ ಸಮಿತಿಯ 02 ಸಭೆಗಳ ತೀರ್ಮಾನಗಳ ಅನುಸಮರ್ಥನೆಗಾಗಿ. | 124-140 |
| ಸಾಮಾನ್ಯ ಸಭೆ 2024/3.26 | ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಶ್ರೀ ವಾಲ್ಮೀಕಿ ಸಂಶೋಧನಾ ಮತ್ತು ವಿಸ್ತರಣ ಕೇಂದ್ರವನ್ನು ಸ್ಥಾಪಿಸುವ ಕುರಿತು. | 141-158 (ಅನುಬಂಧ-ಅ-ಒ) |
| ಸಾಮಾನ್ಯ ಸಭೆ 2024/3.27 | ಮೈಸೂರು ವಿಶ್ವವಿದ್ಯಾನಿಲಯಗಳಲ್ಲಿರುವ ಒಟ್ಟು ಅಧ್ಯಯನ ಪೀಠಗಳು, ಅದರ ಸ್ವರೂಪ, ಅವಧಿ, ಕಾರ್ಯ ಚಟುವಟಿಕೆಗಳು, ಸರ್ಕಾರ ಮತ್ತು ಇತರೆ ಮೂಲಗಳಿಂದ ಬಂದ ಒಟ್ಟು ಅನುದಾನ, ಖರ್ಚು ಮಾಡಿರುವ ಮಾಹಿತಿ ಬಗೆಗೆ. | 159-164 (ಅನುಬಂಧ-ಅ) |

15/6/2024

| | | |
|---|---|---|
| **ಸಾಮಾನ್ಯ ಸಭೆ 2024/3.28** | ಕ್ಯಾತನಹಳ್ಳಿ ಶ್ರೀ ನಾಗರಾಜು , ಮಾನ್ಯ ಸಿಂಡಿಕೇಟ್ ಸದಸ್ಯರು ಇವರು ದಿನಾಂಕ : 6.6.2024ರಂದು ನೀಡಿರುವ ಪತ್ರದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿಶೇಷ ಘಟಕಕ್ಕೆ ಸಂಬಂಧಿಸಿದ ವಿಷಯಗಳನ್ನು ಸಿಂಡಿಕೇಟ್ ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸುವ ಬಗ್ಗೆ. | 165-170 |
| **ಸಾಮಾನ್ಯ ಸಭೆ 2024/3.29** | ಡಾ.ಟಿ.ಆರ್. ಚಂದ್ರಶೇಖರ್, ಸಿಂಡಿಕೇಟ್ ಸದಸ್ಯರು, ಮೈಸೂರು ವಿಶ್ವವಿದ್ಯಾನಿಲಯ ಮೈಸೂರು ಇವರು ಹೊರಗುತ್ತಿಗೆ ಆಧಾರದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಂಸ್ಥೆಗಳ ಬಗ್ಗೆ ಮಾಹಿತಿ ಕೋರಿರುವ ಬಗ್ಗೆ. | 171-172 (ಅನುಬಂಧ-ಅ-ಇ) |

ದಿನಾಂಕ : 15.06.2024

ಸ್ಥಳ : ಮೈಸೂರು

**ಕುಲಸಚಿವ**
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು

Subject No. 2024/3.19

**ಡಾ. ಸಿ.ಸುಮಂಗಲ., ಪ್ರಾಧ್ಯಾಪಕರು, ವ್ಯವಹಾರ ಆಡಳಿತ ವಿಭಾಗ, ಯುವರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರಿಗೆ ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕ ದೇಶಕ್ಕೆ ಹೋಗಿಬರಲು ನೀಡಿದ್ದ ಅನುಮತಿಯನ್ನು ವಿಸ್ತರಿಸಿರುವ ಕುರಿತು ಸಿಂಡಿಕೇಟ್ ಸಭೆಯ ಅನುಸಮರ್ಥನೆ ಪಡೆಯುವುದರ ಬಗೆಗೆ.**

******

ಡಾ. ಸಿ.ಸುಮಂಗಲ., ಪ್ರಾಧ್ಯಾಪಕರು, ವ್ಯವಹಾರ ಆಡಳಿತ ವಿಭಾಗ, ಯುವರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ದಿನಾಂಕ 26.10.2023 ರಿಂದ 31.12.2023(67 ದಿನಗಳು)ವರೆಗೆ ಸ್ವಂತ ಕೆಲಸ ನಿಮಿತ್ತ ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕ ದೇಶಕ್ಕೆ ಹೋಗಿ ಬರುವ ಸಂಬಂಧ ವಿಶ್ವವಿದ್ಯಾನಿಲಯಕ್ಕೆ ಯಾವುದೇ ಆರ್ಥಿಕ ಹೊಣೆಗಾರಿಕೆ ಇಲ್ಲದಂತೆ ಅನುಮತಿ ನೀಡಬೇಕೆಂದು ಕೋರಿ ಪ್ರಾಂಶುಪಾಲರ ಮೂಲಕ ಮನವಿಯನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ್ದರು.

ಡಾ. ಸಿ.ಸುಮಂಗಲರವರು ಕೋರಿರುವಂತೆ ಸ್ವಂತ ಕೆಲಸದ ನಿಮಿತ್ತ ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕ ದೇಶಕ್ಕೆ ಹೋಗುವ ಸಂಬಂಧ ಅವರ ಹಕ್ಕಿನಲ್ಲಿರುವ ರಜೆಯನ್ನು ಉಪಯೋಗಿಸಿಕೊಂಡು ವಿಶ್ವವಿದ್ಯಾನಿಲಯಕ್ಕೆ ಯಾವುದೇ ಆರ್ಥಿಕ ಹೊಣೆಗಾರಿಕೆ ಇಲ್ಲದಂತೆ ದಿನಾಂಕ 26.10.2023 ರಿಂದ 31.12.2023ರವರೆಗೆ ಹೋಗಿ ಬರಲು ಸಿಂಡಿಕೇಟ್ ಸಭೆಯ ಅನುಮೋದನೆಯನ್ನು ಕಾಯ್ದಿರಿಸಿ, ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ:ಇಟಿ12/505/2016-17 ದಿನಾಂಕ 07.10.2023ರಲ್ಲಿ (ಅನುಬಂಧ-ಅ) ಅನುಮತಿ ನೀಡಲಾಗಿರುತ್ತದೆ. ಈ ರೀತಿಯಾಗಿ ವಿಶ್ವವಿದ್ಯಾನಿಲಯದಿಂದ ಕೈಗೊಳ್ಳಲಾಗಿರುವ ಕ್ರಮವನ್ನು ದಿನಾಂಕ 21.11.2023ರಂದು ಜರುಗಿದ ಸಿಂಡಿಕೇಟ್ ಸಭೆಯು ಅನುಸಮರ್ಥಿಸಿದ್ದ ಹಿನ್ನೆಲೆಯಲ್ಲಿ ಈ ಸಂಬಂಧ ದಿನಾಂಕ 02.12.2023ರಲ್ಲಿ ಆದೇಶವನ್ನು ಹೊರಡಿಸಲಾಗಿರುತ್ತದೆ.

ಆದರೆ, ಡಾ. ಸಿ.ಸುಮಂಗಲರವರು ನಿಗದಿತ ಸಮಯದಲ್ಲಿ ವಿಮಾನ ದೊರೆಯದ ಕಾರಣ 02 ದಿನ ತಡವಾಗಿ ಯುವರಾಜ ಕಾಲೇಜಿನಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುತ್ತೇನೆಂದು ತಿಳಿಸಿ ಈ ಸಂಬಂಧ ದಿನಾಂಕ 01.01.2024 ರಿಂದ 02.01.2024ರವರೆಗೆ 02 ದಿನಗಳ ರಜೆಯನ್ನು ವಿಸ್ತರಿಸಬೇಕೆಂದು ಕೋರಿದ್ದ ಹಿನ್ನೆಲೆಯಲ್ಲಿ ಕಡತವನ್ನು ಮಂಡಿಸಲಾಗಿ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸಭೆಯ ತೀರ್ಮಾನವನ್ನು ಕಾಯ್ದಿರಿಸಿ ಮಾನ್ಯಕುಲಪತಿಯವರ ಅನುಮೋದನೆ ಮೇರೆಗೆ ಸದರಿಯವರಿಗೆ ನೀಡಲಾಗಿದ್ದ ರಜೆಯನ್ನು ದಿನಾಂಕ 31.12.2023ರ ಬದಲಾಗಿ ದಿನಾಂಕ 02.01.2024ರವರೆಗೆ ವಿಸ್ತರಿಸಿ ದಿನಾಂಕ 17.05.2024ರಲ್ಲಿ ಆದೇಶ ಹೊರಡಿಸಲಾಗಿರುತ್ತದೆ. ಈ ಸಂಬಂಧವಾಗಿ ವಿಶ್ವವಿದ್ಯಾನಿಲಯದ ವತಿಯಿಂದ ಕೈಗೊಂಡಿರುವ ಕ್ರಮವನ್ನು ಸಿಂಡಿಕೇಟ್ ಸಭೆಯ ಅವಗಾಹನೆಗಾಗಿ ಹಾಗೂ ಅನುಸಮರ್ಥನೆಗೆ ಮಂಡಿಸಿದೆ.

# UNIVERSITY OF MYSORE

Viswavidyanilaya Karya Soudh
Crawford Hall, Mysore-570 005.

Sub: Permission to Prof. C. Sumangala, Department of Management Science, Yuvaraja's College, University of Mysore, Mysuru to visit USA.

Ref: Letter No: YCM /ET -1/ 471/ 2023- 24, dated: 05-07-2023 from Prof. C. Sumangala, letter forwarded by the Principal, Yuvaraja's College, University of Mysore, Mysuru.

***

**UNIVERSITY ORDER NO: ET12/505/2016-17 DATED:07th OCTOBER 2023**

Pursuant to the approval of the Hon'ble Vice-Chancellor and pending decision of the University Syndicate, Prof. C. Sumangala, Department of Management Science, Yuvaraja's College, University of Mysore, Mysuru is permitted to visit United States of America with the following conditions during the period from 26th October 2023 to 31st December 2023 (67 days including journey days) on personal grounds, without any financial commitment on the part of the University by utilizing Leave at her credit and PG vacation.

1. Foreign visit or leave should not be extended for any reason and resignation should not be given while abroad.
2. No foreign hospitality should be accepted during the above said visiting period.
3. Immediately after returning from a foreign visit, the full details of the expenses related to the visit should be submitted to the University and the said expenditure should also be declared in the list of assets and liabilities.

**BY ORDER**

REGISTRAR
Registrar
University of Mysore
Mysuru

To

1. Prof. C. Sumangala, Department of Management Science, Yuvaraja's College, University of Mysore, Mysuru.
2. The Principal, Yuvaraja's College, University of Mysore, Mysuru-Take necessary arrangements in her absence in this regard.
3. The Registrar (Eval.), University of Mysore, Mysore
4. The Finance Officer, University of Mysore, Mysore.
5. The Govt. Auditor, University of Mysore, Mysore.
6. The Administrative Officer, Manasagangothri, Mysore.
7. The Deputy Registrar (Gen), Administrative Branch, University of Mysore, Mysore.
8. The Asst. Registrar/Supdt. (Est/Authorities),Administrative Branch, UoM, Mysore.
9. The PA to Vice-Chancellor/Registrar/Finance Officer, University of Mysore, Mysore.
10. File - ET12-abroad visit

ವಿಳಾಸ : UNIREG
ದೂರವಾಣಿ ಸಂಖ್ಯೆ :2419440/2419361
ಫ್ಯಾಕ್ಸ್ ಸಂಖ್ಯೆ : 0821- 2419363/2419301

ಇಮೇಲ್:registrar@uni-mysore.ac.in
ವೆಬ್ ಸೈಟ್: www.uni-mysore.ac.in

# ಮೈಸೂರು ವಿಶ್ವವಿದ್ಯಾನಿಲಯ

ಸ್ಥಾಪನೆ1916

ವಿಶ್ವವಿದ್ಯಾನಿಲಯ ಕಾರ್ಯಸೌಧ,
ಕ್ರಾಫರ್ಡ್‌ಭವನ, ಅಂಚೆ ಪೆಟ್ಟಿಗೆ ಸಂಖ್ಯೆ 406,
ಮೈಸೂರು570005.

**ವಿಷಯ:** ಸ್ವಂತ ಕೆಲಸದ ನಿಮಿತ್ತ ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ ದೇಶಕ್ಕೆ ಹೋಗಿಬರಲು ನೀಡಿದ್ದ ಅನುಮತಿಯ ಅವಧಿಯನ್ನು ವಿಸ್ತರಿಸುವ ಬಗ್ಗೆ.

**ಉಲ್ಲೇಖ:** 1. ನಿಮ್ಮ ಪತ್ರ ಸಂಖ್ಯೆ: ವೈಸಿಎಂ/ಎಂ.ಬಿ.ಎ/471/2023-24 ದಿನಾಂಕ 05.07.2023.
2. ವಿ.ವಿ ಆದೇಶ ಸಂಖ್ಯೆ: ಇಟಿ12/505/2016-17 ದಿನಾಂಕ 07.10.2023.
3. ದಿನಾಂಕ 21.11.2023ರಂದು ಜರುಗಿದ ಸಿಂಡಿಕೇಟ್ ಸಭೆಯ ತೀರ್ಮಾನ.
4. ವಿ.ವಿ ಆದೇಶ ಸಂಖ್ಯೆ: ಇಟಿ12/505/2016-17 ದಿನಾಂಕ 02.12.2023.
5. ನಿಮ್ಮ ಪತ್ರ ಸಂಖ್ಯೆ: ವೈಸಿಎಂ/ಎಂ.ಬಿ.ಎ/2019/2023-24 ದಿನಾಂಕ 09.01.2024.
6. ವಿ.ವಿ ಪತ್ರ ಸಂಖ್ಯೆ: ಇಟಿ12/505/2016-17 ದಿನಾಂಕ 18.03.2024.
7. ನಿಮ್ಮ ಪತ್ರ ಸಂಖ್ಯೆ: ಯುಒಎಂ/ವೈಸಿಎಂ/63/2024-25 ದಿನಾಂಕ 04.04.2024.
8. ಮಾನ್ಯ ಕುಲಪತಿಯವರ ಅನುಮೋದನೆ ದಿನಾಂಕ 13-05-2024.

****

## ವಿಶ್ವವಿದ್ಯಾನಿಲಯ ಆದೇಶ ಸಂಖ್ಯೆ:ಇಟಿ12/505/2016-17 ದಿನಾಂಕ 17-05-2024

ಮಾನ್ಯ ಕುಲಪತಿಯವರ ಅನುಮೋದನೆ ಮೇರೆಗೆ ಹಾಗೂ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸಭೆಯನ್ನು ತೀರ್ಮಾನವನ್ನು ಕಾಯ್ದಿರಿಸಿ ಡಾ.ಸಿ. ಸುಮಂಗಲ, ಪ್ರಾಧ್ಯಾಪಕರು, ವ್ಯವಹಾರ ಆಡಳಿತ ವಿಭಾಗ, ಯುವರಾಜ ಕಾಲೇಜು, ಮೈಸೂರು ಇವರಿಗೆ ಉಲ್ಲೇಖಿತ (02) ಆದೇಶದಲ್ಲಿ ದಿನಾಂಕ 26.10.2023 ರಿಂದ 31.12.2023ರವರೆಗೆ ಸ್ವಂತ ಕೆಲಸದ ನಿಮಿತ್ತ ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ ದೇಶಕ್ಕೆ ಹೋಗಿಬರಲು ಅನುಮತಿಸಲಾಗಿದ್ದ ಆದೇಶವನ್ನು ಮಾರ್ಪಡಿಸಿ ದಿನಾಂಕ 02.01.2024ರವರೆಗೆ ರಜೆ ಅವಧಿಯನ್ನು ವಿಸ್ತರಿಸಲಾಗಿದೆ. ಉಳಿದಂತೆ ಉಲ್ಲೇಖಿತ (2)ರಲ್ಲಿನ ಇನ್ನುಳಿದ ಎಲ್ಲಾ ಅಂಶಗಳು ಯತಾವತ್ತಾಗಿರುತ್ತದೆ.

ಆದೇಶದ ಮೇರೆಗೆ,

UR 20/5/2024

ಕುಲಸಚಿವ

ಕುಲಸಚಿವ
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು

ಇವರಿಗೆ,

1. ಡಾ.ಸಿ. ಸುಮಂಗಲ, ಪ್ರಾಧ್ಯಾಪಕರು, ವ್ಯವಹಾರ ಆಡಳಿತ ವಿಭಾಗ, ಯುವರಾಜ ಕಾಲೇಜು, ಮೈಸೂರು.

ಪ್ರತಿ,

2. ಪ್ರಾಂಶುಪಾಲರು, ಯುವರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
3. ಕುಲಪತಿಯವರು/ಕುಲಸಚಿವರು/ಕುಲಸಚಿವ(ಪರೀಕ್ಷಾಂಗ)/ಹಣಕಾಸು ಅಧಿಕಾರಿಯವರ ಆಪ್ತ ಸಹಾಯಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
4. ಕಛೇರಿ ಪತ್ರ.

Subject No. 2024/3.20

ಶ್ರೀಮತಿ ಎಸ್.ನೇತ್ರಾ, ಅಧೀಕ್ಷಕರು, ಯೋಜನೆ, ಅಭಿವೃದ್ಧಿ ಮತ್ತು ಅನುಷ್ಠಾನ ವಿಭಾಗ, ಆಡಳಿತ ಶಾಖೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ವಿದೇಶ ಪ್ರವಾಸ ಕೈಗೊಳ್ಳಲು ಅನುಮತಿ ನೀಡುವ ಬಗ್ಗೆ.

******

ಶ್ರೀಮತಿ ಎಸ್.ನೇತ್ರಾ, ಅಧೀಕ್ಷಕರು, ಯೋಜನೆ, ಅಭಿವೃದ್ಧಿ ಮತ್ತು ಅನುಷ್ಠಾನ ವಿಭಾಗ, ಆಡಳಿತ ಶಾಖೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ದಿನಾಂಕ: 13-07-2024 ರಿಂದ 28-07-2024ರವರೆಗೆ (16 ದಿನಗಳು) ಖಾಸಗಿಯಾಗಿ ತಮ್ಮ ಹಕ್ಕಿನಲ್ಲಿರುವ ರಜೆಯನ್ನು ಉಪಯೋಗಿಸಿಕೊಂಡು ವಿಶ್ವವಿದ್ಯಾನಿಲಯಕ್ಕೆ ಯಾವುದೇ ಆರ್ಥಿಕ ಹೊಣೆಗಾರಿಕೆ ಇಲ್ಲದಂತೆ ಪ್ರವಾಸನಿಮಿತ್ತ ಆಸ್ಟ್ರೇಲಿಯಾಗೆ ಹೋಗಿಬರಲು ಈ ಕೆಳಕಂಡ ಷರತ್ತುಗಳೊಂದಿಗೆ ಅನುಮತಿ ನೀಡುವ ಸಂಬಂಧ ಸಿಂಡಿಕೇಟ್ ಸಭೆಯ ಅವಗಾಹನೆಗೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ.

1. ಯಾವುದೇ ಕಾರಣಕ್ಕೂ ವಿದೇಶಿ ಭೇಟಿ ಅಥವಾ ರಜೆಯನ್ನು ವಿಸ್ತರಿಸಬಾರದು ಮತ್ತು ವಿದೇಶದಲ್ಲಿರುವಾಗ ರಾಜೀನಾಮೆ ನೀಡಬಾರದು.
2. ಮೇಲೆ ತಿಳಿಸಲಾದ ಭೇಟಿಯ ಅವಧಿಯಲ್ಲಿ ಯಾವುದೇ ವಿದೇಶಿ ಆತಿಥ್ಯವನ್ನು ಸ್ವೀಕರಿಸಬಾರದು.
3. ವಿದೇಶಿ ಭೇಟಿಯಿಂದ ಹಿಂದಿರುಗಿದ ತಕ್ಷಣ ಭೇಟಿಗೆ ಸಂಬಂಧಿಸಿದ ವೆಚ್ಚಗಳ ಸಂಪೂರ್ಣ ವಿವರಗಳನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಬೇಕು ಮತ್ತು ಹೇಳಿದ ವೆಚ್ಚವನ್ನು ಆಸ್ತಿ ಮತ್ತು ಹೊಣೆಗಾರಿಕೆಗಳ ಪಟ್ಟಿಯಲ್ಲಿ ಘೋಷಿಸಬೇಕು.

Subject No. 2024/3.21

ಶ್ರೀಮತಿ ನವೀದ ಖಾನಂ, ಪ್ರಥಮ ದರ್ಜೆ ಸಹಾಯಕಿ, ರೇಷ್ಮೆಕೃಷಿ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರು ಸೌದಿ ಅರೇಬಿಯಾ ದೇಶಕ್ಕೆ ಪ್ರವಾಸ ಕೈಗೊಳ್ಳಲು ಅನುಮತಿ ನೀಡಿರುವ ಬಗ್ಗೆ.

*****

ಶ್ರೀಮತಿ ನವೀದ ಖಾನಂ, ಪ್ರಥಮ ದರ್ಜೆ ಸಹಾಯಕಿ, ರೇಷ್ಮೆಕೃಷಿ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರು ಖಾಸಗಿಯಾಗಿ ತಮ್ಮ ಹಕ್ಕಿನಲ್ಲಿರುವ ರಜೆಯನ್ನು ಉಪಯೋಗಿಸಿಕೊಂಡು ದಿನಾಂಕ: 13-05-2024 ರಿಂದ 12-07-2024 ರವರೆಗೆ ವಿಶ್ವವಿದ್ಯಾನಿಲಯಕ್ಕೆ ಯಾವುದೇ ಆರ್ಥಿಕ ಹೊಣೆಗಾರಿಕೆ ಇಲ್ಲದಂತೆ ಸೌದಿ ಅರೇಬಿಯಾ ದೇಶಕ್ಕೆ ಪ್ರವಾಸ ಸಂಬಂಧ ಹೋಗಿಬರಲು ವಿ.ವಿ.ಆದೇಶ ಸಂಖ್ಯೆ: ಇಟಿ.5/70/2012-13, ದಿನಾಂಕ: 14-05-2024ರ ಆದೇಶದಲ್ಲಿ (ಅನುಬಂಧ-'ಅ') ಈ ಕೆಳಕಂಡ ಷರತ್ತುಗಳೊಂದಿಗೆ ಅನುಮತಿ ನೀಡಲಾಗಿರುವ ವಿಷಯವನ್ನು ಸಿಂಡಿಕೇಟ್ ಸಭೆಯ ಅವಗಾಹನೆಗೆ ಮತ್ತು ಅನುಸಮರ್ಥನೆಗಾಗಿ ಮಂಡಿಸಿದೆ.

1. ಯಾವುದೇ ಕಾರಣಕ್ಕೂ ವಿದೇಶಿ ಭೇಟಿ ಅಥವಾ ರಜೆಯನ್ನು ವಿಸ್ತರಿಸಬಾರದು ಮತ್ತು ವಿದೇಶದಲ್ಲಿರುವಾಗ ರಾಜೀನಾಮೆ ನೀಡಬಾರದು.
2. ಮೇಲೆ ತಿಳಿಸಲಾದ ಭೇಟಿಯ ಅವಧಿಯಲ್ಲಿ ಯಾವುದೇ ವಿದೇಶಿ ಆತಿಥ್ಯವನ್ನು ಸ್ವೀಕರಿಸಬಾರದು.
3. ವಿದೇಶಿ ಭೇಟಿಯಿಂದ ಹಿಂದಿರುಗಿದ ತಕ್ಷಣ ಭೇಟಿಗೆ ಸಂಬಂಧಿಸಿದ ವೆಚ್ಚಗಳ ಸಂಪೂರ್ಣ ವಿವರಗಳನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಬೇಕು ಮತ್ತು ಹೇಳಿದ ವೆಚ್ಚವನ್ನು ಆಸ್ತಿ ಮತ್ತು ಹೊಣೆಗಾರಿಕೆಗಳ ಪಟ್ಟಿಯಲ್ಲಿ ಘೋಷಿಸಬೇಕು.

Telephone No. : 2419677/2419361
Fax: 0821-2419363/2419301

e-mail : registrar@uni-mysore.ac.in
www.uni-mysore.ac.in

# UNIVERSITY OF MYSORE

Estd. : 1916

VISHWAVIDYANILAYA KARYASOUDHA
CRAWFORD HALL, MYSORE-570005

Sub: Permission to Smt. Navida Khanum, First Division Assistant, Department of Sericulture Science,Manasagangothri, Mysuru to visit to Saudi Arabia.

Ref: Represented dated:07-05-2024 from Smt. Navida Khanum, First Division Assistant, Department of Sericulture Science, Manasagangothri, Mysuru

*****

**ORDER NO ET-5/70/2012-13 Dated 14th May 2024**

Pursuant to the approval of the Vice-Chancellor and pending ratification by the University Syndicate, permission is accorded to Smt. Navida Khanum, First Division Assistant, Department of Studies in Sericulture Science, Manasagangothri, Mysuru to visit Mecca and Madina, Saudi Arabia during the period from 13-05-2024 to 12-07-2024 by utilizing leave at her credit, without any financial commitment on the part of the University with the following conditions.

1. Foreign visit or leave shouldnot be extended for any reason and resignation should not be given while abroad.
2. No foreign hospitality should be accepted during the above said visiting period.
3. Immediately after returning from a foreign visit, the full details of the expenses related to the visit shouldbe submitted to the University and the said expenditure should be declared in the list of assets and liabilities.

BY ORDER

21/5/2024

REGISTRAR

To.

1. Smt. Navida Khanum, First Division Assistant, Department of Sericulture Science,Manasagangothri, Mysuru.
2. The Chairman, DOS in Sericulture Science, Manasagangotri, Mysuru.
3. The Administrative Officer, Manasagangotri, Mysuru.
4. The Finance Officer, University of Mysore, Mysuru.
5. The Deputy Registrar/Asst. Registrar/ Superintendent (Estt.), University of Mysore, Mysuru.
6. The P.A. to Vice-Chancellor/Registrar/Finance, University of Mysore, Mysuru.
7. Office copy.

Subject No. 2024/3-22

**2023–24ನೇ ಸಾಲಿನ ವಿವಿಯ ಆಯವ್ಯಯ ಅಂದಾಜುಗಳಲ್ಲಿ ಪರಿಷ್ಕರಿಸಿರುವದನ್ನು "ಸಿಂಡಿಕೇಟ್" ಸಭೆಯ ಅನುಮೋದನೆಗಾಗಿ**

| ಪರಿಷ್ಕೃತಗೊಂಡಿರುವ ಶೀರ್ಷಿಕೆ ವಿವರಗಳು | | | | |
|---|---|---|---|---|
| ಕ್ರಮ ಸಂಖ್ಯೆ Sl. No. | ವಿವರಗಳು | 2023–24ನೇ ಸಾಲಿನ ಆಯವ್ಯಯ | 2023–24ನೇ ಸಾಲಿನ ಪರಿಷ್ಕೃತ ಅಂದಾಜು | ಹೆಚ್ಚುವರಿ |
| | ಆದಾಯದಲ್ಲಿ ಹೆಚ್ಚುವರಿ | | | |
| 1 | ಪ್ರೋತ್ಸಾಹ/ಅಭಿವೃದ್ಧಿ ಅನುದಾನ | - | 5,000,000 | 5,000,000 |
| 2 | ಪ.ಜಾ/ಪ.ವರ್ಗದ ವಿದ್ಯಾರ್ಥಿಗಳಿಗೆ ಮಂಜೂರಾಗುವ ಅನುದಾನ ಮತ್ತು ಭೋಜನಾ ಶುಲ್ಕ ಹಾಗು ಇತ್ಯಾದಿಗಳಿಂದ ಬರುವ ಅನುದಾನ | 80,000,000 | 97,000,000 | 17,000,000 |
| 3 | ಪ್ರವೇಶ ನೊಂದಣಿ/ಸಂಯೋಜನಾ ಇತ್ಯಾದಿ ಶುಲ್ಕಗಳು | 320,000,000 | 460,000,000 | 140,000,000 |
| 4 | ಇತರೆ | 40,000,000 | 100,000,000 | 60,000,000 |
| 5 | ಪರೀಕ್ಷಾ ಖಾತೆಯಿಂದ ಆದಾಯ | 400,000,000 | 510,000,000 | 110,000,000 |
| | | | ಒಟ್ಟು | **332,000,000** |
| ಆದಾಯದಲ್ಲಿ ಕಡಿತದ ವಿವರ | | | | |
| 1 | 2b- A) Pension Grant (Anticipation From Govt) | 150,000,000 | - | 150,000,000 |
| 2 | 3a iv) ವಿ.ವಿ. ವಸತಿ ಗೃಹಗಳಿಂದ ಆದಾಯ | 15,000,000 | 10,000,000 | 5,000,000 |
| | ಒಟ್ಟು | | | **155,000,000** |
| | ವಿವಿಯು ಹೆಚ್ಚುವರಿ ಕ್ರೋಢಿಕರಿಸಿರುವ ಆದಾಯ | | | **177,000,000** |

| | | | | |
|---|---|---|---|---|
| ವೆಚ್ಚಗಳಲ್ಲಿ ಹೆಚ್ಚುವರಿ | | | | |
| I. ವೇತನ ಮತ್ತು ಭತ್ಯೆಗಳು (Pay and Allowances) | | | | |
| Code No | ವಿವರಗಳು | 2023-24ನೇ ಸಾಲಿನ ಆಯವ್ಯಯ | 2023-24ನೇ ಸಾಲಿನ ಪರಿಷ್ಕೃತ ಅಂದಾಜು | ಹೆಚ್ಚುವರಿ/ಕಡಿಮೆ |
| 198 | ಗೌರವ ಸಂಭಾವನೆ Honorarium | 1500000 | 1900000 | 400000 |
| ಒಟ್ಟು | | | | **400000** |
| ವೆಚ್ಚಗಳಲ್ಲಿ ಕಡಿತ | | | | |
| 107 | ವೈದ್ಯಕೀಯ ವೆಚ್ಚ ಮರುಪಾವತಿ Medical Reimbursement | 8000000 | 5500000 | 2500000 |
| 228 | ತಾತ್ಕಾಲಿಕ ಅಧ್ಯಾಪಕರ ವೇತನ Temporary/Part Time-Lecture Salary | 150,000,000 | 140,000,000 | 10000000 |
| 229 | ತಾತ್ಕಾಲಿಕ ಅಧ್ಯಾಪಕೇತರ ವೇತನ Temporary Non-Teaching Salary | 250,000,000 | 240,000,000 | 10000000 |
| ಒಟ್ಟು | | | | **22500000** |
| ಉಳಿತಾಯ | | | | **22100000** |
| | | | | |
| II ಪಿಂಚಣಿ ಸೌಲಭ್ಯಗಳು (Pensionary Benefits) | | | | |
| 110 | Pension And Pensionary Benefits | 1276233339 | 1100000000 | 176233339 |
| ಉಳಿತಾಯ | | | | **176233339** |
| | | | | |
| III. ಸಾಮಾನ್ಯ ಆಡಳಿತ ವೆಚ್ಚಗಳು (General Administrative Expenses) | | | | |
| ವೆಚ್ಚಗಳಲ್ಲಿ ಹೆಚ್ಚುವರಿ | | | | |
| 123 | ಕಾನೂನು ವೆಚ್ಚ - Legal Expenses | 1,200,000 | 3,600,000 | 2,400,000 |
| 127 | ವಾಹನಗಳ ನಿರ್ವಹಣೆ Maintenance & Repairs of Vehicles | 5,000,000 | 5,300,000 | 300,000 |
| ಒಟ್ಟು | | | | **2,700,000** |
| ವೆಚ್ಚಗಳಲ್ಲಿ ಕಡಿತ | | | | |
| 111 | ಪ್ರಯಾಣ ಮತ್ತು ಸಭೆಯ ವೆಚ್ಚಗಳು T. A. And Meeting Expenses | 7,500,000 | 3,600,000 | 3,900,000 |
| 112 | ಬಾಡಿಗೆ ದರ ಮತ್ತು ತೆರಿಗೆ -Rent, Rates and Taxes | 500,000 | 100,000 | 400,000 |
| 115 | ಕಛೇರಿ ಸಾದಿಲ್ವಾರು - Office Contingencies | 10,000,000 | 8,000,000 | 2,000,000 |
| 121 | ಲೆಕ್ಕ ಪರಿಶೋಧನಾ ವೆಚ್ಚ – Audit Charges | 14,000,000 | 1,000,000 | 13,000,000 |

| Code No | ವಿವರಗಳು | 2023-24ನೇ ಸಾಲಿನ ಆಯವ್ಯಯ | 2023-24ನೇ ಸಾಲಿನ ಪರಿಷ್ಕೃತ ಅಂದಾಜು | ಹೆಚ್ಚುವರಿ/ಕಡಿಮೆ |
|---|---|---|---|---|
| 139 | ಮುದ್ರಣ ಯಂತ್ರಗಳ ನಿರ್ವಹಣೆ | 2,000,000 | 500,000 | 1,500,000 |
| 182 | ಲೇಖನ ಸಾಮಗ್ರಿಗಳ ದಾಸ್ತಾನು ಅಮಾನತ್ತು ಖಾತೆ-ಮೈವಿವಿಮು<br>Cost of Stat. Stock Suspense A/c-MUPP | 1,000,000 | - | 1,000,000 |
| 189 | ಇತರೆ ವೆಚ್ಚ - Miscellaneous Expenditure | 4,000,000 | 2,000,000 | 2,000,000 |
| 233 | ಕುಲಪತಿಗಳ ವಿವೇಚನಾ ಅವಕಾಶ<br>Vice Chancellor Discretionary Provision | 2,500,000 | - | 2,500,000 |
| | ಒಟ್ಟು | | | **26,300,000** |
| | ಉಳಿತಾಯ | | | **23,600,000** |
| | | | | |
| | **IV. ಭೋಧನೆ/ಸಂಶೋಧನೆ/ವಿಸ್ತರಣಾ ಚಟುವಟಿಕೆಗಳು Teaching / Research/ Extension Activates** | | | |
| | **ವೆಚ್ಚಗಳಲ್ಲಿ ಹೆಚ್ಚುವರಿ** | | | |
| 179 | ಸಾಮಾನ್ಯ ಸಾಂಸ್ಕೃತಿಕ ಚಟುವಟಿಕೆಗಳು (ವಿದ್ಯಾರ್ಥಿ ಚಟುವಟಿಕೆಗಳನ್ನು ಹೊರತುಪಡಿಸಿ)<br>General Cultural Activities (Excluding Students Activities) | 500,000 | 600,000 | 100,000 |
| | ಒಟ್ಟು | | | **100,000** |
| | **ವೆಚ್ಚಗಳಲ್ಲಿ ಕಡಿತ** | | | |
| 143 | ಪುಸ್ತಕಗಳು.ನಿಯತಕಾಲಿಕೆಗಳು - Books/ Journal | 2,550,000 | 1,250,000 | 1,300,000 |
| 146 | ಪ್ರಯೋಗಶಾಲೆ ರಾಸಾಯನಿಕ ಮತ್ತು ಕಿರು ಸಲಕರಣೆಗಳು<br>Lab Chemicals & Minor Equipment's | 8,700,000 | 3,000,000 | 5,700,000 |
| 148 | ವಿಚಾರಗೋಷ್ಠಿ ಮತ್ತು ಸಮ್ಮೇಳನಗಳು<br>Seminars & Conference | 1,850,000 | 650,000 | 1,200,000 |
| 247 | ಮಾನಸ ವಸ್ತುಪ್ರದರ್ಶನ - Manasa Exhibition | 5,000,000 | - | 5,000,000 |
| 261 | ಆದಾಯ ಯೋಜನೆ 'ಬಿ' (ವೇತನ)<br>PSFS Teaching/Non teaching Salary | 5,000,000 | - | 5,000,000 |
| 306 | DISTANCE EDUCATION LEARNING MATERIALS | 1,000,000 | - | 1,000,000 |
| 309 | DISTANCE EDUCATION CANTACT PROGRAMME | 500,000 | - | 500,000 |
| | ಒಟ್ಟು | | | **19,700,000** |
| | ಉಳಿತಾಯ | | | **19,600,000** |

| Code No | ವಿವರಗಳು | 2023-24ನೇ ಸಾಲಿನ ಆಯವ್ಯಯ | 2023-24ನೇ ಸಾಲಿನ ಪರಿಷ್ಕೃತ ಅಂದಾಜು | ಹೆಚ್ಚುವರಿ/ಕಡಿಮೆ |
|---|---|---|---|---|
| | **V. ವಿದ್ಯಾರ್ಥಿ ಕ್ಷೇಮಪಾಲನಾ ಕಾರ್ಯಕ್ರಮಗಳು Student Welfare Measures** | | | |
| | ವೆಚ್ಚಗಳಲ್ಲಿ ಹೆಚ್ಚುವರಿ | | | |
| 154 | ಪರಿಶಿಷ್ಟ ಜಾತಿ/ವರ್ಗದವರ ಉತ್ತಮೀಕರಣ Amelioration of SC/ST Students | 60,000,000 | 100,000,000 | 40,000,000 |
| 293 | ವಿದ್ಯಾರ್ಥಿ ನಿಲಯದ ಭೋಜನ ಮತ್ತು ಇತರೆ ಖರ್ಚು Boarding & Etc Charges | 60,000,000 | 90,000,000 | 30,000,000 |
| 308 | Cook Service Outsourcing Salary | 35,000,000 | 38,500,000 | 3,500,000 |
| | ಒಟ್ಟು | | | **73,500,000** |
| | ವೆಚ್ಚಗಳಲ್ಲಿ ಕಡಿತ | | | |
| 164 | ವಿಶ್ವವಿದ್ಯಾನಿಲಯ ಶಿಷ್ಯ ವೇತನ (ಸಾಮಾನ್ಯ) University Fellowship (General) | 500,000 | - | 500,000 |
| 265 | E-Books/Database/ Software/ Maintenance and Miscellaneous | 5,000,000 | 1,500,000 | 3,500,000 |
| 310 | BAR Council of India P | 2,000,000 | - | 2,000,000 |
| | ಒಟ್ಟು | | | **6,000,000** |
| | ಹೆಚ್ಚುವರಿ | | | **67,500,000** |
| | **VI. ಕ್ಯಾಂಪಸ್ ಅಭಿವೃದ್ಧಿ/ನಿರ್ವಹಣೆ (Campus Development/ Maintenance)** | | | |
| | ವೆಚ್ಚಗಳಲ್ಲಿ ಹೆಚ್ಚುವರಿ | | | |
| 130 | ಈಜುಕೊಳ ನಿರ್ವಹಣೆ Maintenance of Swimming Pool | 300,000 | 305,000 | 5,000 |
| 136 | ವಸತಿಗೃಹಗಳ ವಾರ್ಷಿಕ ನಿರ್ವಹಣೆ ಮತ್ತು ದುರಸ್ಥಿ Unv. Qrts. Maintenance & Renovation | 15,000,000 | 25,000,000 | 10,000,000 |
| 262 | ಸ್ವಚ್ಛತಾ ಸಿಬ್ಬಂದಿ ಹಾಗೂ ಸಫಾಯಿ ಕರ್ಮಾಚಾರಿ ನೌಕರರ ವೇತನ | 50,000,000 | 56,500,000 | 6,500,000 |
| 263 | ಭದ್ರತಾ ಸೇವೆ ಹೊರಗುತ್ತಿಗೆ ವೇತನ Security Services Out Source Salary | 65,000,000 | 78,000,000 | 13,000,000 |
| | ಒಟ್ಟು | | | **29,505,000** |
| | ವೆಚ್ಚಗಳಲ್ಲಿ ಕಡಿತ | | | |
| 116 | ಔಷಧಿ, ಎಕ್ಸ್-ರೇ ಇತ್ಯಾದಿಗಳ ವೆಚ್ಚ | 4,000,000 | 2,500,000 | 1,500,000 |
| 118 | ದೂರವಾಣಿ ಖರ್ಚು | 2,000,000 | 800,000 | 1,200,000 |
| 119 | ವಿದ್ಯುತ್ ಖರ್ಚು | 45,000,000 | 42,000,000 | 3,000,000 |
| 131 | ತೋಟಗಳ ನಿರ್ವಹಣೆ | 1,000,000 | 600,000 | 400,000 |
| | ಒಟ್ಟು | | | **6,100,000** |
| | ಹೆಚ್ಚುವರಿ | | | **23,405,000** |

| Code No | ವಿವರಗಳು | 2023-24ನೇ ಸಾಲಿನ ಆಯವ್ಯಯ | 2023-24ನೇ ಸಾಲಿನ ಪರಿಷ್ಕೃತ ಅಂದಾಜು | ಹೆಚ್ಚುವರಿ/ಕಡಿಮೆ |
|---|---|---|---|---|
| **VII. ಪರೀಕ್ಷಾ ಚಟುವಟಿಕೆಗಳು Examination Activities** | | | | |
| ವೆಚ್ಚಗಳಲ್ಲಿ ಹೆಚ್ಚುವರಿ | | | | |
| 111 | ಪ್ರಯಾಣ ಮತ್ತು ಸಭೆಯ ವೆಚ್ಚಗಳು<br>T. A. And Meeting Expenses | 5,000,000 | 62,500,000 | 57,500,000 |
| 115 | ಕಛೇರಿ ಸಾದಿಲ್ವಾರು<br>Office Contingencies | 600,000 | 630,000 | 30,000 |
| 192 | Custody of Question Papers | 1,500,000 | 1,750,000 | 250,000 |
| 307 | Examination Activities- Outsource | 5,000,000 | 32,500,000 | 27,500,000 |
| | | | ಒಟ್ಟು | 85,280,000 |
| ವೆಚ್ಚಗಳಲ್ಲಿ ಕಡಿತ | | | | |
| 105 | ಗಣಕ ಯಂತ್ರಗಳ ವಾರ್ಷಿಕ ನಿರ್ವಹಣೆ<br>Annual Maintenance (Computers) | 300,000 | 100,000 | 200,000 |
| 183 | Remuneration to Examiners | 50,000,000 | 42,000,000 | 8,000,000 |
| 189 | Miscellaneous Expenditure | 3,000,000 | 2,500,000 | 500,000 |
| 191 | Printing of Que. Papers & Stationery | 90,000,000 | 45,000,000 | 45,000,000 |
| 265 | Purchase of Computer Printers And Pep | 500,000 | - | 500,000 |
| 266 | Remn. Nonteaching/ Squad/Fuel Tax Charge | 3,000,000 | 2,550,000 | 450,000 |
| 303 | FCBCS Exam Activities | 600,000 | 200,000 | 400,000 |
| ಒಟ್ಟು | | | | **55,050,000** |
| ಹೆಚ್ಚುವರಿ | | | | **30,230,000** |
| ಒಟ್ಟಾರೆ ಉಳಿತಾಯ | | | | **120,398,339** |
| | | | **Round off** | **12.04 crore** |

ಮೇಲ್ಕಂಡಂತೆ ವಿಶ್ವವಿದ್ಯಾನಿಲಯದ ವಿಭಾಗ/ಕಛೇರಿಗಳು ಕೋರಿರುವಂತೆ ಹಾಗೂ ಅನಿವಾರ್ಯ ವೆಚ್ಚಗಳಿಗೆ ಮಾತ್ರ ಪರಿಷ್ಕರಿಸಿದ್ದು, 2023-24ನೇ ಸಾಲಿನ ಆಯವ್ಯಯ ಅಂದಾಜುಗಳ ವೆಚ್ಚ ರೂ.367.02 ಕೋಟಿಗಳಿಂದ ರೂ.354.98ಕೋಟಿಗಳಿಗೆ ಕಡಿಮೆ ಮಾಡಲಾಗಿದ್ದು, ವಿವಿಯ ಆರ್ಥಿಕ ಹಿತದೃಷ್ಟಿಯಿಂದ ಒಟ್ಟಾರೆಯಾಗಿ **ರೂ.12,04ಕೋಟಿ** ವೆಚ್ಚಗಳಷ್ಟು ವಿವಿಯು ಮಿತವ್ಯಯ ಸ್ಥಾಪಿಸಿರುತ್ತದೆ.

ಪ್ರಾಯೋಜಿತ ಕಾರ್ಯಕ್ರಮಗಳು, ಪಿಎಸ್‌ಎಫ್‌ಎಸ್ ಹಾಗೂ ಇನ್ನಿತರ ಯೋಜನೆಗಳ ಖಾತೆಯ ಆಯವ್ಯಯ ಅಂದಾಜುಗಳಲ್ಲಿ ಪರಿಷ್ಕೃತಗೊಂಡಿರುವ ಶೀರ್ಷಿಕೆ ವಿವರಗಳು

| ಪ್ರಾಯೋಜಿತ ಕಾರ್ಯಕ್ರಮಗಳು(ಎಸ್‌ಪಿಎಸ್)-03 | | | | |
|---|---|---|---|---|
| ಕೋಡ್ ಸಂಖ್ಯೆ | ಲೆಕ್ಕ ಶೀರ್ಷಿಕೆಗಳು | 2023-24ನೇ ಸಾಲಿನ ಆಯವ್ಯಯ | 2023-24ನೇ ಸಾಲಿನ ಪರಿಷ್ಕೃತ ಅಂದಾಜು | ಹೆಚ್ಚುವರಿ |
| | ಆದಾಯ (RECEIPTS) | | | |
| 03 | ಯುಜಿಸಿ | 20,000,000 | 7,500,000 | **12,500,000** |
| | | | **Total** | **12,500,000** |
| | | | | **ಕಡಿತ** |
| 04 | ಭಾರತ ಸರ್ಕಾರ ಯೋಜನೆಗಳು - GOI | 37,500,000 | 46,500,000 | **9,000,000** |
| 54 | ಬಡ್ಡಿ -Interest | 2,500,000 | 6,000,000 | **3,500,000** |
| 532 | ಹಿರಿಯ ಶಿಷ್ಯ ವೇತನ | 20,000,000 | 50,000,000 | **30,000,000** |
| | | | **Total** | **42,500,000** |
| | ವೆಚ್ಚ - EXPENDITURE | | | **ಹೆಚ್ಚುವರಿ** |
| 102 | ಅಧ್ಯಾಪಕೇತರ ಸಿಬ್ಬಂದಿ ವೇತನ | 1,000,000 | 2,500,000 | **1,500,000** |
| 148 | ಕಾರ್ಯಗಾರ ಮತ್ತು ವಿಚಾರ ಗೋಷ್ಠಿ | 1,500,000 | 3,000,000 | **1,500,000** |
| | | | **Total** | **3,000,000** |
| | | | | **ಕಡಿತ** |
| 101 | ಅಧ್ಯಾಪಕ ಸಿಬ್ಬಂದಿ ವೇತನ | 2,000,000 | 1,000,000 | **1,000,000** |
| 103 | ಗಳಿಕೆ ರಜೆ ನಗದೀಕರಣ | 1,000,000 | 500,000 | **500,000** |
| 111 | ಪ್ರಯಾಣ ಮತ್ತು ಸಭೆ ವೆಚ್ಚ | 1,000,000 | 500,000 | **500,000** |
| 114 | ಪೀಠೋಪಕರಣ ಮತ್ತು ಸಾಧನ ಸಲಕರಣೆಗಳು | 1,000,000 | 100,000 | **900,000** |
| 115 | ಕಛೇರಿ ಸಾದಿಲ್ವಾರು | 5,000,000 | 2,500,000 | **2,500,000** |
| 118 | ದೂರವಾಣಿ ಖರ್ಚು | 50,000 | 50,000 | **-** |
| 119 | ವಿದ್ಯುತ್ ಖರ್ಚು | 500,000 | 100,000 | **400,000** |
| 155 | ಕಟ್ಟಡ ಕಾಮಗಾರಿ | 20,000,000 | 500,000 | **19,500,000** |
| 198 | ಗೌರವ ಧನ | 1,000,000 | 300,000 | **700,000** |
| 228 | ತಾತ್ಕಾಲಿಕ ಅಧ್ಯಾಪಕರ ವೇತನ | 5,000,000 | 4,000,000 | **1,000,000** |
| 229 | ತಾತ್ಕಾಲಿಕ ಅಧ್ಯಾಪಕೇತರರ ವೇತನ | 5,150,000 | 1,500,000 | **3,650,000** |
| 539 | ಉಳಿದಿರುವ ಅನುದಾನವನ್ನು ಅನುದಾನಿತ ಸಂಸ್ಥೆಗೆ ಹಿಂದಿರುಗಿಸುವುದು | 7,000,000 | 5,000,000 | **2,000,000** |
| 541 | ಪಜಾ/ಪಪಂ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ | 400,000 | 50,000 | **350,000** |
| | | | **Total** | **33,000,000** |

## ದತ್ತಿ ನಿಧಿ - 16
## Endowment - 16

| ಕೋಡ್ ಸಂಖ್ಯೆ | ಲೆಕ್ಕ ಶೀರ್ಷಿಕೆಗಳು | 2023-24ನೇ ಸಾಲಿನ ಆಯವ್ಯಯ | 2023-24ನೇ ಸಾಲಿನ ಪರಿಷ್ಕೃತ ಅಂದಾಜು | ಹೆಚ್ಚುವರಿ |
|---|---|---|---|---|
| ಆದಾಯ (RECEIPTS) | | | | |
| 54 | ಬಡ್ಡಿ / Interest on Bank Depostis/Investments | 25,000,000 | 31,000,000 | 6,000,000 |
| | | | **Total** | **6,000,000** |
| | | | | ಕಡಿತ |
| 8 | ಕರ್ನಾಟಕ ಸರ್ಕಾರ | 1,000,000 | 100,000 | **900,000** |
| 61 | ಚಿನ್ನದ ಪದಕ ಮತ್ತು ನಗದು | 2,000,000 | 1,000,000 | **1,000,000** |
| | | | **Total** | **1,900,000** |
| ವೆಚ್ಚ - EXPENDITURE | | | | ಹೆಚ್ಚುವರಿ |
| 602 | ನಗದು ಬಹುಮಾನ Cash Prize | 400,000 | 1,500,000 | **1,100,000** |
| | | | **Total** | **1,100,000** |
| | | | | ಕಡಿತ |
| 601 | ಚಿನ್ನದ ಪದಕ Gold Medal | 1,000,000 | 500,000 | **500,000** |
| 609 | ವಿಶ್ವವಿದ್ಯಾನಿಲಯದ ನೌಕರರಿಗೆ ವೈದ್ಯಕೀಯ ಸಹಾಯ | 100,000 | - | **100,000** |
| 610 | ಪೀಠಗಳ ಸಂದರ್ಶಕ ಪ್ರಾಧ್ಯಾಪಕರಿಗೆ 3 ಗೌರವ ಸಂಭಾವನೆ<br>Honorarium visiting Prof Of Chairs | 575,000 | 75,000 | **500,000** |
| | | | **Total** | **1,100,000** |

## ಮೂಲಸೌಕರ್ಯ ಅಭಿವೃದ್ಧಿ ನಿಧಿ – 20

## INFRASTRUCTURE DEVELOPMENT FUND - 20

| ಕೋಡ್ ಸಂಖ್ಯೆ | ಲೆಕ್ಕ ಶೀರ್ಷಿಕೆಗಳು | 2023–24ನೇ ಸಾಲಿನ ಆಯವ್ಯಯ | 2023–24ನೇ ಸಾಲಿನ ಪರಿಷ್ಕೃತ ಅಂದಾಜು | ಹೆಚ್ಚುವರಿ |
|---|---|---|---|---|
| | ಆದಾಯ (RECEIPTS) | | | |
| 54 | ಬಡ್ಡಿ / Interest | 100,000 | 540,000 | **440,000** |
| | | | **Total** | **440,000** |
| | | | | **ಕಡಿತ** |
| 39 | ಮೂಲಸೌಕರ್ಯ ಅಭಿವೃದ್ಧಿ ಶುಲ್ಕ | 60,000,000 | 53,600,000 | **6,400,000** |
| | | | **Total** | **6,400,000** |
| | **ವೆಚ್ಚ – EXPENDITURE** | | | **ಹೆಚ್ಚುವರಿ** |
| 189 | ಇತರೆ ವೆಚ್ಚಗಳು | 5,000,000 | 7,000,000 | **2,000,000** |
| | | | **Total** | **2,000,000** |
| | | | | **ಕಡಿತ** |
| 314 | ಮೂಲ ಸೌಕರ್ಯ ಅಭಿವೃದ್ಧಿ | 20,000,000 | 10,020,000 | **9,980,000** |
| 114 | ಪೀಠೋಪಕರಣ /ಉಪಕರಣ | 10,000,000 | 100,000 | **9,900,000** |
| 155 | Providing Facilities to Adoption Schools/ Infrastructure/Construction Activities/Furnishing | 50,000,000 | 5,500,000 | **44,500,000** |
| | | | **Total** | **64,380,000** |

## ಕನ್ನಡ ಪುಸ್ತಕ ಮುದ್ರಣ ಮತ್ತು ಪ್ರಕಟಣೆ – 23

## KANNADA BOOKS PRINTING & PUBLICATIONS - 23

| ಕೋಡ್ ಸಂಖ್ಯೆ | ಲೆಕ್ಕ ಶೀರ್ಷಿಕೆಗಳು | 2023–24ನೇ ಸಾಲಿನ ಆಯವ್ಯಯ | 2023–24ನೇ ಸಾಲಿನ ಪರಿಷ್ಕೃತ ಅಂದಾಜು | ಹೆಚ್ಚುವರಿ |
|---|---|---|---|---|
| | ಆದಾಯ (RECEIPTS) | | | |
| 41 | ಪ್ರಕಟಣೆಯ ಮಾರಾಟ ಆದಾಯ<br>SALE PROCEEDING OF PUBLICATION | 50,000 | 100,000 | **50,000** |
| | | | **Total** | **50,000** |

## ಪ್ರಸಾರಾಂಗ ಆವರ್ತನ ನಿಧಿ – 32

## PRASARANGA REVOLVING FUND - 32

| | ಲೆಕ್ಕ ಶೀರ್ಷಿಕೆಗಳು | 2023–24ನೇ ಸಾಲಿನ ಆಯವ್ಯಯ | 2023–24ನೇ ಸಾಲಿನ ಪರಿಷ್ಕೃತ ಅಂದಾಜು | ಹೆಚ್ಚುವರಿ |
|---|---|---|---|---|
| | ಆದಾಯ (RECEIPTS) | | | |
| 41 | ಪ್ರಕಟಣೆಯ ಮಾರಾಟ ಆದಾಯ | 3,000,000 | 4,850,000 | **1,850,000** |
| | | | **Total** | **1,850,000** |
| | **ವೆಚ್ಚ – EXPENDITURE** | | | **ಹೆಚ್ಚುವರಿ** |
| 144 | ಪ್ರಕಟಣೆಗಳು<br>PUBLICATIONS | 3,000,000 | 4,200,000 | **1,200,000** |
| 189 | MISC | | 256,000 | **256,000** |
| | | | **Total** | **1,456,000** |

## ಸಹೋದ್ಯಮ ಕೋರ್ಸುಗಳು – 46

## COLLABORATION COURSES-46

| ಕೋಡ್ ಸಂಖ್ಯೆ | ಲೆಕ್ಕ ಶೀರ್ಷಿಕೆಗಳು | 2023-24ನೇ ಸಾಲಿನ ಆಯವ್ಯಯ | 2023-24ನೇ ಸಾಲಿನ ಪರಿಷ್ಕೃತ ಅಂದಾಜು | ಹೆಚ್ಚುವರಿ |
|---|---|---|---|---|
| | ಆದಾಯ (RECEIPTS) | | | |
| 23 | ಪ್ರವೇಶ ಶುಲ್ಕ/ಬೋಧನ ಶುಲ್ಕ ADMISSION FEE/TUTION FEE | 40,000,000 | 65,000,000 | **25,000,000** |
| 54 | ಬಡ್ಡಿ Interest on Bank Depostis/Investments | 200,000 | 600,000 | **400,000** |
| | | | **Total** | **25,400,000** |
| | | | | ಕಡಿತ |
| 31 | ಪರೀಕ್ಷಾ ಶುಲ್ಕ – EXAMINATION FEE | 35,000,000 | 17,000,000 | **18,000,000** |
| | | | **Total** | **18,000,000** |
| | ವೆಚ್ಚ – EXPENDITURE | | | ಹೆಚ್ಚುವರಿ |
| 155 | Establishing Constituent Colleges Given By Govt./Construction Activities/Furnishing | | 40,800,000 | **40,800,000** |
| 314 | ಮೂಲ ಸೌಕರ್ಯ ಅಭಿವೃದ್ಧಿ INFRASTRUCTURE DEVELOPMENT | 50,000,000 | 55,400,000 | **5,400,000** |
| | | | **Total** | **46,200,000** |
| | | | | ಕಡಿತ |
| 114 | ಪೀಠೋಪಕರಣ/ ಉಪಕರಣ FURNITURE / EQUIPMENTS | 1,000,000 | - | **1,000,000** |
| 135 | ಕಿರು ಕಾಮಗಾರಿ – MINOR WORKS | 100,000,000 | - | **100,000,000** |
| 189 | ಇತರೆ ವೆಚ್ಚಗಳು | 5,000,000 | 2,100,000 | **2,900,000** |
| 198 | ಗೌರವ ಧನ – HONORARIUM | 3,000,000 | 1,700,000 | **1,300,000** |
| 315 | ವಿಜ್ಞಾನ ಭವನಕ್ಕೆ ಶಿಷ್ಯ ವೇತನ VIGNAN BHAVAN FELLOWSHIP | 2,000,000 | - | **2,000,000** |
| | | | **Total** | **107,200,000** |

## ಮಾಹಿತಿ ಮತ್ತು ಮೂಲಭೂತ ಸೌಕರ್ಯ ಅಭಿವೃದ್ಧಿ ನಿಧಿ – 47

## INFORMATION INFRASTRUCTURE DEVELOPMENT FUND - 47

| ಕೋಡ್ ಸಂಖ್ಯೆ | ಲೆಕ್ಕ ಶೀರ್ಷಿಕೆಗಳು | 2023-24ನೇ ಸಾಲಿನ ಆಯವ್ಯಯ | 2023-24ನೇ ಸಾಲಿನ ಪರಿಷ್ಕೃತ ಅಂದಾಜು | ಹೆಚ್ಚುವರಿ |
|---|---|---|---|---|
| | ಆದಾಯ (RECEIPTS) | | | |
| 64 | ಮಾಹಿತಿ ಮತ್ತು ಮೂಲಭೂತ ಸೌಕರ್ಯ ಅಭಿವೃದ್ಧಿ ಶುಲ್ಕ | 10,000,000 | 21,500,000 | **11,500,000** |
| | | | **Total** | **11,500,000** |
| | ವೆಚ್ಚ – EXPENDITURE | | | ಹೆಚ್ಚುವರಿ |
| 189 | ಇತರೆ ವೆಚ್ಚಗಳು | 20,000 | 100,000 | **80,000** |
| | | | **Total** | **80,000** |

| | | | | ಕಡಿತ |
|---|---|---|---|---|
| 311 | ಕ್ಯಾಂಪಸ್ವೈಡ್ ಇಂಟೆಲಿಜೆಂಟ್ ಕಣ್ಗಾವಲು ವ್ಯವಸ್ಥೆ | 1,000,000 | - | **1,000,000** |
| 312 | ಕ್ಯಾಂಪಸ್ವೈಡ್ ಇಂಟೆಲಿಜೆಂಟ್ ವೈರ್ಲೆಸ್ ಸಿಸ್ಟಮ್ | 500,000 | - | **500,000** |
| 313 | ಶ್ರೇಣಿ 3 ದತ್ತಾಂಶ ಕೇಂದ್ರ TIER 3 DATA CENTRE | 500,000 | - | **500,000** |
| | | | **Total** | **2,000,000** |

**ಇನ್ಸ್ಟಿಟ್ಯೂಷನ್ ಆಫ್ ಎಕ್ಸಲೆನ್ಸ್ - 53**

| | ಲೆಕ್ಕ ಶೀರ್ಷಿಕೆಗಳು | 2023-24ನೇ ಸಾಲಿನ ಆಯವ್ಯಯ | 2023-24ನೇ ಸಾಲಿನ ಪರಿಷ್ಕೃತ ಅಂದಾಜು | ಹೆಚ್ಚುವರಿ |
|---|---|---|---|---|
| | ಆದಾಯ (RECEIPTS) | | | |
| 37 | Special Fee | | 1,500,000 | **1,500,000** |
| | | | **Total** | **1,500,000** |

## SCHOOL OF PLANNING AND ARCHITECTURE-57

| ಕೋಡ್ ಸಂಖ್ಯೆ | ಲೆಕ್ಕ ಶೀರ್ಷಿಕೆಗಳು | 2023-24ನೇ ಸಾಲಿನ ಆಯವ್ಯಯ | 2023-24ನೇ ಸಾಲಿನ ಪರಿಷ್ಕೃತ ಅಂದಾಜು | ಕಡಿತ |
|---|---|---|---|---|
| | ಆದಾಯ (RECEIPTS) | | | |
| 23 | ಪ್ರವೇಶಾತಿ/ಬೋಧನ/ಡೆವಲಪ್‌ಮೆಂಟ್ ಶುಲ್ಕ | 30,000,000 | 20,500,000 | **9,500,000** |
| 54 | ಬಡ್ಡಿ - Interest on Bank Depostis/Investments | 500,000 | 350,000 | **150,000** |
| 60 | ಇತರೆ ಆದಾಯ - Miscellaneous Receipts | 50,000 | - | **50,000** |
| | | | **Total** | **200,000** |
| | **ವೆಚ್ಚ - EXPENDITURE** | | | **ಹೆಚ್ಚುವರಿ** |
| 119 | ವಿದ್ಯುತ್ ಖರ್ಚು - Electricity Charges | 500,000 | 550,000 | **50,000** |
| 168 | ಠೇವಣಿಗಳ ಮರುಪಾವತಿ Refund of Deposits/Revaluation/Others | - | 100,000 | **100,000** |
| | | | **Total** | **150,000** |
| | | | | **ಕಡಿತ** |
| 114 | ಪೀಠೋಪಕರಣ/ ಉಪಕರಣ FURNITURE / EQUIPMENTS | 1,000,000 | 100,000 | **900,000** |
| 115 | ಕಛೇರಿ ಸಾದಿಲ್ವಾರು - Office Contingenicies | 700,000 | 100,000 | **600,000** |
| 120 | ಜಾಹಿರಾತು ಖರ್ಚು - Advertisement | 1,000,000 | 100,000 | **900,000** |
| 189 | ಇತರೆ ವೆಚ್ಚಗಳು - Miscellaneious Expenditure | 500,000 | 300,000 | **200,000** |
| 198 | ಗೌರವ ಧನ - HONORARIUM | 100,000 | 100,000 | **-** |
| 228 | ತಾತ್ಕಾಲಿಕ ಅಧ್ಯಾಪಕರ ವೇತನ | 30,000,000 | 20,000,000 | **10,000,000** |
| | | | **Total** | **12,600,000** |

## ಆನ್‌ಲೈನ್ ಪ್ರೋಗ್ರಾಮ್ - 62

## Online Programme - 62

| ಕೋಡ್ ಸಂಖ್ಯೆ | ಲೆಕ್ಕ ಶೀರ್ಷಿಕೆಗಳು | 2023-24ನೇ ಸಾಲಿನ ಆಯವ್ಯಯ B | 2023-24ನೇ ಸಾಲಿನ ಪರಿಷ್ಕೃತ ಅಂದಾಜು | ಹೆಚ್ಚುವರಿ |
|---|---|---|---|---|
| ಆದಾಯ (RECEIPTS) | | | | |
| 54 | ಬಡ್ಡಿ Interest | 100,000 | 750,000 | **650,000** |
| 91 | Receipts From Escrow | 250,000 | 30,000,000 | **29,750,000** |
| 96 | Receipts From Reserve | 150,000 | 20,000,000 | **19,850,000** |
| | | | **Total** | **50,250,000** |

## ಶತಮಾನೋತ್ಸವ ನಿಧಿ - 68

## Centenary Fund - 68

| ಕೋಡ್ ಸಂಖ್ಯೆ | ಲೆಕ್ಕ ಶೀರ್ಷಿಕೆಗಳು HEADS OF ACCOUNTS | 2023-24ನೇ ಸಾಲಿನ ಆಯವ್ಯಯ Budget Estimates 2023-24 | 2023-24ನೇ ಸಾಲಿನ ಪರಿಷ್ಕೃತ ಅಂದಾಜು Revised Budget Estimates 2023-24 | ಹೆಚ್ಚುವರಿ |
|---|---|---|---|---|
| | ಆದಾಯ (RECEIPTS) | | | |
| 54 | ಬಡ್ಡಿ - Interest | 25,000 | 50,000 | **25,000** |
| | | | **Total** | **25,000** |

## ನಿವೃತ್ತಿ ವೇತನ ನಿಧಿ - 8

## PENSION FUND - 8

| ಕೋಡ್ ಸಂಖ್ಯೆ | ಲೆಕ್ಕ ಶೀರ್ಷಿಕೆಗಳು | 2023-24ನೇ ಸಾಲಿನ ಆಯವ್ಯಯ | 2023-24ನೇ ಸಾಲಿನ ಪರಿಷ್ಕೃತ ಅಂದಾಜು | ಹೆಚ್ಚುವರಿ |
|---|---|---|---|---|
| | ಆದಾಯ (RECEIPTS) | | | |
| 54 | ಬಡ್ಡಿ Interest on Bank Depostis/Investments | 200,000 | 800,000 | **600,000** |
| | | | **Total** | **600,000** |

| Universirty School of Enginering-A/c no 40567064223 | | | | |
|---|---|---|---|---|
| | ಲೆಕ್ಕ ಶೀರ್ಷಿಕೆಗಳು HEADS OF ACCOUNTS | 2023–24ನೇ ಸಾಲಿನ ಆಯವ್ಯಯ Budget Estimates 2023-24 | 2023–24ನೇ ಸಾಲಿನ ಪರಿಷ್ಕೃತ ಅಂದಾಜು Revised Budget Estimates 2023-24 | ಹೆಚ್ಚುವರಿ |
| **2** | ಆದಾಯ (RECEIPTS) | | | |
| 23 | ಪ್ರವೇಶ ಶುಲ್ಕ – Admission Fee | 70,000,000 | 83,000,000 | **13,000,000** |
| 60 | misc | | 25,000 | **25,000** |
| 54 | interest | 500,000 | 750,000 | **250,000** |
| | | | **Total** | **13,275,000** |
| **6** | ವೆಚ್ಚ – EXPENDITURE | | | ಹೆಚ್ಚುವರಿ |
| 168 | Refund | - | 1,000,000 | **1,000,000** |
| 189 | Misc | 400,000 | 505,000 | **105,000** |
| | | | **Total** | **1,105,000** |
| | | | | ಕಡಿತ |
| 228 | Temp-Teaching/guest faculity | 20,000,000 | 17,000,000 | **3,000,000** |
| 229 | Temp-Non-Teaching | 5,805,000 | 2,000,000 | **3,805,000** |
| 300 | University functions/ftreshers day/misc | 500,000 | 300,000 | **200,000** |
| | | | **Total** | **7,005,000** |

ವಿಶ್ವವಿದ್ಯಾನಿಲಯದ 2023–24ನೇ ಸಾಲಿನ ಆಯವ್ಯಯ ಅಂದಾಜುಗಳಲ್ಲಿ ಅನಿವಾರ್ಯವಾಗಿ ಮತ್ತು ವಿವಿಯ ಆರ್ಥಿಕ ಅಗತ್ಯತೆಗಳಿಗನುಸಾರ ಪುಟ ಸಂಖ್ಯೆ 1 ರಿಂದ 12 ರವರೆಗೆ(ಈ ಪುಟ ಸೇರಿದಂತೆ) ಪರಿಷ್ಕರಿಸಲಾಗಿರುವ ವಿಷಯವನ್ನು ದಿನಾಂಕ 12–06–2024ರಂದು ನಡೆದ **"ಸಿಂಡಿಕೇಟ್"** ಸಭೆಯ ಅವಗಾಹನೆಗಾಗಿ ಮತ್ತು ಅನುಸಮರ್ಥನೆಗಾಗಿ ಮಂಡಿಸಲಾಗಿದ್ದು, ಸದರಿ ಸಭೆಯು ಈ ವಿಷಯವನ್ನು ಮುಂದೂಡಲಾಯಿತು. ಆದ್ದರಿಂದ ಈ ವಿಷಯವನ್ನು **"ಸಿಂಡಿಕೇಟ್"** ಸಭೆಯ ಅವಗಾಹನೆಗಾಗಿ ಮತ್ತು ಅನುಸಮರ್ಥನೆಗಾಗಿ ಮರು ಮಂಡಿಸಲಾಗಿದೆ.

Subject No. 2024/3.23



# 2024–2025ನೇ ಆರ್ಥಿಕ ಸಾಲಿನ ಮೈಸೂರು ವಿಶ್ವವಿದ್ಯಾನಿಲಯದ ಆಯವ್ಯಯ ಅಂದಾಜುಗಳ "ಕರಡು" ಪಟ್ಟಿ (ಅನುಬಂಧ–1)ಯನ್ನು "ಸಿಂಡಿಕೇಟ್"ಸಭೆಯ ಅನುಮೋದನೆಗಾಗಿ

***

ನಿರೀಕ್ಷಿತ ಆದಾಯಗಳ ವಿವರ :–

2024–25ನೇ ಸಾಲಿನ ಮೈಸೂರು ವಿಶ್ವವಿದ್ಯಾನಿಲಯದ ಆಯವ್ಯಯ ಅಂದಾಜಿನಲ್ಲಿ ಖಾಯಂ ಸಿಬ್ಬಂದಿ ವೇತನ ಮತ್ತು ಪಿಂಚಣಿಗಳ ಅನುದಾನದ ಕುರಿತಾಗಿ ರಾಜ್ಯ ಸರ್ಕಾರದಿಂದ ಒಟ್ಟಾರೆ **ರೂ.171,78,60,000/–** (ವೇತನಾನುದಾನ ರೂ.121,78,60,000/– ಮತ್ತು ಪಿಂಚಣಿ ಅನುದಾನ ರೂ.50,00,00,000–00)ಗಳು ಮಂಜೂರಾಗಿರುತ್ತದೆ. ಪ.ಜಾ/ಪ.ವರ್ಗದ ವಿದ್ಯಾರ್ಥಿಗಳಿಗೆ 2024–25ನೇ ಸಾಲಿಗೆ ರೂ.3,00,00,000–00ಗಳ ಅನುದಾನ ಬಿಡುಗಡೆಯನ್ನು ಸಮಾಜ ಕಲ್ಯಾಣ ಇಲಾಖೆ, ರಾಜ್ಯ ಸರ್ಕಾರದಿಂದ ನಿರೀಕ್ಷಿಸಿ **ಒಟ್ಟಾರೆ ರೂ.174,78,60,000/–**ಗಳನ್ನು ರಾಜ್ಯ ಸರ್ಕಾರದ ಆದಾಯವಾಗಿ ಪರಿಗಣಿಸಲಾಗಿದೆ.

ಆಂತರಿಕ ಸಂಪನ್ಮೂಲಗಳಾದ ಪ್ರವೇಶ, ನೋಂದಣಿ, ಸಂಯೋಜನೆ ಹಾಗೂ ಇನ್ನಿತರ ಶುಲ್ಕಗಳಿಂದ ರೂ.42,00,00,000/–ಗಳನ್ನು, ಸ್ಕೀಂ 'ಬಿ' ಕೋರ್ಸ್‌ಗಳಿಂದ ರೂ.3,50,00,000/–ಗಳನ್ನು, ಪರೀಕ್ಷಾ ಚಟುವಟಿಕೆಗಳಿಂದ ರೂ.45,00,00,000/–ಗಳನ್ನು, ವಿಶ್ವವಿದ್ಯಾನಿಲಯದ ವಿವಿಧ ಆಸ್ತಿ ವಸತಿ ಗೃಹಗಳಿಂದ ರೂ.3,00,00,000/–ಗಳನ್ನು ಹಾಗೂ ಇತರೆ ಮೂಲಗಳಿಂದ ರೂ6,00,00,000/–ಗಳನ್ನು ನಿರೀಕ್ಷಿಸಲಾಗಿದ್ದು, ಒಟ್ಟಾರೆಯಾಗಿ **ರೂ.99.50,00,000/–**ಗಳು ನಿರೀಕ್ಷಿತ ಆಂತರಿಕ ಆದಾಯವಾಗಿರುತ್ತದೆ. 2023–24ನೇ ಸಾಲಿನ ಪರಿಷ್ಕೃತ ಆಯವ್ಯಯ ಅಂದಾಜುಗಳನ್ವಯ ರೂ.3,10,80,628/–ಗಳು ಉಳಿತಾಯವಾಗಲಿದ್ದು, ಸದರಿ ಮೊಬಲಗನ್ನು ಆರಂಭಿಕ ಶಿಲ್ಕು ಎಂದು ಪರಿಗಣಿಸಲಾಗಿದೆ **(2023–24ನೇ ಸಾಲಿನಲ್ಲಿ ವೆಚ್ಚಗಳನ್ನು ನಿಯಂತ್ರಿಸಲಾಗಿದ್ದು ಮತ್ತು ರೂ.52,00,00,000/–ಗಳನ್ನು ಪಿಂಚಣಿ ಕಾರ್ಪಸ್ ನಿಧಿಯಿಂದ ವರ್ಗಾಯಿಸಿ ಪಾವತಿಸಲಾದ ಕಾರಣ ರೂ.3,10,80,628/–ಗಳು ಉಳಿತಾಯವಾಗುತ್ತದೆ)**. 2024–25ನೇ ಸಾಲಿನಲ್ಲಿ ಒಟ್ಟಾರೆಯಾಗಿ **ರೂ.277,39,40,628/–** ಗಳ ಆದಾಯವನ್ನು ನಿರೀಕ್ಷಿಸಲಾಗಿದ್ದು ಈ ಕೆಳಕಂಡಂತೆ ವಿವರಿಸಲಾಗಿದೆ.

| (ಅ) | ಕ್ರ ಸಂ. | 2024–25ರಲ್ಲಿ ಸರ್ಕಾರದಿಂದ ಬಿಡುಗಡೆಯಾಗುವ ಅನುದಾನದ ವಿವರ | ಮೊಬಲಗು (ರೂ. ಕೋಟಿಗಳಲ್ಲಿ) |
|---|---|---|---|
| | 1. | ವೇತನಾನುದಾನ | 121.78 |
| | 2. | ಪಿಂಚಣಿ ಅನುದಾನ | 50.00 |
| | 3. | ಸಮಾಜ ಕಲ್ಯಾಣ ಇಲಾಖೆ, ರಾಜ್ಯ ಸರ್ಕಾರದಿಂದ ನಿರೀಕ್ಷಣೆ (ಪ.ಜಾ/ಪ.ವರ್ಗದ ವಿದ್ಯಾರ್ಥಿಗಳಿಗೆ ಅನುದಾನ, ವಿದ್ಯಾರ್ಥಿ ನಿಲಯದ ಭೋಜನ ಶುಲ್ಕ,ಇತ್ಯಾದಿ) | 3.00 |
| | | **ಒಟ್ಟು** | **174.78** |
| **(ಆ)** | **ಕ್ರ ಸಂ.** | **2024–25ರಲ್ಲಿ ವಿಶ್ವವಿದ್ಯಾನಿಲಯದ ನಿರೀಕ್ಷಿತ ಆಂತರಿಕ ಆದಾಯದ ವಿವರ** | **ಮೊಬಲಗು (ರೂ. ಕೋಟಿಗಳಲ್ಲಿ)** |
| | 1. | ಪ್ರವೇಶ, ನೋಂದಣಿ, ಸಂಯೋಜನ ಹಾಗೂ ಇನ್ನಿತರ ಶುಲ್ಕಗಳು | 42.00 |
| | 2. | ಸ್ಕೀಂ "ಬಿ" ಕೋರ್ಸುಗಳಿಂದ | 3.50 |
| | 3. | ಪರೀಕ್ಷಾ ಚಟುವಟಿಕೆಗಳಿಂದ | 45.00 |
| | 4. | ವಿ.ವಿ.ಯ ವಿವಿಧ ಆಸ್ತಿಗಳಿಂದ ಮತ್ತು ವಸತಿ ಗೃಹಗಳ ಆದಾಯದಿಂದ | 3.00 |
| | 5. | ಇತರೆ ಮೂಲಗಳಿಂದ | 6.00 |
| | | **ಒಟ್ಟು** | **99.50** |
| (ಇ) | | **ಆರಂಭ ಶಿಲ್ಕು** | **3.11** |
| | | **ಒಟ್ಟು (ಅ) + (ಆ) + (ಇ)** | **277.39** |

ಪು.ತಿ.ನೋ.

-121-



<u>ನಿರೀಕ್ಷಿತ ವೆಚ್ಚಗಳ ವಿವರ:-</u> ನಮ್ಮ ಪ್ರತಿಷ್ಠಿತ ಮೈಸೂರು ವಿಶ್ವವಿದ್ಯಾನಿಲಯವು 108 ವಸಂತಗಳನ್ನು ಪೂರೈಸಿ, 109ನೇ ವರ್ಷಕ್ಕೆ ಕಾಲಿಟ್ಟಿದ್ದು, ಸುಮಾರು 1852 ಪಿಂಚಣಿ/ಕುಟುಂಬ ಪಿಂಚಣಿದಾರರಿದ್ದು, ಪಿಂಚಣಿ ಸೌಲಭ್ಯಗಳನ್ನು 2024-25ನೇ ಸಾಲಿಗೆ ಪಡೆಯಲಿದ್ದಾರೆ. 2023-24ರಲ್ಲಿ 1802 ಪಿಂಚಣಿದಾರಿದ್ದು, 2024-25ರಲ್ಲಿ ಪಿಂಚಣಿದಾರರ ಸಂಖ್ಯೆ 1852ಆಗಲಿದ್ದು, ಪ್ರಸ್ತುತ ಸಾಲಿನಲ್ಲಿ 50 ಉದ್ಯೋಗಿಗಳು (20 ಬೋಧಕರು ಮತ್ತು 30 ಬೋಧಕೇತರರು) ನಿವೃತ್ತರಾಗುತ್ತಿದ್ದಾರೆ. ಆದ ಕಾರಣ 2024-25ನೇ ಸಾಲಿಗೆ ಪಿಂಚಣಿ ಬಾಬ್ತಿಗಾಗಿ ಅಂದಾಜು ವೆಚ್ಚ **ರೂ.120.00** ಕೋಟಿಗಳನ್ನು ನಿಗಧಿಪಡಿಸಲಾಗಿದೆ.

2024-25ನೇ ಸಾಲಿಗೆ ವಿಶ್ವವಿದ್ಯಾನಿಲಯದ ಖಾಯಂ ಉದ್ಯೋಗಿಗಳ ವೇತನ ಭತ್ಯೆಗಳಿಗಾಗಿ ಸರ್ಕಾರವು ರೂ.121,78,60,000/-ಗಳನ್ನು ನಿಗದಿಪಡಿಸಲಾಗಿದ್ದು, ಸರ್ಕಾರವೇ ಹೆಚ್‌ಆರ್‌ಎಂಎಸ್ ಪೋರ್ಟಲ್ ಮುಖಾಂತರ ನೇರವಾಗಿ ಖಾಯಂ ಉದ್ಯೋಗಿಗಳಿಗೆ ವೇತನಗಳನ್ನು ಪಾವತಿಸುತ್ತದೆ. ಇನ್ನಿತ್ತರ ವೇತನ ಭತ್ಯೆಗಳು, ಪಿಂಚಣಿ, ಹಾಗೂ ಸಾಮಾನ್ಯ ಆಡಳಿತ ವೆಚ್ಚಗಳಿಗಾಗಿ 2024-25ನೇ ಸಾಲಿಗೆ **ಒಟ್ಟು ರೂ.357.74 ಕೋಟಿಗಳಿಗೆ** ನಿಗಧಿಪಡಿಸಿಲಾಗಿದ್ದು ವೆಚ್ಚಗಳ ವಿವರಗಳನ್ನು ಈ ಕೆಳಕಂಡಂತೆ ವಿವರಿಸಲಾಗಿದೆ.

| (ಈ) | ಕ್ರ ಸಂ. | ಲೆಕ್ಕ ಶೀರ್ಷಿಕೆಗಳು | **2024-25ನೇ ಸಾಲಿನ ಆಯವ್ಯಯ (ರೂ. ಕೋಟಿಗಳಲ್ಲಿ)** |
|---|---|---|---|
| | 1 | 170,37,60,000/- | 157,37,60,000/- |
| | 2 | 120,00,00,000/- | 120,00,00,000/- |
| | 3 | 3,09,90,000/- | 3,09,90,000/- |
| | 4 | 1,64,20,000/- | 1,64,20,000/- |
| | 5 | 26,93,25,000/- | 20,17,25,000/- |
| | 6 | 21,12,50,000/- | 19,60,50,000/- |
| | 7 | 14,57,00,000/- | 14,57,00,000/- |
| | | **ಒಟ್ಟು ಮೊತ್ತ** | **357,74,45000/-** |
| | | **ರೂ ಕೋಟಿಗಳಲ್ಲಿ** | **357.74** |
| ಉ | | **(ಇ-ಈ) ಅಂತಿಮ ಶಿಲ್ಕು** | **(-)80.35** |

2022-23, 2023-24 ಮತ್ತು 2024-25ನೇ ಸಾಲಿನಲ್ಲಿ ಸರ್ಕಾರದಿಂದ ಪಿಂಚಣಿ ಅನುದಾನವಾಗಿ ಕ್ರಮವಾಗಿ **ರೂ.56.00ಕೋಟಿ, ರೂ.63.00ಕೋಟಿ ಮತ್ತು ರೂ.70.00ಕೋಟಿಗಳು** ಕಡಿಮೆ ನೀಡಿದ ಕಾರಣದಿಂದಾಗಿ, 2024-25ನೇ ಸಾಲಿಗೆ ಅಂದಾಜು **ರೂ.59.07ಕೋಟಿಗಳು** ಕೊರತೆ ಆಯವ್ಯಯವನ್ನು ಮೈಸೂರು ವಿಶ್ವವಿದ್ಯಾನಿಲಯವು ಎದುರಿಸುತ್ತಿದೆ. ಆದರೂ 2024-25ನೇ ಸಾಲಿನ ವೆಚ್ಚಗಳನ್ನು ಮಿತವ್ಯಯ ಸಾಧಿಸಲು ಕ್ರಮವಹಿಸಲಾಗುವುದು ಮತ್ತು ಅಗತ್ಯ ವೆಚ್ಚಗಳನ್ನು ಹೊರತು ಪಡಿಸಿ ಉಳಿದ ವೆಚ್ಚಗಳಿಗೆ ನಿಯಂತ್ರಿಸಲು ಸೂಕ್ತ ಕ್ರಮಕೈಗೊಳ್ಳಲಾಗುವುದು.

ಹಾಗೆಯೇ ವಿಶ್ವವಿದ್ಯಾನಿಲಯದ ಇತರೆ ಒಟ್ಟು 18 ಖಾತೆ (ಪ್ರಾಯೋಜಿತ ಕಾರ್ಯಕ್ರಮಗಳು, SPS, PSFS, Collaboration & Other A/Csಗಳು ಒಳಗೊಂಡಂತೆ) ಗಳ ಸ್ವೀಕೃತಿ ಹಾಗೂ ಸ್ವೀಕೃತಗೊಳ್ಳುವ ಬಡ್ಡಿ ಮೊತ್ತ ಸೇರಿ ಒಟ್ಟು **ರೂ.61.94** ಕೋಟಿಗಳ ಆದಾಯವನ್ನು 2024-25ನೇ ಸಾಲಿನಲ್ಲಿ ನಿರೀಕ್ಷಿಸಲಾಗಿದ್ದು. ಅದರಂತೆಯೇ 2024-25ನೇ ಸಾಲಿನಲ್ಲಿ ವಿಶ್ವವಿದ್ಯಾನಿಲಯವು ವೆಚ್ಚಗಳಿಗಾಗಿ ಒಟ್ಟು **ರೂ.47.66**ಕೋಟಿಗಳನ್ನು ನಿಗದಿಪಡಿಸಿ, ಈ ಖಾತೆಗಳ ಆದಾಯಕ್ಕಾಗಲಿ ಮತ್ತು ವೆಚ್ಚಗಳಿಗಾಗಲಿ ವಿಶ್ವವಿದ್ಯಾನಿಲಯವು ಆರ್ಥಿಕ ಹೊರೆಗೆ ಒಳಪಡಿವುದಿಲ್ಲ ಎಂಬುದನ್ನು ಸಭೆಯ ಅವಗಾಹನೆಗೆ ತರತ್ತಾ, ಈ ಮುಂದಿನಂತೆ ಸದರಿ 18 ಖಾತೆಗಳ ವಿವರಗಳನ್ನು ವಿವರಿಸಲಾಗಿದೆ

ಪು.ತಿ.ನೋ.

| ಕ್ರ ಸಂ. | ಪ್ರಾಯೋಜಿತ ಕಾರ್ಯಕ್ರಮಗಳು ಹಾಗೂ ಸ್ವಯಂ ಆರ್ಥಿಕ ಆಧಾರಿತ ಯೋಜನೆಗಳ ವಿಶ್ವವಿದ್ಯಾನಿಲಯದ 18 ಖಾತೆಗಳ ವಿವರ | ಆದಾಯ (ರೂ. ಗಳಲ್ಲಿ) | ವೆಚ್ಚ (ರೂ. ಗಳಲ್ಲಿ) |
|---|---|---|---|
| 1. | Sponsored Projects, Schemes & Other Program | 9,00,00,000/- | 13,00,00,000/- |
| 2 | Loan & Advances | 1,09,00,000/- | 11,00,05,000/- |
| 3 | Endowment Fund | 2,32,00,000/- | 50,00,000/- |
| 4 | Infrastructure Development Fund | 9,02,00,000/- | 4,00,00,000/- |
| 5 | Kannada Book Printing & Publication | 6,00,000/- | 1,00,000/- |
| 6 | Kannada Encyclopedia | 21,00,000/- | 10,00,000/- |
| 7. | Prasaranga Revolving Fund | 51,00,000/- | 55,00,000/- |
| 8 | Collaboration Courses | 6,76,00,000/- | 4,49,00,000/- |
| 9 | Information Infrastructure Development Fund | 2,52,50,000/- | 3,01,00,000/- |
| 10 | Institution Of Excellence | 10,00,000/- | 9,00,000/- |
| 11 | School Of Planning And Architecture | 3,05,75,000/- | 2,89,50,000/- |
| 12 | Online Program | 5,10,00,000/- | 1,00,000/- |
| 13 | RUSA | 11,00,00,000/- | 11,00,00,000/- |
| 14 | Centenary Fund | 1,35,000/- | 26,00,000/- |
| 15 | Chinese Program | 45,25,000/- | 71,20,000/- |
| 16 | Gok Registrar & Director Of Social Welfare Joint Account | 15,00,000/- | 60,00,000/- |
| 17 | University Engineering College | 10,03,00,000/- | 4,83,45,000/- |
| 18 | Pension | 55,00,000/- | 50,00,000/- |
| | Total | 61,94,85,000/- | 47,66,20,000/- |
| | **ಒಟ್ಟು ರೂ. ಕೋಟಿಗಳಲ್ಲಿ** | **61.94** | **47.66** |

2024-25ನೇ ಸಾಲಿನ ಆಯವ್ಯಯದ ಅಂದಾಜುಗಳನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಕಾಯ್ದೆ 2000, ಪ್ರಕರಣ 31(2) (XV)ರಂತೆ ಮೇರೆಗೆ ದಿನಾಂಕ 10-06-2024ರಂದು ನಡೆದ **'ಹಣಕಾಸು ಸಮಿತಿ'** ಸಭೆಯು ಅನುಮೋದಿಸಿದ್ದು, ಅದರಂತೆಯೇ, ಈ ವಿಷಯವನ್ನು **"ಸಿಂಡಿಕೇಟ್"** ಸಭೆಯ ಅವಗಾಹನೆ ಮತ್ತು ಅನುಮೋದನೆಗಾಗಿ ದಿನಾಂಕ 12-06-2024ರಂದು ಮಂಡಿಸಲಾಗಿದ್ದು, ಸದರಿ ಸಭೆಯು ಈ ವಿಷಯವನ್ನು ಮುಂದೂಡಲಾಯಿತು.

ಆದ್ದರಿಂದ, 2024-25ನೇ ಸಾಲಿನ **"ಕರಡು"** ಆಯವ್ಯಯದ ಅಂದಾಜುಗಳನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಕಾಯ್ದೆ 2000, ಪ್ರಕರಣ 31(2) (XV)ರಂತೆ ಮೇರೆಗೆ ಈ ವಿಷಯವನ್ನು **"ಸಿಂಡಿಕೇಟ್"** ಸಭೆಯ ಅವಗಾಹನೆ ಮತ್ತು ಅನುಮೋದನೆಗಾಗಿ ಮಂಡಿಸಿದೆ.

Subject No 2024/3.24

Department of Studies in Genetics & Genomics, Manasagangotri, Mysuru ಮತ್ತು HCG Cancer Care Centre, Bangalore ಇವರುಗಳ ನಡುವೆ ಪರಸ್ಪರ ಒಡಂಬಡಿಕೆಯನ್ನು ಮಾಡಿಕೊಳ್ಳಲು ಕೋರಿರುವ ಬಗ್ಗೆ.

*******

Chairperson, Department of Studies in Genetics & Genomics, Manasagangotri, Mysuru ಇವರು ಮೈಸೂರು ವಿಶ್ವವಿದ್ಯಾನಿಲಯದ Department of Studies in Genomics, Manasagangotri, Mysuru ಮತ್ತು HCG Cancer Care Centre, Bangalore ಸಂಸ್ಥೆಗಳ ನಡುವೆ M.Sc in Genetics & Genomics ವಿದ್ಯಾರ್ಥಿಗಳಿಗೆ Skill Data analysis Portal ಹಾಗೂ ಉದ್ಯೋಗಾವಕಾಸವನ್ನು ಕಲ್ಪಿಸುವ ಉದ್ದೇಶಕ್ಕಾಗಿ ಪರಸ್ಪರ ಒಡಂಬಡಿಕೆಯನ್ನು ಮಾಡಿಕೊಳ್ಳಲು ಅನುಮತಿ ನೀಡುವಂತೆ ಕೋರಿ ಕರಡು ಒಡಂಬಡಿಕೆ ಪ್ರತಿಯನ್ನು ಸಲ್ಲಿಸಿರುತ್ತಾರೆ.

ಈ ಹಿನ್ನೆಲೆಯಲ್ಲಿ, ಕರಡು ಒಡಂಬಡಿಕೆಯ ಸಾಧಕ-ಬಾಧಕಗಳ ಸಂಬಂಧ ಕಾನೂನು ಸಲಹೆಗಾರರ ಅಭಿಪ್ರಾಯವನ್ನು ಪಡೆಯಲಾಗಿದ್ದು, ಈ ಮುಂದಿನಂತಿರುತ್ತದೆ.

"It is noted that the HCG Cancer Care Centre, Bengaluru and the University of Mysore are intending to enter into a Memorandum of Understanding in respect of identified field of Academic and Research excellence, which has been clearly mentioned in the MoU under the head of scope. With respect to the objectives and the legality of the agreement, the same seems sufficient. However, with respect to duration of the understanding and legal jurisdiction requires certain modifications. The same has been highlighted in the revised draft MoU. The revision may be examined and thereby the University may execute the same".

ಈ ಹಿನ್ನೆಲೆಯಲ್ಲಿ, ಪ್ರಸ್ತುತ HCG Cancer Care Centre, Bangalore ಸಂಸ್ಥೆಯೊಡನೆ Department of Studies in Genomics, Manasagangotri, Mysuru ಇವರು M.Sc in Genetics & Genomics ವಿದ್ಯಾರ್ಥಿಗಳಿಗೆ Skill Data analysis Portal ಹಾಗೂ ಉದ್ಯೋಗಾವಕಾಸವನ್ನು ಕಲ್ಪಿಸುವ ಉದ್ದೇಶಕ್ಕಾಗಿ ಪರಸ್ಪರ ಒಡಂಬಡಿಕೆಗೆ ಒಳಪಡಲು ಕೋರಿರುವ ಪ್ರಸ್ತಾವನೆಯನ್ನು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ತೀರ್ಮಾನಕ್ಕಾಗಿ ಮಂಡಿಸಲಾಗಿದೆ.

Subject No. 2024/3.25

**ವಿಷಯ:** ವಿಶ್ವವಿದ್ಯಾನಿಲಯದ ವಿದ್ಯಾರ್ಥಿನಿಲಯಗಳ ಆಡಳಿತ, ನಿರ್ವಹಣೆ ಹಾಗೂ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ಸಲಹಾ ಸಮಿತಿಯ 02 ಸಭೆಗಳ ತೀರ್ಮಾನಗಳ ಅನುಸಮರ್ಥನೆಗಾಗಿ.

ದಿನಾಂಕ: 23-05-2023 ರಂದು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ (ಅ) ಹಾಗೂ ದಿನಾಂಕ: 07-08-2023ರಂದು ಮಾನ್ಯ ಕುಲಸಚಿವರ ಅಧ್ಯಕ್ಷತೆಯಲ್ಲಿ (ಆ) ಜರುಗಿದ 2022-23ನೇ ಶೈಕ್ಷಣಿಕ ಸಾಲಿನ ವಿಶ್ವವಿದ್ಯಾನಿಲಯದ ವಿದ್ಯಾರ್ಥಿನಿಲಯಗಳ ಆಡಳಿತ, ನಿರ್ವಹಣೆ ಹಾಗೂ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ಸಲಹಾ ಸಮಿತಿಯ ಸಭೆಯಲ್ಲಿ ತೆಗೆದುಕೊಂಡಿರುವ ತೀರ್ಮಾನಗಳನ್ನು ಸಿಂಡಿಕೇಟ್ ಸಭೆಯ ಪರಿಶೀಲನೆಗಾಗಿ ಮತ್ತು ಅನುಸಮರ್ಥನೆಗಾಗಿ.

"ಅ"
-125-

ಮೈಸೂರು ವಿಶ್ವವಿದ್ಯಾನಿಲಯ ಕ್ರಾಫರ್ಡ್ ಭವನದ ಶಿಕ್ಷಣ ಮಂಡಳಿ ಸಭಾಂಗಣದಲ್ಲಿ ದಿನಾಂಕ: 23-05-2023ರ ಮಧ್ಯಾಹ್ನ 03.30 ಗಂಟೆಗೆ ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಜರುಗಿದ "2022-23ನೇ ಶೈಕ್ಷಣಿಕ ಸಾಲಿಗೆ ವಿಶ್ವವಿದ್ಯಾನಿಲಯದ ವಿದ್ಯಾರ್ಥಿನಿಲಯಗಳ ಆಡಳಿತ, ನಿರ್ವಹಣೆ ಹಾಗೂ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ಸಲಹಾ ಸಮಿತಿಯ ಮೊದಲನೇ ಸಭೆ"ಯ ನಡವಳಿ.

<u>ಸಭೆಯಲ್ಲಿ ಹಾಜರಾಗಿದ್ದವರು:</u>

| | | |
|---|---|---|
| 1) | ಕುಲಪತಿಗಳು<br>ಮೈಸೂರು ವಿಶ್ವವಿದ್ಯಾನಿಲಯ<br>ಮೈಸೂರು | ಅಧ್ಯಕ್ಷರು |
| 2) | ಕುಲಸಚಿವರು<br>ಮೈಸೂರು ವಿಶ್ವವಿದ್ಯಾನಿಲಯ<br>ಮೈಸೂರು | ಉಪಾಧ್ಯಕ್ಷರು |
| 3) | ಜಂಟಿ ನಿರ್ದೇಶಕರು<br>ಸಮಾಜ ಕಲ್ಯಾಣ ಇಲಾಖೆ<br>ಮೈಸೂರು ಜಿಲ್ಲೆ 570006 | ಸದಸ್ಯರು |
| 4) | ಜಿಲ್ಲಾ ಅಧಿಕಾರಿಗಳು<br>ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ<br>ನೂತನ ಜಿಲ್ಲಾಧಿಕಾರಿಗಳ ಕಟ್ಟಡ, ಕೊಠಡಿ ಸಂಖ್ಯೆ:- 22<br>ಗಿರಿಬೋವಿಯ ಪಾಳ್ಯ. ಮೈಸೂರು 570011 | ಸದಸ್ಯರು |
| 5) | ತಾಲ್ಲೋಕು ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳು<br>ವಾಲ್ಮೀಕಿ ಭವನ, ವಿಜಯನಗರ 2ನೇ ಹಂತ,<br>ಮೈಸೂರು 570017 | ಸದಸ್ಯರು |
| 6) | ಕುಲಸಚಿವರು (ಪರೀಕ್ಷಾಂಗ)<br>ಮೈಸೂರು ವಿಶ್ವವಿದ್ಯಾನಿಲಯ<br>ಮೈಸೂರು-5 | ಸದಸ್ಯರು |
| 7) | ಹಣಕಾಸು ಅಧಿಕಾರಿಗಳು<br>ಮೈಸೂರು ವಿಶ್ವವಿದ್ಯಾನಿಲಯ<br>ಮೈಸೂರು-5 | ಸದಸ್ಯರು |
| 8) | ಶ್ರೀ ಎಂ.ಬಿ.ಗಪ್ಪಣ್ಣ<br>ಸಿಂಡಿಕೇಟ್ ಸದಸ್ಯರು<br>#20, ಗ್ರೂಯಿತ್ ಮತ್ತು ರೋ ಹೌಸ್ ಹತ್ತಿರ,<br>ಜೋಡಿ ಬೇವಿನ ಮರ, ದಟ್ಟಗಳ್ಳಿ 3ನೇ ಹಂತ<br>ಮೈಸೂರು | ಸದಸ್ಯರು |

9) ಪ್ರೊ. ಡಿ. ಆನಂದ್ ಸದಸ್ಯರು
ನಿರ್ದೇಶಕರು
ಕಾಲೇಜು ಅಭಿವೃದ್ಧಿ ಮಂಡಳಿ
ಮೈಸೂರು-6

10) ನಿರ್ದೇಶಕರು ಸದಸ್ಯರು
ಪಿ.ಎಂ.ಇ.ಬಿ
ಮೈಸೂರ ವಿಶ್ವವಿದ್ಯಾನಿಲಯ
ಕ್ರಾಫರ್ಡ್ ಭವನ
ಮೈಸೂರು-6

11) ಆಡಳಿತಾಧಿಕಾರಿಗಳು ಸದಸ್ಯರು
ಮಾನಸಗಂಗೋತ್ರಿ
ಮೈಸೂರು-6

12) ಪ್ರಾಂಶುಪಾಲರು ಸದಸ್ಯರು
ಮಹಾರಾಜ ಕಾಲೇಜು
ಮೈಸೂರು-5

13) ಪ್ರಾಂಶುಪಾಲರು ಸದಸ್ಯರು
ಯುವರಾಜ ಕಾಲೇಜು
ಮೈಸೂರು-6

14) ವಿಶೇಷಾಧಿಕಾರಿಗಳು ಸದಸ್ಯರು
ಪರಿಶಿಷ್ಟ ಜಾತಿ: ಪರಿಶಿಷ್ಟ ವರ್ಗ ವಿಶೇಷ ಘಟಕ
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು-5

15) ಕಾರ್ಯಪಾಲಕ ಅಭಿಯಂತರರು ಸದಸ್ಯರು
ವಿ.ವಿ. ಇಂಜಿನಿಯರಿಂಗ್ ವಿಭಾಗ
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು-6

16) ನಿರ್ದೇಶಕರು ಸದಸ್ಯ ಕಾರ್ಯದರ್ಶಿ
ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯ
ಮಾನಸಗಂಗೋತ್ರಿ
ಮೈಸೂರು-6

**ಸಭೆಯಲ್ಲಿ ಗೈರುಹಾಜರಾಗಿದ್ದವರು:**

1) ಪೋಲಿಸ್ ಆಯುಕ್ತರು
ಪೋಲಿಸ್ ಆಯುಕ್ತಕರ ಕಛೇರಿ FRRO — ಸದಸ್ಯರು
ಲೋಕರಂಜನ್ ಮಹಲ್ ರಸ್ತೆ,
ಮೈಸೂರು 570010

ಮೊದಲಿಗೆ ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶಕರಾದ ಡಾ.ಚಂದ್ರುಶೇಖರ್ ರವರು ಸಭೆಯಲ್ಲಿ ಹಾಜರಿದ್ದ ಅಧ್ಯಕ್ಷರು ಹಾಗೂ ಸದಸ್ಯರುಗಳನ್ನು ಸ್ವಾಗತಿಸಿದರು.

## ಅನುಸಮರ್ಥನೆಗೆ ಮಂಡಿಸಲಾಗಿದ್ದ ವಿಷಯಗಳು

| | |
|---|---|
| 1. | **ದಿನಾಂಕ 31-10-2022ರಂದು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ಶಿಫಾರಸ್ಸಿನಂತೆ ಹಾಗೂ ದಿನಾಂಕ 05-11-2022ರಂದು ನಡೆದ ಸಿಂಡಿಕೇಟ್ ಸಭೆಯ ತೀರ್ಮಾನದಂತೆ ವಿಶ್ವವಿದ್ಯಾನಿಲಯದ ವಿದ್ಯಾರ್ಥಿನಿಲಯಗಳಿಗೆ 17 ಅತಿಥಿ ಉಪನ್ಯಾಸಕರುಗಳನ್ನು ಹಾಗೂ ಇಬ್ಬರು ತಾತ್ಕಾಲಿಕ ಸಂಶೋಧನಾ ಸಹಾಯಕರುಗಳನ್ನು ಸಹಾಯಕ ನಿಲಯಪಾಲಕರುಗಳನ್ನಾಗಿ ನಿಯೋಜಿಸಲಾಗಿರುವ ಬಗ್ಗೆ.** |
| ಪ್ರಸ್ತಾವನೆ | ಮಾನ್ಯ ಕುಲಪತಿಯವರು ಮಾತನಾಡಿ, ವಿಶ್ವವಿದ್ಯಾನಿಲಯದ ವಿದ್ಯಾರ್ಥಿನಿಲಯಗಳಿಗೆ 17 ಅತಿಥಿ ಉಪನ್ಯಾಸಕರುಗಳನ್ನು ಹಾಗೂ ಇಬ್ಬರು ತಾತ್ಕಾಲಿಕ ಸಂಶೋಧನಾ ಸಹಾಯಕರುಗಳನ್ನು ಸಹಾಯಕ ನಿಲಯಪಾಲಕರುಗಳನ್ನಾಗಿ ನಿಯೋಜಿಸಲಾಗಿರುತ್ತದೆ. ಸಹಾಯಕ ನಿಲಯಪಾಲಕರ ಹುದ್ದೆಗಳು ತಾತ್ಕಾಲಿಕವಾಗಿದ್ದು, ಪ್ರಾಯೋಗಿಕವಾಗಿ ವಿದ್ಯಾರ್ಥಿನಿಲಯಗಳಲ್ಲಿ ಶಿಸ್ತು, ಸುರಕ್ಷತೆಯ ದೃಷ್ಟಿಯಿಂದ ನೇಮಿಸಿಕೊಳ್ಳಲಾಗಿರುತ್ತದೆ ಅದರೆ, ಸದರಿಯವರುಗಳಿಂದ ವಿದ್ಯಾರ್ಥಿನಿಲಯದಲ್ಲಿ ಯಾವುದೇ ಸುಧಾರಣೆಗೊಂಡಿರುವುದಿಲ್ಲ ವಿದ್ಯಾನಿಲಯದಲ್ಲಿ ಪ್ರತಿಭಟಣೆ ನಡೆಯುವ ಸಂದರ್ಭಗಳಲ್ಲಿ ಯಾವ ಸಹಾಯಕ ನಿಲಯಪಾಲಕರು ಹಾಜರಿರುವುದಿಲ್ಲ ಹಾಗೂ ಸದರಿಯವರುಗಳು ಕೇವಲ ಒಂದು ವರ್ಷದ ಅವಧಿಗೆ ನೇಮಕವಾಗಿರುತ್ತಾರೆ ಎಂದು ತಿಳಿಸಿದರು |
| ತೀರ್ಮಾನ | **ವಿಶ್ವವಿದ್ಯಾನಿಲಯದ ವಿದ್ಯಾರ್ಥಿನಿಲಯಗಳಿಗೆ 17 ಅತಿಥಿ ಉಪನ್ಯಾಸಕರುಗಳನ್ನು ಹಾಗೂ ಇಬ್ಬರು ತಾತ್ಕಾಲಿಕ ಸಂಶೋಧನಾ ಸಹಾಯಕರುಗಳನ್ನು ಸಹಾಯಕ ನಿಲಯಪಾಲಕರುಗಳನ್ನಾಗಿ ನಿಯೋಜಿಸಲಾಗಿರುತ್ತದೆ. ಸಹಾಯಕ ನಿಲಯಪಾಲಕರ ಹುದ್ದೆಗಳು ತಾತ್ಕಾಲಿಕವಾಗಿದ್ದು, ಪ್ರಾಯೋಗಿಕವಾಗಿರುವುದನ್ನು ಅವಗಾಹಿಸಿದ ಸಭೆಯು ವಿಶ್ವವಿದ್ಯಾನಿಲಯದಲ್ಲಿ ಆರ್ಥಿಕ ಮಿತವ್ಯಯ ಸಾಧಿಸುವ ದೃಷ್ಠಿಯಿಂದ ಸದರಿಯವರುಗಳನ್ನು ಈ ಕೂಡಲೇ ಕರ್ತವ್ಯದಿಂದ ಬಿಡುಗಡೆಗೊಳಸಬೇಕೆಂದು ಸಭೆಯು ತೀರ್ಮಾನಿಸಿತು.** |
| 2. | **ಡಾ. ಕೆ.ಎಸ್.ಬೆಟ್ಟಪ್ಪ, ಸಂಶೋಧನಾ ಸಹಾಯಕರು (ಖಾಯಂ), ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರನ್ನು ಸ್ನಾತಕೋತ್ತರ ಪುರುಷರ ವಿದ್ಯಾರ್ಥಿನಿಲಯ ಬ್ಲಾಕ್ -2, ಮಾನಸಗಂಗೋತ್ರಿ, ಮೈಸೂರು ಇಲ್ಲಿಗೆ ಶಿಕ್ಷಕ ಸಲಹೆಗಾರರನ್ನಾಗಿ ನಿಯೋಜಿಸಿರುವ ಬಗ್ಗೆ.** |
| ಪ್ರಸ್ತಾವನೆ | ದಿನಾಂಕ 31-10-2022ರಂದು ಮಾನ್ಯ ಕುಲಪತಿಯವರ ಅಧ್ಯಕ್ಷತೆಯಲ್ಲಿ ನಡೆದ ಆಯ್ಕೆ ಸಮಿತಿ ಸಭೆಯ ತೀರ್ಮಾನದಂತೆ ಡಾ. ಕೆ.ಎಸ್.ಬೆಟ್ಟಪ್ಪ, ಸಂಶೋಧನಾ ಸಹಾಯಕರು (ಖಾಯಂ), ಪ್ರಾಚೀನ |

-128-

| | |
|---|---|
| | ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರನ್ನು ಸ್ನಾತಕೋತ್ತರ ಪುರುಷರ ವಿದ್ಯಾರ್ಥಿನಿಲಯ ಬ್ಲಾಕ್ -2, ಮಾನಸಗಂಗೋತ್ರಿ, ಮೈಸೂರು ಇಲ್ಲಿಗೆ ಶಿಕ್ಷಕ ಸಲಹೆಗಾರರನ್ನಾಗಿ ನಿಯೋಜಿಸಲಾಗಿರುತ್ತದೆ. |
| ತೀರ್ಮಾನ | **ಡಾ. ಕೆ.ಎಸ್.ಬೆಟ್ಟಪ್ಪ, ಸಂಶೋಧನಾ ಸಹಾಯಕರು (ಖಾಯಂ), ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರನ್ನು ಸ್ನಾತಕೋತ್ತರ ಪುರುಷರ ವಿದ್ಯಾರ್ಥಿನಿಲಯ ಬ್ಲಾಕ್ -2, ಮಾನಸಗಂಗೋತ್ರಿ, ಮೈಸೂರು ಇಲ್ಲಿಗೆ ಶಿಕ್ಷಕ ಸಲಹೆಗಾರರನ್ನಾಗಿ ನಿಯೋಜಿಸಿರುವುದನ್ನು ಸಭೆಯು ಅನುಸಮರ್ಥಿಸಿತು.** |

## 2022-23ನೇ ಸಾಲಿನಲ್ಲಿ ದಿನಾಂಕ:23-05-2023ರಂದು ನಡೆದ ಸಲಹಾ ಸಮಿತಿಯಲ್ಲಿ ಮಂಡಿಸಲಾಗಿದ್ದ ಕಾರ್ಯಸೂಚಿ ವಿಷಯಗಳು

| | |
|---|---|
| 1. | **ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಡುವ ವಿದ್ಯಾರ್ಥಿನಿಲಯಗಳ ಪ್ರವೇಶಾತಿ ಕುರಿತು.** |
| ಪ್ರಸ್ತಾವನೆ | ವಿ.ಕ್ಷೇ.ಪಾ ನಿರ್ದೇಶಕರು ಮಾತನಾಡಿ, ಕಳೆದ ಕೋವಿಡ್‌ನಲ್ಲಿ ಹೆಚ್ಚುವರಿಯಾಗಿ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿನಿಲಯದಲ್ಲಿ ದಾಖಲಾತಿ ನೀಡಿರುವುದು ಹಾಗೂ ಕಾನೂನು ವಿಭಾಗದ ವಿದ್ಯಾರ್ಥಿಗಳು 5 ವರ್ಷಗಳ ಕಾಲ ವಿದ್ಯಾರ್ಥಿನಿಲಯದಲ್ಲಿ ಇರುವುದರಿಂದ ಮತ್ತು ಅಕಡೆಮಿಕ್ ಕ್ಯಾಲಂಡರ್‌ನ ಸಮಯದ ವ್ಯತ್ಯಾಸದಿಂದ ವಿದ್ಯಾರ್ಥಿನಿಲಯ ನಿರ್ವಹಣೆ ಮಾಡುವುದು ಕಷ್ಟವಾಗುತ್ತಿದೆ. ಹೆಚ್ಚಿನ ವಿದ್ಯಾರ್ಥಿಗಳು ಇರುವುದರಿಂದ ಮೂಲ ಸೌಕರ್ಯಗಳಾದ ಕೊಠಡಿಗಳು, ಸ್ನಾನದ ಮನೆ, ಶೌಚಾಲಯ ಶುದ್ಧ ಕುಡಿಯುವ ನೀರಿನ ಸಮಸ್ಯೆ ಮತ್ತು ಸ್ವಚ್ಛತಾ ಸಿಬ್ಬಂದಿಗಳ ಕೊರತೆ ಇವೆಲ್ಲ ಸೌಲಭ್ಯಗಳು ದೊರೆಯದೆ ವಿದ್ಯಾರ್ಥಿಗಳು ಪ್ರತಿ ದಿನ ಒಂದಲ್ಲ ಒಂದು ಸಮಸ್ಯೆಗಳು ಉದ್ಭವಿಸಿರುತ್ತದೆ ಎಂದು ಸಭೆಯ ಗಮನಕ್ಕೆ ತಂದರು. ಇದರ ಮಧ್ಯೆ ಸ್ಕೂಲ್ ಆಫ್ ಇಂಜಿನಿಯರಿಂಗ್ ಹಾಗೂ ಸ್ಕೂಲ್ ಆಫ್ ಪ್ಲಾನಿಂಗ್ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿನಿಲಯಕ್ಕೆ ಪ್ರವೇಶಾತಿಗೆ ಒತ್ತಡ ತರುತಿದ್ದಾರೆ ಎಂದು ತಿಳಿಸಿದರು. |
| ತೀರ್ಮಾನ | **ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಡುವ ಸ್ನಾತಕ/ಸ್ನಾತಕೋತ್ತರ ವಿದ್ಯಾರ್ಥಿನಿಲಯಗಳಲ್ಲಿ ಸಾಮರ್ಥ್ಯಕ್ಕೆ ಅನುಗುಣವಾಗಿ ಪ್ರವೇಶಾತಿಯನ್ನು ನೀಡುವಂತೆ ಹಾಗೂ ವಿಭಾಗವಾರು ವಿದ್ಯಾರ್ಥಿಗಳನ್ನು ವಿದ್ಯಾರ್ಥಿನಿಲಯದ ಪ್ರವೇಶಾತಿಯಲ್ಲಿ ಹಂಚಿಕೆ ಮಾಡುವುದು. School of Planning & Architecutre ವಿಭಾಗದ 60 ವಿದ್ಯಾರ್ಥಿಗಳಿಗೆ ವಿದ್ಯಾರ್ಥಿನಿಲಯವನ್ನು ಕಲ್ಪಿಸುವ ಸಂಬಂಧ ಮತ್ತು ಕಾನೂನು ಶಾಲೆಯ ವಿದ್ಯಾರ್ಥಿಗಳಿಗೆ ಪ್ರತ್ಯೇಕ ವಿದ್ಯಾರ್ಥಿನಿಲಯವನ್ನು ನಿರ್ಮಾಣದ ಬಗ್ಗೆ ಮುಂದಿನ ದಿನಗಳಲ್ಲಿ ಕ್ರಮ ವಹಿಸಲಾಗುವುದು ಹಾಗೂ ಇಂಜಿನಿಯರಿಂಗ್ ವಿದ್ಯಾರ್ಥಿನಿಲಯ ಪ್ರಾರಂಭಗೊಳ್ಳುವತನಕ ಸದರಿ ವಿಭಾಗದ ವಿದ್ಯಾರ್ಥಿಗಳನ್ನು ಸ್ನಾತಕೋತ್ತರ ವಿದ್ಯಾರ್ಥಿನಿಲಯದಲ್ಲಿ ಪ್ರವೇಶಾತಿ ನೀಡಲು ಒಪ್ಪಲಾಯಿತು** |
| 2 | **2022-23ನೇ ಸಾಲಿಗೆ ವಿದ್ಯಾರ್ಥಿನಿಲಯದ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳ ಭೋಜನ ವೆಚ್ಚದ ಶುಲ್ಕವನ್ನು ಹೆಚ್ಚು ಮಾಡಿರುವ ಬಗ್ಗೆ.** |

| | |
|---|---|
| ಪ್ರಸ್ತಾವನೆ | **ಪ್ರೊ. ರಾಮಚಂದ್ರರವರು ಮಾತನಾಡಿ,** ಸ್ನಾತಕೋತ್ತರ ವಿದ್ಯಾರ್ಥಿನಿಲಯದಲ್ಲಿರುವ ಗುಮಾಸ್ತರಿಂದ ಹಾಗೂ ಸಿಬ್ಬಂದಿಗಳಿಂದ ಕಳ್ಳತನಗಳು ನಡೆಯುತ್ತಿದೆ, ಇದಕ್ಕೆ ಸಂಬಂಧಿಸಿದಂತೆ ಸಿಂಡಿಕೇಟ್ ಸಬ್ ಕಮಿಟಿಯನ್ನು ರಚಿಸಲಾಗಿದೆ ಸಮಿತಿಯು ವರದಿಯನ್ನು ಸಹ ನೀಡಲಾಗಿರುತ್ತದೆ. ಆದರೆ ಇದರ ಬಗ್ಗೆ ಯಾವ ಕ್ರಮ ಕೈಗೊಂಡಿರುವುದಿಲ್ಲ ಮತ್ತು ಅನಧೀಕೃತ ವಿದ್ಯಾರ್ಥಿಗಳು ಊಟ ಮಾಡುತಿರುತ್ತಾರೆ. ಈ ಎರಡು ವಿಷಯಗಳನ್ನು ಮಾನ್ಯ ಕುಲಪತಿಗಳು ನಿಯಂತ್ರಿಸಿದರೆ ಖಂಡಿತವಾಗಿ ವಿದ್ಯಾರ್ಥಿನಿಲಯದ ವಿದ್ಯಾರ್ಥಿಗಳಿಗೆ ಇನ್ನು ಹೆಚ್ಚಿನ ಗುಣಮಟ್ಟದ ಆಹಾರ ನೀಡಬಹುದು, ದಯಮಾಡಿ ಅಲ್ಲಿನ ಸಿಬ್ಬಂದಿಗಳ ವಿರುದ್ಧ ಕ್ರಮಕೈಗೊಳ್ಳಬೇಕಾಗಿ ಸಭೆಯ ಗಮನಕ್ಕೆ ತಂದರು.<br>**ವಿ.ಕ್ಷೇ.ಪಾ ನಿರ್ದೇಶಕರು ಮಾತನಾಡಿ,** ಕಳ್ಳತನಕ್ಕೆ ಸಂಬಂಧಪಟ್ಟ ವಿಷಯಕ್ಕೆ ಸಂಬಂಧಿಸಿದಂತೆ ಸಂಬಂಧಪಟ್ಟವರ ವಿರುದ್ದ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.<br>**ಪ್ರೊ. ಡಿ ಆನಂದ್‌ರವರು ಮಾತನಾಡಿ,** ಕಳ್ಳತನ ನಡೆದುಹೋಗಿದೆ ಮುಂದೆ ಇದನ್ನು ತಡೆಗಟ್ಟುವ ಸಂಬಂಧ ತಮ್ಮ ಸಲಹೆ ಏನು? ಇದಕ್ಕುತ್ತರವಾಗಿ ಪ್ರೊ. ರಾಮಚಂದ್ರಪ್ಪರವರು: ಅಲ್ಲಿನ ಸಿಬ್ಬಂಧಿಗಳನ್ನು ಬದಲಾವಣೆ ಮಾಡಿದಲ್ಲಿ ತಡೆಗಟ್ಟಬಹುದೆಂದು ತಿಳಿಸಿದರು. |
| ತೀರ್ಮಾನ | **2022-23ನೇ ಸಾಲಿನ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ಸರ್ಕಾರಿ ಮೆಟ್ರಿಕ್ ಪೂರ್ವ/ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯದ ವಿದ್ಯಾರ್ಥಿಗಳಿಗೆ ಮತ್ತು ಸಾಮಾನ್ಯ ವರ್ಗದ ವಿದ್ಯಾರ್ಥಿಗಳಿಗೂ ಸಹಾ ಆದೇಶ ಹೊರಡಿಸುವ ದಿನಾಂಕದಿಂದ ಅನ್ವಯವಾಗುವಂತೆ ಭೋಜನ ವೆಚ್ಚದ ದರವನ್ನು ರೂ.150/- ಗಳಿಗೆ ಹೆಚ್ಚಿಸುವಂತೆ(ರೂ.1,600/-ಗಳಿಂದ ರೂ.1,750/-)ಒಪ್ಪಲಾಯಿತು. ಸಿಂಡಿಕೇಟ್ ಸಬ್ ಕಮಿಟಿಯು ನೀಡಲಾಗಿರುವ ವರದಿಗೆ ಸಂಬಂಧಿಸಿದಂತೆ ಪೂರ್ಣ ದಾಖಲಾತಿಗಳೊಂದಿಗೆ ವರದಿಯನ್ನು ತುರ್ತಾಗಿ ಮಾನ್ಯ ಕುಲಪತಿಗಳಿಗೆ ಸಲ್ಲಿಸುವಂತೆ ವಿ.ಕ್ಷೇ.ಪಾ. ನಿರ್ದೇಶಕರಿಗೆ ಸೂಚಿಸಲಾಯಿತು ಹಾಗೂ ಸಿಬ್ಬಂದಿಗಳ ಕಳ್ಳತನದ ಕುರಿತಾಗಿ ವಿ.ಕ್ಷೇ.ಪಾ ನಿರ್ದೇಶಕರು ಮತ್ತು ಆಡಳಿತಾಧಿಕಾರಿಗಳು, ಮಾ.ಗಂ, ಮೈಸೂರು ಇವರುಗಳು ಚರ್ಚಿಸಿ ಕ್ರಮ ಕೈಗೊಳ್ಳುವುದಕ್ಕೆ ಸೂಚಿಸಲಾಯಿತು. 8 ರಿಂದ 10 ವರ್ಷಗಳಿಂದ ವಿದ್ಯಾರ್ಥಿನಿಲಯದಲ್ಲಿ ಗುಮಾಸ್ತರಾಗಿ ಕಾರ್ಯನಿರ್ವಹಿಸುತ್ತಿರುವವರನ್ನು ವರ್ಗಾವಣೆ ಮಾಡುವಂತೆ ಸೂಚಿಸಲಾಯಿತು. ಮೆಸ್ ಮೆನುವಿನ ಪರಿಷ್ಕರಣೆಗೆ ಸಂಬಂಧಿಸಿದಂತೆ ಮುಂದಿನ ದಿನಗಳಲ್ಲಿ ಕ್ರಮ ವಹಿಸಲಾಗುವುದೆಂದು ತೀರ್ಮಾನಿಸಲಾಯಿತು.** |
| 3 | **ಮೈಸೂರು ವಿಶ್ವವಿದ್ಯಾನಿಲಯದ ಮೈಸೂರು ನಗರ ವ್ಯಾಪ್ತಿಗೊಳಪಡುವ ಮಹಿಳಾ ವಿದ್ಯಾರ್ಥಿನಿಲಯಗಳಲ್ಲಿ ಸಫಾಯಿ ಕರ್ಮಚಾರಿಗಳು ಹಾಗೂ ಮಹಿಳಾ ರಾತ್ರಿ ಪಾಳಿ ಸಿಬ್ಬಂದಿಗಳನ್ನು ನೇಮಿಸಿಕೊಡುವ ಬಗ್ಗೆ.** |
| ಪ್ರಸ್ತಾವನೆ | **ಮಾನ್ಯ ಕುಲಸಚಿವರು:** ಮಹಿಳಾ ವಿದ್ಯಾರ್ಥಿನಿಲಯಗಳಲ್ಲಿ ಸಫಾಯಿ ಕರ್ಮಚಾರಿಗಳು ಹಾಗೂ ಮಹಿಳಾ ರಾತ್ರಿ ಪಾಳಿ ಸಿಬ್ಬಂದಿಗಳನ್ನು ನೇಮಿಸಿಕೊಡುವುದು ಸಾಧ್ಯವಾಗುವುದಿಲ್ಲ. ಸಫಾಯಿ ಕರ್ಮಚಾರಿಗಳಿಗೆ ಸಂಬಂಧಿಸಿದಂತೆ ಕಾರ್ಯಪಾಲಕ ಅಭಿಯಂತರರೊಂದಿಗೆ ಚರ್ಚಿಸಲು ಹಾಗೂ ರಾತ್ರಿ ಪಾಳಿ ಸಿಬ್ಬಂದಿಗಳಿಗೆ ಸಂಬಂಧಿಸಿದಂತೆ, ಪರಿಚಾರಕರುಗಳನ್ನು ಅಥವಾ ಗ್ರೂಪ್-ಡಿ ನೌಕರರುಗಳನ್ನು ಬಳಸಿಕೊಳ್ಳಬಹುದು ಎಂದು ತಮ್ಮ ಸಲಹೆ ನೀಡಿದರು.<br>**ಕಾರ್ಯಪಾಲಕ ಅಭಿಯಂತರರು:** ವಿದ್ಯಾರ್ಥಿನಿಲಯದಲ್ಲಿರುವ ಸಿಬ್ಬಂದಿಗಳನ್ನೇ ಪಾಳಿ ಆಧಾರದ ಮೂಲಕ ಉಪಯೋಗಿಸಿಕೊಳ್ಳಲು ತಮ್ಮ ಸಲಹೆ ನೀಡಿದರು. |

| | |
|---|---|
| ತೀರ್ಮಾನ | ಮೈಸೂರು ನಗರ ವ್ಯಾಪ್ತಿಗೊಳಪಡುವ 08 ಮಹಿಳಾ ವಿದ್ಯಾರ್ಥಿನಿಲಯಗಳಲ್ಲಿನ ಹೆಚ್ಚುವರಿ 05 ಮಹಿಳಾ ಸಫಾಯಿ ಕರ್ಮಚಾರಿ ನಿಯೋಜನೆ ಸಂಬಂಧ, ಮೈಸೂರು ವಿಶ್ವವಿದ್ಯಾನಿಲಯದ ಕಾರ್ಯಪಾಲಕ ಅಭಿಯಂತರರೊಂದಿಗೆ ಚರ್ಚಿಸಿ ಕ್ರಮ ವಹಿಸಲು ಹಾಗೂ 05 ಮಂದಿ ರಾತ್ರಿ ಪಾಳಿ ಸಿಬ್ಬಂದಿಗಳನ್ನು ನೇಮಿಸುವ ಸಂಬಂಧ, ವಿಶ್ವವಿದ್ಯಾನಿಲಯದ ವತಿಯಿಂದ ಹೊಸದಾಗಿ ರಾತ್ರಿ ಪಾಳಿ ಸಿಬ್ಬಂದಿಗಳನ್ನು ನಿಯೋಜನೆ ಮಾಡುವವರೆಗೆ ಮಹಿಳಾ ವಿದ್ಯಾರ್ಥಿನಿಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಗ್ರೂಪ್-ಡಿ ಸಿಬ್ಬಂದಿಗಳನ್ನೆ ಪಾಳಿ ಆಧಾರದ ಮೇಲೆ ಕಾರ್ಯ ನಿರ್ವಹಿಸಲು ತೀರ್ಮಾನಿಸಲಾಯಿತು. |
| 4 | ಸ್ನಾತಕೋತ್ತರ ಪುರುಷ ವಿದ್ಯಾರ್ಥಿನಿಲಯಗಳಲ್ಲಿ ನಿಗದಿತ ಭೋಜನ ವೆಚ್ಚಕ್ಕಿಂತ ಹೆಚ್ಚುವರಿಯಾಗಿರುವ ಬಗ್ಗೆ. |
| ಪ್ರಸ್ತಾವನೆ | **ವಿ.ಕ್ಷೇ.ಪಾ ನಿರ್ದೇಶಕರು:** ಪುರುಷ ವಿದ್ಯಾರ್ಥಿನಿಲಯಗಳಲ್ಲಿ ನಿಗದಿತ ಭೋಜನ ವೆಚ್ಚಕ್ಕಿಂತ ಹೆಚ್ಚುವರಿಯಾಗಿ ವ್ಯಯವಾಗುತ್ತಿದೆ ಎಂದು ತಿಳಿಸಿದರು.<br>**ಪ್ರೊ. ರಾಮಚಂದ್ರರವರು ಮಾತನಾಡಿ,** ಅನಧೀಕೃತ ವಿದ್ಯಾರ್ಥಿಗಳು ಭೋಜನ ಮಾಡುತ್ತಿರುವುದರಿಂದ ವಿಶ್ವವಿದ್ಯಾನಿಲಯಕ್ಕೆ ಭೋಜನ ವೆಚ್ಚದ ಹೊರೆ ಹೆಚ್ಚಾಗಿದೆ. ದಯಮಾಡಿ ಟೋಕನ್ ಸಿಸ್ಟಮ್ ಮಾಡುವುದು ಒಳ್ಳೆಯದು ಹಾಗೂ ಅನಧೀಕೃತ ವಿದ್ಯಾರ್ಥಿಗಳು ಒಳ ಬರುವುದನ್ನು ತಡೆಗಟ್ಟಬೇಕೆಂದು ತಿಳಿಸಿದರು.<br>**ಕುಲಪತಿಗಳು ಹಾಗೂ ಕುಲಸಚಿವರು ಮಾತನಾಡಿ,** ಭೋಜನ ನೀಡುವ ಜವಾಬ್ದಾರಿ ಸಮಾಜಕಲ್ಯಾಣ ಇಲಾಖೆಯವರು ವಹಿಸಿಕೊಳ್ಳುವುದಾದರೆ ವಿಶ್ವವಿದ್ಯಾನಿಲಯವು ಸ್ವಾಗತಿಸುತ್ತದೆ ಎಂದು ತಿಳಿಸಿದರು ಇದಕ್ಕುತ್ತರವಾಗಿ ಸಮಾಜಕಲ್ಯಾಣ ಇಲಾಖೆಯ ಅಧಿಕಾರಿಗಳು ತಮ್ಮ ಮೇಲಾಧಿಕಾರಿಗಳ ಗಮನಕ್ಕೆ ತರುವುದಾಗಿ ತಿಳಿಸಿದರು. |
| ತೀರ್ಮಾನ | ಮೈಸೂರು ನಗರ ವ್ಯಾಪ್ತಿಗೊಳಪಡುವ ಸ್ನಾತಕೋತ್ತರ ಪುರುಷರ ವಿದ್ಯಾರ್ಥಿನಿಲಯಗಳಲ್ಲಿ ಭೋಜನ ವ್ಯವಸ್ಥೆಗೆ 09 ತಿಂಗಳಿಗೆ ರೂ.7,98,420/- ಹೆಚ್ಚುವರಿಯಾಗಿ ವೆಚ್ಚವಾಗುತ್ತಿರುವ ಸಂಬಂಧ ವರದಿಯನ್ನು ನೀಡುವಂತೆ ಹಾಗೂ ಸ್ನಾತಕ ಮತ್ತು ಸ್ನಾತಕೋತ್ತರ ವಿದ್ಯಾರ್ಥಿನಿಲಯಗಳ ಭೋಜನ ವ್ಯವಸ್ಥೆಗೆ ಸಂಬಂಧಿಸಿದಂತೆ ಖರ್ಚು-ವೆಚ್ಚಗಳ ಸಂಪೂರ್ಣ ಮಾಹಿತಿಯನ್ನು ಮಾನ್ಯ ಕುಲಪತಿಯವರಿಗೆ ಸಲ್ಲಿಸಲು ವಿ.ಕ್ಷೇ.ಪಾ. ನಿರ್ದೇಶಕರಿಗೆ ಸೂಚಿಸಲಾಯಿತು. ವಿ.ಕ್ಷೇ.ಪಾ ನಿರ್ದೇಶಕರು ಮತ್ತು ಆಡಳಿತಾಧಿಕಾರಿಗಳು, ಮಾ.ಗಂ, ಮೈಸೂರು ಇವರುಗಳ ಸಮ್ಮುಖದಲ್ಲಿ ವಿದ್ಯಾರ್ಥಿನಿಲಯಗಳಲ್ಲಿ ಭೋಜನಕ್ಕೆ ನಿಗದಿಪಡಿಸಿರುವ ವೆಚ್ಚಕ್ಕಿಂತ ಹೆಚ್ಚುವರಿಯಾಗಿ ಖರ್ಚಾಗುತ್ತಿರುವದನ್ನು ತಡೆಗಟ್ಟಲು ಸಮಿತಿಯನ್ನು ರಚಿಸಲು ತೀರ್ಮಾನಿಸಲಾಯಿತು. |
| 5 | ವಿಶ್ವವಿದ್ಯಾನಿಲಯದ ಮಹಿಳಾ ಸಂಶೋಧನಾ ವಿದ್ಯಾರ್ಥಿನಿಯರ ಕೊಠಡಿ ಬಾಡಿಗೆ, ವಾರ್ಷಿಕ ಶುಲ್ಕ ಹಾಗೂ ಪ್ರತ್ಯೇಕ ಕಟಡ ಕುರಿತು. |

| | |
|---|---|
| ಪ್ರಸ್ತಾವನೆ | ವಿ.ಕ್ಷೇ.ಪಾ ನಿರ್ದೇಶಕರು ಮಾತನಾಡಿ, ಸ್ನಾತಕೋತ್ತರ ಮಹಿಳಾ ವಿದ್ಯಾರ್ಥಿನಿಲಯ ಬ್ಲಾಕ್-1, ಮಾ.ಗಂ., ಮೈಸೂರು ಇಲ್ಲಿನ ವಿದ್ಯಾರ್ಥಿನಿಲಯದಲ್ಲಿ 45 ಸಂಶೋಧನಾರ್ಥಿಗಳು ಪ್ರವೇಶಾತಿಯನ್ನು ಪಡೆದಿರುವುದು ಸರಿಯಷ್ಟೆ. ಅದರೆ, ವಿಶ್ವವಿದ್ಯಾನಿಲಯವು ಪುರುಷ ಸಂಶೋಧನಾರ್ಥಿಗಳಿಗೆ ಉನ್ನತ ಸೌಕರ್ಯ ಹೊಂದಿರುವ ಪ್ರತ್ಯೇಕ ನಿಲಯವನ್ನು ನಿರ್ಮಿಸಿದೆ. ಜೊತೆಗೆ ಅವರಿಗೆ ಒಂದೊಂದು ಕೊಠಡಿಗೂ ಸ್ನಾನಗೃಹ ಹಾಗೂ ಶೌಚಾಲಯವನ್ನು ಮತ್ತು ಗೀಜರ್ ವ್ಯವಸ್ಥೆಯನ್ನು ಮಾಡಿದೆ. ಅದರೆ, ಮಹಿಳಾ ಸಂಶೋಧನಾ ವಿದ್ಯಾರ್ಥಿಗಳಿಗೆ ಪ್ರತ್ಯೇಕ ನಿಲಯವೂ ಇರುವುದಿಲ್ಲ. ಇರುವ 45 ಸಂಶೋಧನಾರ್ಥಿಗಳಿಗೆ 04 ಗೀಜರ್, 03 ಸ್ನಾನಗೃಹ ಮತ್ತು 03 ಶೌಚಾಲಯ ವ್ಯವಸ್ಥೆ ಇರುತ್ತದೆ. ಈಗ ಉನ್ನತ ಸೌಕರ್ಯ ಹೊಂದಿರುವ ಪುರುಷ ಸಂಶೋಧನಾರ್ಥಿಗಳಿಗೂ, ನಮಗೂ ಒಂದೇ ರೀತಿ ಕೊಠಡಿ ಬಾಡಿಗೆ ವಿಧಿಸಿರುವುದಕ್ಕೆ ನಮ್ಮ ಆಕ್ಷೇಪಣೆಯಿದೆ ಎಂದು ಮಹಿಳಾ ಸಂಶೋಧನಾರ್ಥಿಗಳು ತಿಳಿಸುತ್ತಾ, ಪುರುಷ ಮತ್ತು ಮಹಿಳಾ ಸಂಶೋಧನಾರ್ಥಿಗಳಿಗೆ ಒಂದೇ ರೀತಿಯ ನಿಲಯದ ಸೌಕರ್ಯವನ್ನು ನೀಡಿ ಒಂದೇ ರೀತಿಯ ಕೊಠಡಿ ಬಾಡಿಗೆ ವಿಧಿಸಬೇಕು, ಇಲ್ಲವಾದಲ್ಲಿ ಮಹಿಳಾ ಸಂಶೋಧನಾರ್ಥಿಗಳಿಗೆ ಕೊಠಡಿ ಬಾಡಿಗೆಯಲ್ಲಿ ವಿನಾಯಿತಿಯನ್ನು ನೀಡಬೇಕೆಂದು ಮನವಿ ಮಾಡಿರುತ್ತಾರೆ ಹಾಗೂ ದಿ.27.03.2023ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ಸಿಂಡಿಕೇಟ್ ಸದಸ್ಯರಾದ ಡಾ.ಚೈತ್ರ ನಾರಾಯಣ್ ಅವರು ಮಹಿಳಾ ವಿದ್ಯಾರ್ಥಿನಿಲಯದಲ್ಲಿ ಪ್ರವೇಶಾತಿ ಪಡೆದಿರುವ ಎಲ್ಲಾ ವಿದ್ಯಾರ್ಥಿಗಳಿಗೂ ಕೋವಿಡ್ ಅವಧಿಯ ವರ್ಷಿಕ ಶುಲ್ಕವನ್ನು ಮನ್ನಾ ಮಾಡಬೇಕೆಂದು ತಿಳಿರುವುದನ್ನು ಸಹ ಸಭೆಯ ಗಮನಕ್ಕೆ ತರುತ್ತಾ. ಈ ಬಗ್ಗೆ ಮುಂದಿನ ನಿರ್ದೇಶನಕ್ಕಾಗಿ ಸಮಿತಿಗೆ ವಿಷಯವನ್ನು ಮಂಡಿಸಿದರು. |
| ತೀರ್ಮಾನ | **ವಿಶ್ವವಿದ್ಯಾನಿಲಯದ ಮಹಿಳಾ ಸಂಶೋಧನಾ ವಿದ್ಯಾರ್ಥಿನಿಯರ ಕೊಠಡಿ ಬಾಡಿಗೆಯಲ್ಲಿ ಯಾವುದೇ ವಿನಾಯಿತಿ ಇರುವುದಿಲ್ಲ, ಸದರಿ ಸಂಶೋಧನಾರ್ಥಿಗಳಿಗೆ ಪ್ರತಿ ವರ್ಷ ವಾರ್ಷಿಕ ಶುಲ್ಕದ ಬದಲಿಗೆ ನಿರ್ವಹಣಾ ವೆಚ್ಚವೆಂದು ಪಾವತಿಸಿಕೊಳ್ಳಲು ಹಾಗೂ ಮಹಿಳಾ ಸಂಶೋಧನಾರ್ಥಿಗಳಿಗೆ ಪ್ರತ್ಯೇಕ ಕಟ್ಟಡ ಸಂಬಂಧ ಮುಂದಿನ ದಿನಗಳಲ್ಲಿ ಕ್ರಮ ವಹಿಸಲಾಗುವುದೆಂದು ತೀರ್ಮಾನಿಸಲಾಯಿತು.** |
| 6 | **ಸಂಶೋಧನಾ ವಿದ್ಯಾರ್ಥಿಗಳ ಡಿಸೆಂಬರ್-2022ರ ಮಾಹೆಯ ಭೋಜನ ಶುಲ್ಕ ವಸೂಲಾತಿ ಬಗ್ಗೆ.** |
| ಪ್ರಸ್ತಾವನೆ | ವಿ.ಕ್ಷೇ.ಪಾ ನಿರ್ದೇಶಕರು ಮಾತನಾಡಿ, ಶಿಕ್ಷಕ ಸಲಹೆಗಾರರ ನೇತೃತ್ವದಲ್ಲಿ ಸಂಶೋಧನಾ ವಿದ್ಯಾರ್ಥಿನಿಲಯದಲ್ಲಿ ಭೋಜನ ಪಡೆಯುವ ವಿದ್ಯಾರ್ಥಿಗಳ ಸಂಖ್ಯೆಗನುಗುಣವಾಗಿ ವಿಭಜಿಸುವ ಪದ್ಧತಿ ಆಧಾರದ ಮೇಲೆ ಭೋಜನ ಶುಲ್ಕವನ್ನು ಪಾವತಿಸಿಕೊಳ್ಳುವಂತೆ ಆದೇಶಿಸಿರುವುದರಿಂದ ದಿನಾಂಕ:01-12-2022 ರಿಂದ ಭೋಜನ ವ್ಯವಸ್ಥೆಯನ್ನು ಒದಗಿಸಲಾಗಿ ಸದರಿ ಮಾಹೆಯಲ್ಲಿ 92 ಸಂಶೋಧನಾರ್ಥಿಗಳಿಗೆ ನಿಲಯದಲ್ಲಿ ಭೋಜನ ಒದಗಿಸಿದ ಒಟ್ಟು ಮೊತ್ತ **ರೂ.2,67,026/-**ಗಳಾಗಿದ್ದು (ದಿನಸಿ, ತರಕಾರಿ/ಬಾಳೆಹಣ್ಣು/ಮೊಟ್ಟೆ /ಚಿಕನ್/ಹಾಲು ಮತ್ತು ಮೊಸರು, ಮತ್ತು ಗ್ಯಾಸ್ ಸಿಲಿಂಡರ್‌ಗಳ ಮಾಹೆಯಾನ ಒಟ್ಟು ವೆಚ್ಚ ಸೇರಿ) ಒಬ್ಬರಿಗೆ ರೂ.2,903/- ತಗಲುತ್ತದೆ (ರೂ.2,67,026/92=ರೂ.2,903/-) ಸದರಿ ಮೊತ್ತವನ್ನು ಪಾವತಿಸಬೇಕೆಂದು ಸಂಶೋಧನಾ ವಿದ್ಯಾರ್ಥಿಗಳಿಗೆ ಪ್ರಕಟಣೆ ಮೂಲಕ ಸೂಚಿಸಲಾಗಿ ಎಲ್ಲಾ ಸ್ನಾತಕ ಮತ್ತು ಸ್ನಾತಕೋತ್ತರ ವಿದ್ಯಾರ್ಥಿನಿಲಯಗಳಲ್ಲಿ ನಿಗಧಿಪಡಿಸಿರುವ ಮಾಹೆಯಾನ ಭೋಜನ ಶುಲ್ಕ ರೂ.1900/-ಗಳನ್ನು ಮಾತ್ರ ಪಾವತಿಸುತ್ತೇವೆ ಹೆಚ್ಚುವರಿ **ರೂ.1,003/-ಗಳನ್ನು** ಪಾವತಿಸುವುದಿಲ್ಲವೆಂದು ಮನವಿ ಮಾಡಿರುತ್ತಾರೆ. ಆದ್ದರಿಂದ ಒಬ್ಬರಿಗೆ **ರೂ.2,903/-**ರಂತೆ 92 ಸಂಶೋಧನಾರ್ಥಿಗಳಿಂದ ವಸೂಲಾತಿ ಮಾಡುವ ಕ್ರಮದ ಬಗ್ಗೆ ಸಲಹಾ ಸಮಿತಿ ಸಭೆಗೆ ಮಂಡಿಸಿದರು. |

| | |
|---|---|
| ತೀರ್ಮಾನ | ವಿಶ್ವವಿದ್ಯಾನಿಲಯದ ಸಂಶೋಧನಾ ವಿದ್ಯಾರ್ಥಿನಿಲಯದಲ್ಲಿ ಭೋಜನ ಪಡೆದಿರುವ 92 ಸಂಶೋಧನಾರ್ಥಿಗಳಿಂದ ಒಬ್ಬರಿಗೆ ರೂ.2,903/-ರಂತೆ ಭೋಜನ ವೆಚ್ಚವನ್ನು ವಸೂಲಿ ಮಾಡಲು ವಿ.ಕ್ಷೇ.ಪಾ. ನಿರ್ದೇಶಕರಿಗೆ ಸೂಚಿಸಲಾಯಿತು. |
| 7 | ತಾತ್ಕಾಲಿಕ ನೋಂದಣಿ (Provisional Registration Certificate) ಪಡೆದ ಸಂಶೋಧನಾರ್ಥಿಗಳಿಂದ ಭೋಜನ ಪಡೆದಿರುವ ಶುಲ್ಕ ವಸೂಲಾತಿ ಬಗ್ಗೆ. |
| ಪ್ರಸ್ತಾವನೆ | ವಿ.ಕ್ಷೇ.ಪಾ ನಿರ್ದೇಶಕರು ಮಾತನಾಡಿ, ಸ್ನಾತಕೋತ್ತರ ಪುರುಷರ ವಿದ್ಯಾರ್ಥಿನಿಲಯ ಬ್ಲಾಕ್ -2 ನಲ್ಲಿ 66 ಸಂಶೋಧನಾರ್ಥಿಗಳು ಅಧಿಕೃತವಾಗಿ ಪ್ರವೇಶಾತಿ ಪಡೆದಿದ್ದರು. ನಂತರ ಡಿಸೆಂಬರ್ 2021ರ ಮಾಹೆಯಿಂದ ತಾತ್ಕಾಲಿಕ ನೋಂದಣಿ ಪಡೆದ ಸಂಶೋಧನಾರ್ಥಿಗಳ ಸಂಖ್ಯೆ 34 ಹಾಗೂ 03 ವಿಕಲ ಚೇತನ ಸಂಶೋಧನಾರ್ಥಿಗಳು ಸೇರಿದಂತೆ ಒಟ್ಟಾರೆ 103 ಪಿ.ಹೆಚ್.ಡಿ ಸಂಶೋಧನಾರ್ಥಿಗಳು ಪ್ರವೇಶಾತಿ ಪಡೆದಿರುತ್ತಾರೆ. ಸದರಿಯವರಿಗೆ ಡಿಸೆಂಬರ್ 2021ರ ಮಾಹೆಯಿಂದ ನಿಲಯದಲ್ಲಿ ವಾಸ್ತವ್ಯ ಹೂಡಲು ಮಾತ್ರ ಅನುಮತಿ ನೀಡಲಾಗಿತ್ತು. ಆದರೆ, 103 ಸಂಶೋಧನಾರ್ಥಿಗಳು ಡಿಸೆಂಬರ್ 2021ರಿಂದ ನವೆಂಬರ್ 2022ರವರೆಗೆ ಭೋಜನವನ್ನು ಪಡೆಯುತ್ತಿದ್ದು ಭೋಜನ ಶುಲ್ಕವನ್ನು ಪಾವತಿಸಿರುವುದಿಲ್ಲ. ಈ ಸಂಬಂಧ ಸದರಿ ಸಂಶೋಧನಾರ್ಥಿಗಳಿಂದ ಒಟ್ಟಾರೆ 23,48,400/-ಗಳ ಭೋಜನ ಶುಲ್ಕವನ್ನು ವಸೂಲಾತಿ ಮಾಡುವ ಕ್ರಮದ ಬಗ್ಗೆ ಸಲಹೆಗಾಗಿ ಮಂಡಿಸಿದರು. |
| ತೀರ್ಮಾನ | ವಿಶ್ವವಿದ್ಯಾನಿಲಯದಲ್ಲಿ ಸ್ನಾತಕೋತ್ತರ ಪುರುಷರ ವಿದ್ಯಾರ್ಥಿನಿಲಯ ಬ್ಲಾಕ್-2ನಲ್ಲಿ ಡಿಸೆಂಬರ್ 2021 ರಿಂದ ನವೆಂಬರ್ 2022ರವರೆಗೆ ಭೋಜನವನ್ನು ಪಡೆದಿರುವ 103 ಸಂಶೋಧನಾರ್ಥಿಗಳಿಂದ ಒಟ್ಟಾರೆ ರೂ.23,48,400/-ಗಳ ಭೋಜನ ವೆಚ್ಚವನ್ನು ವಸೂಲಾತಿ ಮಾಡಲು ತೀರ್ಮಾನಿಸಲಾಯಿತು. |
| 8 | ಸ್ನಾತಕ, ಸ್ನಾತಕೋತ್ತರ ಹಾಗೂ ಸಂಶೋಧನ ವಿದ್ಯಾರ್ಥಿನಿಲಯಗಳಿಗೆ ಸಿ.ಸಿ. ಟಿವಿ ಕ್ಯಾಮರಾ ಹಾಗೂ ವೈಫೈ ರೂಟರ್‌ಗಳನ್ನು ಅಳಡಿಸಿಕೊಡುವ ಬಗ್ಗೆ. |
| ತೀರ್ಮಾನ | ಸ್ನಾತಕ, ಸ್ನಾತಕೋತ್ತರ ಹಾಗೂ ಸಂಶೋಧನ ವಿದ್ಯಾರ್ಥಿನಿಲಯಗಳಿಗೆ ಸಿ.ಸಿ. ಟಿವಿ ಕ್ಯಾಮರಾ ಹಾಗೂ ವೈಫೈ ರೂಟರ್‌ಗಳನ್ನು ಅಳಡಿಸಿಕೊಡುವ ಸಂಬಂಧ ನಿರ್ದೇಶಕರು, ಐ.ಸಿ.ಡಿ ವಿಭಾಗ, ಮಾ.ಗಂ. ಮೈಸೂರು ಇವರೊಂದಿಗೆ ಪತ್ರ ವ್ಯವಹಾರ ನಡೆಸಲು ಹಾಗೂ ಸದರಿ ವಿಭಾಗದವರು ಕ್ರಮವಹಿಸುವಂತೆ ಸೂಚಿಸಲಾಯಿತ್ತು. |
| 9 | ಸ್ನಾತಕ, ಸ್ನಾತಕೋತ್ತರ ಹಾಗೂ ಸಂಶೋಧನಾ ವಿದ್ಯಾರ್ಥಿನಿಲಯಗಳ ಪೀಠೋಪಕರಣಗಳ ಹಾಗೂ ವಾರ್ಷಿಕ ನಿರ್ವಹಣೆ (ಕೋಣೆಯ ಕಿಟಕಿ, ಬಾಗಿಲು, ಬಾಗಿಲಿನ ಚಿಲಕ, ವಿದ್ಯುತ್, ಗೀಸರ್, ಆರ್.ಓ. ಪ್ಲಾಂಟ್, ಕಸ ವಿಲೇವಾರಿ ಮತ್ತು ಟ್ಯಾಂಕ್ ಕ್ಲೀನ್) |
| ತೀರ್ಮಾನ | ಸ್ನಾತಕ, ಸ್ನಾತಕೋತ್ತರ ಹಾಗೂ ಸಂಶೋಧನಾ ವಿದ್ಯಾರ್ಥಿನಿಲಯಗಳ ಪೀಠೋಪಕರಣಗಳ ಹಾಗೂ ವಾರ್ಷಿಕ ನಿರ್ವಹಣೆ ಸಂಬಂಧ ವಿಶ್ವವಿದ್ಯಾನಿಲಯದ ಕಾರ್ಯಪಾಲಕ ಅಭಿಯಂತರರು ವಿಭಾಗಕ್ಕೆ ವಿದ್ಯಾರ್ಥಿನಿಲಯಗಳ ಹೆಸರುಗಳೊಂದಿಗೆ ಪೀಠೋಪಕರಣಗಳ ಹಾಗೂ ವಾರ್ಷಿಕ ನಿರ್ವಹಣೆಯ ಪಟ್ಟಿಯನ್ನು ಸಲ್ಲಿಸುವಂತೆ ಹಾಗೂ ಕಾರ್ಯಪಾಲಕ ಅಭಿಯಂತರರಿಗೆ ಸದರಿ ವಿಷಯಕ್ಕೆ ಸಂಬಂಧಿಸಿದಂತೆ ತುರ್ತಾಗಿ ಕ್ರಮ ವಹಿಸುವಂತೆ ಸೂಚಿಸಲಾಯಿತ್ತು. |
| 10 | ವಿದ್ಯಾರ್ಥಿನಿಲಯಗಳಿಗೆ ಗುಮಾಸ್ತರುಗಳ ಕೊರತೆ ಕುರಿತು |
| ತೀರ್ಮಾನ | ಸ್ನಾತಕ/ಸ್ನಾತಕೋತ್ತರ ವಿದ್ಯಾರ್ಥಿನಿಲಯಗಳಲ್ಲಿ ಗುಮಾಸ್ತರುಗಳ ಕೊರತೆಯಿದ್ದಲ್ಲಿ ಅವಶ್ಯಕತೆಯಿರುವ ಗುಮಾಸ್ತರುಗಳ ಸಂಖ್ಯೆಯೊಂದಿಗೆ ಪಟ್ಟಿಯನ್ನು ಸಲ್ಲಿಸಿ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದಾಗಿ ತಿಳಿಸಲಾಯಿತ್ತು. |

| | |
|---|---|
| 11 | **2023–24ನೇ ಆಯವ್ಯಯದಲ್ಲಿ 'ಅಂತರ ಕಾಲೇಜು ಸಾಹಿತ್ಯಕ ಚಟುವಟಿಕೆಗಳು –129' ಶೀರ್ಷಿಕೆಯಲ್ಲಿ ರೂ. 12,00,000/–ಗಳನ್ನು ಮೀಸಲಿಡುವ ಕುರಿತು.** |
| ಪ್ರಸ್ತಾವನೆ | ವಿ.ಕ್ಷೇ.ಪಾ ನಿರ್ದೇಶಕರು ಮಾತನಾಡಿ, 2022–23ನೇ ಹಣಕಾಸು ಸಾಲಿನಲ್ಲಿ ವಿಶ್ವವಿದ್ಯಾನಿಲಯದ ಆಯುವ್ಯಯುದ ಬಜೆಟ್‌ನಲ್ಲಿ ಅಂತರ ಕಾಲೇಜು ಸಾಹಿತ್ಯಕ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳನ್ನು ನಡೆಸಲು ರೂ.4,50,000/–(ನಾಲ್ಕು ಲಕ್ಷದ ಐವತ್ತು ಸಾವಿರ ರೂಪಾಯಿ)ಗಳನ್ನು ನಿಗದಿಪಡಿಸಲಾಗಿತ್ತು. ಆದರೆ, ನಿಗದಿಪಡಿಸಿರುವ ಮೊತ್ತವು ಖರ್ಚಾಗಿದ್ದು, ದಕ್ಷಿಣ ವಲಯ ಯುವಜನೋತ್ಸವ ಹಾಗೂ ರಾಷ್ಟ್ರೀಯ ಯುವಜನೋತ್ಸವ ಸ್ಪರ್ಧೆಗಳಿಗೆ ಹೆಚ್ಚುವರಿಯಾಗಿ ಮೊತ್ತ ರೂ.5,00,000/–(ಐದು ಲಕ್ಷ ರೂಪಾಯಿ) ಗಳನ್ನು ಪುನರ್ ನಿಗದಿಪಡಿಸಿ ಒಟ್ಟಾರೆ, ರೂ.9,50,000/–ಗಳನ್ನು ಮಂಜೂರು ಮಾಡಲಾಗಿತ್ತು. 2023–24ನೇ ಶೈಕ್ಷಣಿಕ ಸಾಲಿನಲ್ಲಿ ಅಂತರ ಕಾಲೇಜು ಸಾಂಸ್ಕೃತಿಕ ಸ್ಪರ್ಧೆಗಳನ್ನು ನಡೆಸಲು ಮತ್ತು ದಕ್ಷಿಣ ಪೂರ್ವ ವಲಯ ಯುವಜನೋತ್ಸವ ಹಾಗೂ ರಾಷ್ಟ್ರೀಯ ಯುವಜನೋತ್ಸವ ಸ್ಪರ್ಧೆಗಳಲ್ಲಿ ಭಾಗವಹಿಸುವ ಮೈಸೂರು ವಿಶ್ವವಿದ್ಯಾನಿಲಯದ ಪ್ರತಿನಿಧಿಗಳ ಖರ್ಚು ವೆಚ್ಚಗಳಿಗೆ ಸಂಬಂಧಿಸಿದಂತೆ, 2023–24ನೇ ಆಯವ್ಯಯದಲ್ಲಿ 'ಅಂತರ ಕಾಲೇಜು ಸಾಹಿತ್ಯಕ ಚಟುವಟಿಕೆಗಳು –129' ಶೀರ್ಷಿಕೆಯಲ್ಲಿ ರೂ.12,00,000/–ಗಳನ್ನು ಮೀಸಲಿಡುವ ಬಗ್ಗೆ ಸಲಹಾ ಸಮಿತಿಯ ತೀರ್ಮಾನಕ್ಕಾಗಿ ಮಂಡಿಸಿದರು. |
| ತೀರ್ಮಾನ | **2023–24ನೇ ಶೈಕ್ಷಣಿಕ ಸಾಲಿನಲ್ಲಿ ಅಂತರ ಕಾಲೇಜು ಸಾಂಸ್ಕೃತಿಕ ಸ್ಪರ್ಧೆಗಳನ್ನು ನಡೆಸಲು ಮತ್ತು ದಕ್ಷಿಣ ಪೂರ್ವ ವಲಯ ಯುವಜನೋತ್ಸವ ಹಾಗೂ ರಾಷ್ಟ್ರೀಯ ಯುವಜನೋತ್ಸವ ಸ್ಪರ್ಧೆಗಳಲ್ಲಿ ಭಾಗವಹಿಸುವ ಮೈಸೂರು ವಿಶ್ವವಿದ್ಯಾನಿಲಯದ ಪ್ರತಿನಿಧಿಗಳ ಖರ್ಚು ವೆಚ್ಚಗಳಿಗೆ ಸಂಬಂಧಿಸಿದಂತೆ, ಐ.ಕ್ಯೂ.ಎ.ಸಿ. ವಿಭಾಗಕ್ಕೆ ಪತ್ರ ವ್ಯವಹಾರ ನಡೆಸಿ ಖರ್ಚುವೆಚ್ಚಗಳ ವರದಿಯನ್ನು ಪಡೆದು ಸಲ್ಲಿಸಿದ ನಂತರ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದೆಂದು ತಿಳಿಸಲಾಯಿತ್ತು.** |
| 12 | **2022–23ನೇ ಸಾಲಿನ ವಿದ್ಯಾರ್ಥಿನಿಲಯದ ಸ್ನಾತಕ/ಸ್ನಾತಕೋತ್ತರ/ಡಿಪ್ಲೋಮಾ ಪದವಿ ವ್ಯಾಸಂಗ ಮಾಡುತ್ತಿರುವ ಪ.ಜಾ/ಪ.ವರ್ಗದ ವಿದ್ಯಾರ್ಥಿಗಳ ಪರೀಕ್ಷಾ ಅವಧಿಯ ಭೋಜನ ವೆಚ್ಚವನ್ನು ವಿ.ವಿ.ವತಿಯಿಂದ ಪಾವತಿಸುವ ಬಗೆ.** |
| ಪ್ರಸ್ತಾವನೆ | **ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯ ನಿರ್ದೇಶಕರು:** ಸ್ನಾತಕ/ ಸ್ನಾತಕೋತ್ತರ/ ಡಿಪ್ಲೋಮಾ ಪದವಿಗಳು ಮಾಡುತ್ತಿರುವ ಎಸ್‌ಸಿ/ಎಸ್‌ಟಿ ವಿದ್ಯಾರ್ಥಿಗಳ ಪರೀಕ್ಷಾ ಅವಧಿ ವ್ಯತ್ಯಾಸದಿಂದಾಗಿ ಅಧಿಕ ಭೋಜನದ ವೆಚ್ಚ ಬರುತ್ತಿರುವುದನ್ನು ಸಭೆಯ ಗಮನಕ್ಕೆ ತಂದರು. |
| ತೀರ್ಮಾನ | **2022–23ನೇ ಸಾಲಿನ ವಿದ್ಯಾರ್ಥಿನಿಲಯದ ಸ್ನಾತಕ/ಸ್ನಾತಕೋತ್ತರ/ಡಿಪ್ಲೋಮಾ ಪದವಿ ವ್ಯಾಸಂಗ ಮಾಡುತ್ತಿರುವ ಪ.ಜಾ/ಪ.ವರ್ಗದ ವಿದ್ಯಾರ್ಥಿಗಳ ಪರೀಕ್ಷಾ ಅವಧಿಯ ಭೋಜನ ವೆಚ್ಚಕ್ಕೆ ಸಂಬಂಧಿಸಿದಂತೆ ವಿದ್ಯಾರ್ಥಿಗಳ ಸಂಖ್ಯೆಗನುಗುಣವಾಗಿ ಖರ್ಚಾಗುವ ಒಟ್ಟು ಮೊತ್ತದ ವರದಿಯನ್ನು ಸಲ್ಲಿಸಿ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದೆಂದು ಹಾಗೂ ಮಾನ್ಯ ಕುಲಸಚಿವರು(ಪರೀಕ್ಷಾಂಗ) ರವರಿಗೆ ಸ್ನಾತಕ/ಸ್ನಾತಕೋತ್ತರ/ಡಿಪ್ಲೋಮಾ ಪದವಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಮುಂದಿನ ಶೈಕ್ಷಣಿಕ ಸಾಲಿನಿಂದ ಏಕಕಾಲಕ್ಕೆ ಪರೀಕ್ಷೆಯು ಅಂತ್ಯಗೊಳ್ಳುವಂತೆ ವೇಳಾ ಪಟ್ಟಿಯನ್ನು ಸಿದ್ಧಪಡಿಸುವಂತೆ ಸೂಚಿಸಲಾಯಿತ್ತು.** |
| 13 | **ಮೈಸೂರು ವಿ.ವಿ.ಉದ್ಯೋಗಸ್ಥ ಮಹಿಳಾ ವಸತಿನಿಲಯದ ಕೊಠಡಿ ಬಾಡಿಗೆ ಹಾಗೂ ವಾರ್ಷಿಕ ಶುಲ್ಕ ಕುರಿತು.** |
| ಪ್ರಸ್ತಾವನೆ | **ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯ ನಿರ್ದೇಶಕರು:** ಮೈಸೂರು ವಿ.ವಿ ಉದ್ಯೋಗಸ್ಥ ಮಹಿಳೆಯರು ವಸತಿನಿಲಯದ ಕೊಠಡಿ ಬಾಡಿಗೆ ವಾರ್ಷಿಕ ಶುಲ್ಕ ಕಡಿಮೆ ಮಾಡುವುದಕ್ಕೆ ತಿಳಿಸಿರುತ್ತಾರೆ ಮನವಿ ಮಾಡಿರುವ ವಿಷಯುವನ್ನು ಸಭೆಯಲ್ಲಿ ಮಂಡಿಸಿದರು. |

| | |
|---|---|
| ತೀರ್ಮಾನ | ಮೈಸೂರು ವಿಶ್ವವಿದ್ಯಾನಿಲಯದ ಉದ್ಯೋಗಸ್ಥ ಮಹಿಳಾ ವಸತಿ ನಿಲಯಕ್ಕೆ ಪ್ರವೇಶಾತಿ ಪಡೆದ/ಪಡೆಯುವ ನಿಲಯಾರ್ಥಿಗಳಿಗೆ ಪ್ರತಿ ತಿಂಗಳ ಕೊಠಡಿ ಬಾಡಿಗೆ ರೂ.1,300/-ಗಳಿಂದ ರೂ.1,400/-ರಂತೆ ಹೆಚ್ಚಿಸುವುದು, ವಾರ್ಷಿಕ ಶುಲ್ಕದಲ್ಲಿ ಯಾವುದೇ ವಿನಾಯಿತಿ ಇರುವುದಿಲ್ಲ ಹಾಗೂ ಪ್ರತಿ ವರ್ಷ ವಾರ್ಷಿಕ ಶುಲ್ಕದ ಬದಲಿಗೆ ನಿರ್ವಹಣಾ ವೆಚ್ಚವನ್ನು ಪಾವತಿಸಿಕೊಳ್ಳಲು ಸೂಚಿಸಲಾಯಿತು. |
| 14 | 2023-24ನೇ ಆರ್ಥಿಕ ಸಾಲಿನ ಆಯವ್ಯಯ ಕಚೇರಿ ಸಾದಿಲ್ವಾರು ಶೀರ್ಷಿಕೆ '115' ರಲ್ಲಿ ರೂ.1,50,000/-ಗಳನ್ನು ಮೀಸಲಿಡುವ ಬಗ್ಗೆ. |
| ಪ್ರಸ್ತಾವನೆ | ವಿ.ಕ್ಷೇ.ಪಾ ನಿರ್ದೇಶಕರು ಮಾತನಾಡಿ, 2022-23ನೇ ಆರ್ಥಿಕ ಸಾಲಿಗೆ ನಿರ್ದೇಶನಾಲಯದ ದೈನಂದಿನ ಖರ್ಚುವೆಚ್ಚಕ್ಕಾಗಿ ಕಚೇರಿ ಸಾದಿಲ್ವಾರು **ರೂ.1,00,000/-**ಗಳನ್ನು ಆಯವ್ಯಯದಲ್ಲಿ ಮೀಸಲಿಡಿಸಲಾಗಿತ್ತು. ಆದರೆ ನಿರ್ದೇಶನಾಲಯದ ಕಾರ್ಯ ಚಟುವಟಿಕೆಗಳ ವ್ಯಾಪ್ತಿಯಲ್ಲಿ ಟೆಂಡರ್ ಪ್ರಕ್ರಿಯೆಗೆ ಸಂಬಂಧಿಸಿದಂತೆ ಹಾಗೂ ವಿದ್ಯಾರ್ಥಿನಿಲಯಗಳಲ್ಲಿನ ಸಮಸ್ಯೆಗಳಿಗೆ ಸಂಬಂಧಿಸಿದಂತೆ ರಚನೆಯಾಗುವ ಸಮಿತಿ ಸಭೆಗಳ ಆಯೋಜನೆಯ ವೆಚ್ಚ, ಲೇಖನ ಸಾಮಗ್ರಿಗಳು ಮತ್ತು ಸ್ವಚ್ಛತಾ ಸಾಮಗ್ರಿಗಳ ಖರೀದಿ, ಜೆರಾಕ್ಸ್ ಯಂತ್ರದ ಟೋನರ್ ಬದಲಾವಣೆ ಹಾಗೂ ದುರಸ್ತಿ ಸಂಬಂಧದ ವೆಚ್ಚ ಮತ್ತು ನಿರ್ದೇಶನಾಲಯದ ಎಲ್ಲಾ ಪ್ರಿಂಟರ್‌ಗಳ ರೀಫಿಲ್ಲಿಂಗ್ ವೆಚ್ಚಗಳಿಗಾಗಿ 2022-23ನೇ ಆರ್ಥಿಕ ಸಾಲಿನ ಆಯವ್ಯಯ ಕಚೇರಿ ಸಾದಿಲ್ವಾರು ಶೀರ್ಷಿಕೆ '115' ರಲ್ಲಿ ನಿಗದಿಪಡಿಸಿರುವ ಮೊತ್ತಕ್ಕಿಂತ ಹೆಚ್ಚುವರಿಯಾಗಿ ಖರ್ಚಾಗುತ್ತಿರುವುದರಿಂದ 2023-24ನೇ ಸಾಲಿನಲ್ಲಿ ರೂ.1,50,000/-ಗಳನ್ನು ಮೀಸಲಿಡುವುದರ ಬಗ್ಗೆ ಸಮಿತಿಯ ತೀರ್ಮಾನಕ್ಕಾಗಿ ಮಂಡಿಸಿದರು. |
| ತೀರ್ಮಾನ | 2023-24ನೇ ಆರ್ಥಿಕ ಸಾಲಿನ ಆಯವ್ಯಯ ಕಚೇರಿ ಸಾದಿಲ್ವಾರು ಶೀರ್ಷಿಕೆ '115' ರಲ್ಲಿ ರೂ.1,50,000/-ಗಳನ್ನು ಮೀಸಲಿಡುವ ಸಂಬಂಧ ಖರ್ಚು ವೆಚ್ಚಗಳ ಪಟ್ಟಿಯನ್ನು ಸಲ್ಲಿಸಿ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದೆಂದು ತೀರ್ಮಾನಿಸಲಾಯಿತು. |
| 15 | ವಿದ್ಯಾರ್ಥಿಗಳ ಆರೋಗ್ಯ ರಕ್ಷಣೆ ಯೋಜನೆ ಕುರಿತು. |
| ತೀರ್ಮಾನ | ಆಯುಷ್ಮಾನ್ ಭಾರತ್ ಯೋಜನೆಯಡಿಯಲ್ಲಿ ವಿದ್ಯಾರ್ಥಿನಿಲಯದ ವಿದ್ಯಾರ್ಥಿಗಳಿಗೆ ಆರೋಗ್ಯ ಶಿಬಿರವನ್ನು ನಡೆಸಲು ಕ್ರಮ ವಹಿಸಲಾಗುವುದು ಹಾಗೂ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಆರೋಗ್ಯದ ತುರ್ತು ಸಂಧರ್ಭದಲ್ಲಿ ಧನಸಹಾಯವನ್ನು ವಿ.ಕ್ಷೇ.ಪಾ. ನಿರ್ದೇಶನಾಲಯದ ಕಚೇರಿ ಸಾದಿಲ್ವಾರು ಶೀರ್ಷಿಕೆಯಲ್ಲಿ ಪಾವತಿಸಲು ಸೂಚಿಸಲಾಯಿತು. |

| ನಿರ್ದೇಶಕರು<br>ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯ<br>ಮಾನಸಗಂಗೋತ್ರಿ, ಮೈಸೂರು | ಕುಲಸಚಿವರು<br>ಮೈಸೂರು ವಿಶ್ವವಿದ್ಯಾನಿಲಯ<br>ಮೈಸೂರು | ಕುಲಪತಿಗಳು<br>ಮೈಸೂರು ವಿಶ್ವವಿದ್ಯಾನಿಲಯ<br>ಮೈಸೂರು |
|---|---|---|

ದಿನಾಂಕ 07-08-2023ರ ಅಪರಾಹ್ನ 3.30 ಗಂಟೆಗೆ ಮೈಸೂರು ವಿಶ್ವವಿದ್ಯಾನಿಲಯದ ಶೈಕ್ಷಣಿಕ ಸಭಾಂಗಣದಲ್ಲಿ ಕುಲಸಚಿವರ ಅಧ್ಯಕ್ಷತೆಯಲ್ಲಿ ವಿಶ್ವವಿದ್ಯಾನಿಲಯದ ವಿದ್ಯಾರ್ಥಿ ನಿಲಯಗಳ ಆಡಳಿತ, ನಿರ್ವಹಣೆ ಹಾಗೂ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿಗೆ ಸಂಬಂಧಿಸಿದಂತೆ ರಚಿಸಿರುವ ಸಲಹಾ ಸಮಿತಿ ಸಭೆಯ ನಡವಳಿ.

ಸಭೆಯಲ್ಲಿ ಉಪಸ್ಥಿತರಿದ್ದವರು:

| | | |
|---|---|---|
| **1.** | ಕುಲಸಚಿವರು,<br>ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು. | ಅಧ್ಯಕ್ಷರು |
| **2.** | ಜಂಟಿ ನಿರ್ದೇಶಕರು<br>ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ,<br>ನೂತನ ಜಿಲ್ಲಾಧಿಕಾರಿಗಳ ಕಟ್ಟಡ, ಕೊಠಡಿ ಸಂಖ್ಯೆ-22,<br>ಗಿರಿಬೋವಿಯ ಪಾಳ್ಯ, ಮೈಸೂರು-570 011. | ಸದಸ್ಯರು |
| **3.** | ತಾಲ್ಲೋಕು ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳು,<br>ವಾಲ್ಮೀಕಿ ಭವನ, ವಿಜಯನಗರ 2ನೇ ಹಂತ, ಮೈಸೂರು-570 017 | ಸದಸ್ಯರು |
| **4.** | ಕುಲಸಚಿವರು (ಪರೀಕ್ಷಾಂಗ)<br>ಮೈಸೂರು ವಿಶ್ವವಿದ್ಯಾನಿಲಯ<br>ಮೈಸೂರು-5 | ಸದಸ್ಯರು |
| **5.** | ಹಣಕಾಸು ಅಧಿಕಾರಿಗಳು<br>ಮೈಸೂರು ವಿಶ್ವವಿದ್ಯಾನಿಲಯ,<br>ಮೈಸೂರು. | ಸದಸ್ಯರು |
| **6.** | ಶ್ರೀ. ಎಂ. ಬಿ. ಗಪ್ಪಣ್ಣ<br>ಸಿಂಡಿಕೇಟ್ ಸದಸ್ಯರು,<br>ನಂ.20, ಗ್ರೂಯಿತ್ ಮತ್ತು ಲೋಕ ಹೌಸ್ ಹತ್ತಿರ,<br>ಜೋಡಿ ಬೇವಿನ ಮರದ ಹತ್ತಿರ, ದಟ್ಟಗಳ್ಳಿ 3ನೇ ಹಂತ, ಮೈಸೂರು. | ಸದಸ್ಯರು |
| **7.** | ನಿರ್ದೇಶಕರು,<br>ಕಾಲೇಜು ಅಭಿವೃದ್ಧಿ ಮಂಡಳಿ,<br>ಮೈಸೂರು-6. | ಸದಸ್ಯರು |
| **8.** | ನಿರ್ದೇಶಕರು,<br>ಪಿ.ಎಂ.ಇ.ಬಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು | ಸದಸ್ಯರು |
| **9.** | ಪ್ರಾಂಶುಪಾಲರು,<br>ಮಹಾರಾಜ ಕಾಲೇಜು, ಮೈಸೂರು-5. | ಸದಸ್ಯರು |
| **10.** | ವಿಶೇಷಾಧಿಕಾರಿಗಳು,<br>ಪರಿಶಿಷ್ಟ ಜಾತಿ:ಪರಿಶಿಷ್ಟ ವರ್ಗ ವಿಶೇಷ ಘಟಕ,<br>ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು | ಸದಸ್ಯರು |
| **11.** | ಕಾರ್ಯಪಾಲಕ ಅಭಿಯಂತರರು<br>ವಿ.ವಿ.ಇಂಜಿನಿಯರಿಂಗ್ ವಿಭಾಗ,<br>ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು | ಸದಸ್ಯರು |

| | | |
|---|---|---|
| 12. | ನಿರ್ದೇಶಕರು,<br>ವಿದ್ಯಾರ್ಥಿಕ್ಷೇಮಪಾಲನ ನಿರ್ದೇಶನಾಲಯ,<br>ಮಾನಸಗಂಗೋತ್ರಿ, ಮೈಸೂರು. | ಸದಸ್ಯ<br>ಕಾರ್ಯದರ್ಶಿ |

ಅನುಪಸ್ಥಿತರು:

| | | |
|---|---|---|
| 1 | ಪೋಲೀಸ್ ಆಯುಕ್ತರು<br>ಪೋಲೀಸ್ ಆಯುಕ್ತರ ಕಛೇರಿ,<br>ಲೋಕರಂಜನ್ ಮಹಲ್ ರಸ್ತೆ, ಮೈಸೂರು-570 010. | ಸದಸ್ಯರು |
| 2 | ಜಿಲ್ಲಾ ಅಧಿಕಾರಿಗಳು<br>ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ<br>ನೂತನ ಜಿಲ್ಲಾಧಿಕಾರಿಗಳ ಕಟ್ಟಡ, ಕೊಠಡಿ ಸಂಖ್ಯೆ:- 22<br>ಗಿರಿಬೋವಿಯ ಪಾಳ್ಯ. ಮೈಸೂರು 570011 | ಸದಸ್ಯರು |
| 3 | ಆಡಳಿತಾಧಿಕಾರಿಗಳು,<br>ಮಾನಸಗಂಗೋತ್ರಿ, ಮೈಸೂರು-6. | ಸದಸ್ಯರು |
| 4 | ಪ್ರಾಂಶುಪಾಲರು,<br>ಯುವರಾಜ ಕಾಲೇಜು, ಮೈಸೂರು-5. | ಸದಸ್ಯರು |

| | |
|---|---|
| | ಡಾ. ಬಿ.ಎಸ್.ಚಂದ್ರಶೇಖರ್, ನಿರ್ದೇಶಕರು, ವಿದ್ಯಾರ್ಥಿಕ್ಷೇಮಪಾಲನ ನಿರ್ದೇಶನಾಲಯ, ಮಾನಸಗಂಗೋತ್ರಿ, ಮೈಸೂರು ಇವರು ಸಭೆಯ ಅಧ್ಯಕ್ಷರು ಹಾಗೂ ಕುಲಸಚಿವರಾದ ಶ್ರೀಮತಿ.ಶೈಲಜ ವಿ.ಆರ್, ಕ.ಆ.ಸೇ, ರವರನ್ನು ಹಾಗೂ ವಿಶ್ವವಿದ್ಯಾನಿಲಯದ ಅಧಿಕಾರಿಗಳು, ಸಿಂಡಿಕೇಟ್ ಸದಸ್ಯರು, ನಿರ್ದೇಶಕರು ಹಾಗೂ ಸದಸ್ಯರುಗಳನ್ನು ಸಭೆಗೆ ಸ್ವಾಗತಿಸಿದರು. ಮುಂದುವರೆದು, ವಿಶ್ವವಿದ್ಯಾನಿಲಯದ ವಿದ್ಯಾರ್ಥಿನಿಲಯಗಳ ಆಡಳಿತ, ನಿರ್ವಹಣೆ ಹಾಗೂ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿಗೆ ಸಂಬಂಧಿಸಿದಂತೆ ರಚಿಸಿರುವ ಸಲಹಾ ಸಮಿತಿ ಸಭೆಯಲ್ಲಿ 2023-24ನೇ ಶೈಕ್ಷಣಿಕ ಸಾಲಿಗೆ ವಿದ್ಯಾರ್ಥಿನಿಲಯಗಳ ಪ್ರವೇಶಾತಿ ಶುಲ್ಕ/ ಮೆಸ್ ಮೆನುವಿನ ಪರಿಷ್ಕರಣೆ ಕುರಿತು, ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಡುವ ಸ್ನಾತಕ ಮತ್ತು ಸ್ನಾತಕೋತ್ತರ ವಿದ್ಯಾರ್ಥಿನಿಲಯಗಳ ಪ್ರವೇಶಾತಿ ಕುರಿತು ಮತ್ತು 2022-23ನೇ ಶೈಕ್ಷಣಿಕ ಸಾಲಿನ ವಿದ್ಯಾರ್ಥಿನಿಲಯದ ಸ್ನಾತಕ/ಸ್ನಾತಕೋತ್ತರ/ಡಿಪ್ಲೋಮಾ ಪದವಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟಜಾತಿ/ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳ ಪರೀಕ್ಷಾ ಅವಧಿಯ ಭೋಜನ ವೆಚ್ಚವನ್ನು ವಿಶ್ವವಿದ್ಯಾನಿಲಯದ ವತಿಯಿಂದ ಪಾವತಿಸುವ ಸಂಬಂಧ ಸಭೆಯನ್ನು ಕರೆದಿರುವುದಾಗಿ ಸಭೆಯ ಗಮನಕ್ಕೆ ತಂದರು. ಮುಂದುವರೆದು, ಇಂದಿನ ಸಭೆಯನ್ನು ಮುನ್ನಡೆಸುವಂತೆ ಸಭೆಯ ಅಧ್ಯಕ್ಷರನ್ನು ಕೋರಿದರು. |

| | |
|---|---|
| | ಅಧ್ಯಕ್ಷರು ಹಾಗೂ ಕುಲಸಚಿವರಾದ ಶ್ರೀಮತಿ.ಶೈಲಜ ವಿ.ಆರ್, ಕ.ಆ.ಸೇ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ಮಾತನಾಡಿ, ಪ್ರಸ್ತುತ ಮೈಸೂರು ನಗರ ವ್ಯಾಪ್ತಿಗೊಳ್ಳಪಡುವ ವಿದ್ಯಾರ್ಥಿನಿಲಯಗಳಲ್ಲಿ 4529 ವಿದ್ಯಾರ್ಥಿಗಳು ವಿವಿಧ ವಿದ್ಯಾರ್ಥಿನಿಲಯಗಳಲ್ಲಿ ವಾಸವಾಗಿದ್ದು, ಅವರಿಗೆ ಉತ್ತಮ ಗುಣಮಟ್ಟದ ಆಹಾರ ನೀಡುತ್ತಿದ್ದು, ದಿನದಿಂದ ದಿನಕ್ಕೆ ದಿನಸಿ, ತರಕಾರಿಗಳ ಬೆಲೆಗಳು ಗಗನಕ್ಕೇರಿದ್ದು, ಗ್ಯಾಸ್ ಸಿಲಿಂಡರ್, ವಿದ್ಯುತ್ ಹಾಗೂ ಕುಡಿಯುವ ನೀರಿನ ದರಗಳು ಸಹ ಹೆಚ್ಚುವರಿಯಾಗುತ್ತಿರುವುದರಿಂದ ಮತ್ತು ಅಡುಗೆ ಸಿಬ್ಬಂದಿಯವರ ವೇತನಗಳಿಗೆ ವಿಶ್ವವಿದ್ಯಾನಿಲಯವು ಖರ್ಚು ಮಾಡುತ್ತಿರುವುದರಿಂದ ವಿಶ್ವವಿದ್ಯಾನಿಲಯಕ್ಕೆ ಆರ್ಥಿಕ ಹೊಣೆಗಾರಿಕೆ ಹೆಚ್ಚಾಗುತ್ತಿರುವುದನ್ನು ಸಭೆಯ ಗಮನಕ್ಕೆ ತಂದರು. ವಿದ್ಯಾರ್ಥಿನಿಲಯಗಳಲ್ಲಿ ಹೆಚ್ಚುವರಿಯಾಗಿ ಪ್ರವೇಶಾತಿ ನೀಡಿದ್ದಲ್ಲಿ ಕೊಠಡಿಗಳ/ ಆಹಾರದ ಕೊರತೆ ಮತ್ತು ಶೌಚಾಲಯದ ಸಮಸ್ಯೆ ಉಂಟಾಗುತ್ತದೆಯೆಂದು ತಿಳಿಸಿದರು. ಮುಂದುವರೆದು, 2023-24ನೇ ಶೈಕ್ಷಣಿಕ ಸಾಲಿಗೆ ವಿದ್ಯಾರ್ಥಿನಿಲಯಗಳ ಪ್ರವೇಶಾತಿ ಶುಲ್ಕವನ್ನು ಪರಿಷ್ಕರಿಸುವುದು ಸೂಕ್ತವೆಂದು ತಮ್ಮ ಅಭಿಪ್ರಾಯವನ್ನು ಮಂಡಿಸಿದರು.<br>ಪ್ರೊ. ಡಿ.ಆನಂದ್, ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ, ಮೈಸೂರು ರವರು ಮಾತನಾಡಿ, ಏಕಕಾಲಕ್ಕೆ 2023-24ನೇ ಶೈಕ್ಷಣಿಕ ಸಾಲಿಗೆ ವಿದ್ಯಾರ್ಥಿನಿಲಯಗಳ ಪ್ರವೇಶಾತಿ ಶುಲ್ಕವನ್ನು ಹಾಗೂ ಮೆಸ್ ಶುಲ್ಕಗಳನ್ನು ಪರಿಷ್ಕರಿಸುವ ಬದಲು ಅನಿವಾರ್ಯವಾದಲ್ಲಿ ಪ್ರವೇಶಾತಿಯಲ್ಲಿ ವಿಭಾಗವಾರು (component wise) ಪರಿಷ್ಕರಿಸುವಂತೆ ಹಾಗೂ ದಿನಸಿ ತರಕಾರಿ ಬೆಲೆಗಳು ಹೆಚ್ಚುವರಿಯಾಗಿರುವುದರಿಂದ ಮೆಸ್ ಶುಲ್ಕವನ್ನು ಹೆಚ್ಚಳ ಮಾಡಿ ಎಂದು ಸಲಹೆ ನೀಡಿದರು.<br>ನಂತರ ಸದಸ್ಯ ಕಾರ್ಯದರ್ಶಿಗಳು ಅಧ್ಯಕ್ಷರ ಅನುಮತಿಯ ಮೇರೆಗೆ ಸಭೆಯಲ್ಲಿ ಕಾರ್ಯಸೂಚಿಯನ್ನು ಮಂಡಿಸಿದರು. |
| **1.** | **2023-24ನೇ ಶೈಕ್ಷಣಿಕ ಸಾಲಿಗೆ ವಿದ್ಯಾರ್ಥಿನಿಲಯಗಳ ಪ್ರವೇಶಾತಿ ಶುಲ್ಕ ಪರಿಷ್ಕರಿಸುವ ಕುರಿತು.** |
| ಪ್ರಸ್ತಾವನೆ | ವಿ.ಕ್ಷೇ.ಪಾ ನಿರ್ದೇಶಕರು ಮಾತನಾಡಿ, 2022-23ನೇ ಶೈಕ್ಷಣಿಕ ಸಾಲಿನಲ್ಲಿ ಸ್ನಾತಕ /ಸ್ನಾತಕೋತ್ತರ ಪದವಿ ಪ್ರೋಗ್ರಾಂಗಳ ಸಂಶೋಧನಾ ವಿದ್ಯಾರ್ಥಿಗಳ ಪ್ರವೇಶ ಶುಲ್ಕ ಪರಿಷ್ಕರಿಸಿರುವುದನ್ನು ಸಭೆಯ ಗಮನಕ್ಕೆ ತಂದರು.<br>ಹಣಕಾಸು ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ರವರು ಮಾತನಾಡಿ, ವಿಶ್ವವಿದ್ಯಾನಿಲಯಕ್ಕೆ ಸರ್ಕಾರದಿಂದ ವಿದ್ಯಾರ್ಥಿನಿಲಯಗಳಿಗೆ ಯಾವುದೇ ಅನುದಾನ ಬರುತ್ತಿಲ್ಲ ಹಾಗೂ ದಿನಸಿ,ತರಕಾರಿ, ಅನಿಲ, ವಿದ್ಯುತ್, ನೀರು, ಅಡುಗೆ ಸಿಬ್ಬಂದಿಯವರಿಗೆ ವೇತನವನ್ನು ಪಾವತಿಸುವ ಸಂಬಂಧ ವಿಶ್ವವಿದ್ಯಾನಿಲಯಕ್ಕೆ ಆರ್ಥಿಕವಾಗಿ ಹೊರೆಯಾಗುತ್ತಿರುವುದರಿಂದ ವಿದ್ಯಾರ್ಥಿನಿಲಯಗಳ ಪ್ರವೇಶಾತಿ ಶುಲ್ಕವನ್ನು ಶೇಕಡ 10ರಷ್ಟು ಹೆಚ್ಚುವರಿ ಮಾಡುವಂತೆ ಸಲಹೆ ನೀಡಿದರು. |

| | |
|---|---|
| ತೀರ್ಮಾನ | ಸುಧೀರ್ಘವಾಗಿ ಚರ್ಚಿಸಿದ ಸಭೆಯು ಪ್ರವೇಶಾತಿ ಶುಲ್ಕದಲ್ಲಿ ಸಾಮಾನ್ಯ ವರ್ಗದ ಸ್ನಾತಕ /ಸ್ನಾತಕೋತ್ತರ ಪದವಿ ಪ್ರೋಗ್ರಾಂಗಳ ಮತ್ತು ಸಂಶೋಧನಾ ವಿದ್ಯಾರ್ಥಿಗಳ ಪ್ರವೇಶ ಶುಲ್ಕವನ್ನು 2022-23ನೇ ಶೈಕ್ಷಣಿಕ ಸಾಲಿನಲ್ಲಿ ನಿಗದಿ ಪಡಿಸಿದ ಒಟ್ಟು ಮೊತ್ತದಲ್ಲಿ ರೂ.1000/-ರಂತೆ ರೌಂಡ್ ಆಫ್ ಮಾಡಿ ಹಾಗೂ ಪರಿಶಿಷ್ಟಜಾತಿ/ಪರಿಶಿಷ್ಟ ವರ್ಗದ ಸ್ನಾತಕ /ಸ್ನಾತಕೋತ್ತರ ಪದವಿ ಪ್ರೋಗ್ರಾಂಗಳ ಮತ್ತು ಸಂಶೋಧನಾ ವಿದ್ಯಾರ್ಥಿಗಳ ಪ್ರವೇಶ ಶುಲ್ಕವನ್ನು ರೂ.200/-ರಂತೆ ರೌಂಡ್ ಆಫ್ ಮಾಡಿ ಪರಿಷ್ಕರಿಸಲು ಸಭೆಯು ತೀರ್ಮಾನಿಸಿತು. |
| **2.** | 2023-24ನೇ ಶೈಕ್ಷಣಿಕ ಸಾಲಿಗೆ ವಿದ್ಯಾರ್ಥಿನಿಲಯಗಳ ಮೆಸ್ ಮೆನುವಿನ ಪರಿಷ್ಕರಣೆ ಕುರಿತು. |
| ಪ್ರಸ್ತಾವನೆ | ವಿ.ಕ್ಷೇ.ಪಾ ನಿರ್ದೇಶಕರು ಮಾತನಾಡಿ, 2022-23ನೇ ಶೈಕ್ಷಣಿಕ ಸಾಲಿನಲ್ಲಿ ವಿದ್ಯಾರ್ಥಿನಿಲಯಗಳ ಮೆಸ್ ಮೆನುವಿನ ಬಗ್ಗೆ ವಿವರಣೆ ನೀಡಿದರು. ಮುಂದುವರೆದು ವಿದ್ಯಾರ್ಥಿನಿಲಯಗಳಲ್ಲಿ ಹೆಚ್ಚುವರಿಯಾಗಿ ಪ್ರವೇಶಾತಿ ನೀಡಿದ್ದಲ್ಲಿ ಆಹಾರ/ಕುಡಿಯುವ ನೀರು/ ಶೌಚಾಲಯದ ಸಮಸ್ಯೆಗಳುಂಟಾಗುತ್ತದೆ ಎಂದು ಸಭೆಯ ಗಮನಕ್ಕೆ ತಂದರು. ಮುಂದುವರೆದು, ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಸಮಾಜ ಕಲ್ಯಾಣ ಇಲಾಖೆಯಿಂದ ರೂ.1900/- ರೂಗಳು ಬರುತ್ತಿದ್ದು, ಪ್ರಸುತ ರೂ.150/- ಹೆಚ್ಚುವರಿಯಾಗಿದ್ದು, ತಲಾ ಒಬ್ಬ ವಿದ್ಯಾರ್ಥಿಗೆ ಒಟ್ಟು ರೂ.2,050/- ನೀಡುತ್ತಿದೆಯೆಂದು ಸಭೆಯ ಗಮನಕ್ಕೆ ತಂದರು.<br><br>ಹಣಕಾಸು ಅಧಿಕಾರಿಗಳು ಮಾತನಾಡಿ, ದಿನಸಿಗೆ 70 ರಿಂದ 80 ಲಕ್ಷ ರೂಪಾಯಿ, ತರಕಾರಿಗೆ 20-30 ಲಕ್ಷ ರೂಪಾಯಿ ಮತ್ತು ಅಡುಗೆ ಸಿಬ್ಬಂದಿಯವರಿಗೆ ವೇತನ 25 ಲಕ್ಷ ರೂಪಾಯಿ ಸೇರಿ ಒಟ್ಟು 1.5 ಕೋಟಿ ರೂಗಳು ವೆಚ್ಚವಾಗುತ್ತಿದ್ದು, ವಿಶ್ವವಿದ್ಯಾನಿಲಯಕ್ಕೆ ಆರ್ಥಿಕವಾಗಿ ಹೊರೆಯಾಗುತ್ತಿರುವುದಾಗಿ ಸಭೆಯ ಗಮನಕ್ಕೆ ತಂದರು.<br><br>ಕುಲಸಚಿವರು ಮಾತನಾಡಿ, ಪ್ರತಿ ದಿನ ಒಬ್ಬ ವಿದ್ಯಾರ್ಥಿಗೆ ರೂ.68/- ರಂತೆ ಆಹಾರಕ್ಕಾಗಿ ಖರ್ಚಾಗುತ್ತಿದೆಯೆಂದು ಸಭೆಯ ಗಮನಕ್ಕೆ ತಂದರು. ವಿದ್ಯಾರ್ಥಿಗಳಿಗೆ ಟೀ/ಕಾಫಿ ಹಾಗೂ ಹಾಲನ್ನು ದಿನನಿತ್ಯವು ನೀಡುತ್ತಿದ್ದು, ಹಾಲಿನ ಬೆಲೆ ಹಾಗೂ ಗ್ಯಾಸ್ ಸಿಲಿಂಡರ್ ಬೆಲೆಯು ಸಹ ಹೆಚ್ಚಳವಾಗಿದ್ದು ವಿಶ್ವವಿದ್ಯಾನಿಲಯವೇ ಹೆಚ್ಚುವರಿಯಾಗಿ ಹಣ ಭರಿಸುತ್ತಿರುವುದಾಗಿ ಸಭೆಯ ಗಮನಕ್ಕೆ ತಂದರು.<br><br>ಶ್ರೀ. ಎಂ. ಬಿ. ಗಪ್ಪಣ್ಣ, ಸಿಂಡಿಕೇಟ್ ಸದಸ್ಯರು ಮಾತನಾಡಿ, ವಿದ್ಯಾರ್ಥಿನಿಲಯಗಳಲ್ಲಿ ಭೋಜನ ತಯಾರಿಕೆಗೆ ಬೇಕಾದ ದಿನಸಿ/ತರಕಾರಿ/ಗ್ಯಾಸ್ ಸಿಲಿಂಡರ್/ಇತರ ಪದಾರ್ಥಗಳ/ಅಡುಗೆ ಸಿಬ್ಬಂದಿಗಳ ಹಾಗೂ ವಿದ್ಯಾರ್ಥಿನಿಲಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಎಲ್ಲಾ ವರ್ಗದ ಸಿಬ್ಬಂದಿಗಳ ವೇತನದ ಅಂದಾಜು ಪಟ್ಟಿಯನ್ನು ನೀಡುವಂತೆ ವಿ.ಕ್ಷೇ.ಪಾ ನಿರ್ದೇಶಕರಿಗೆ ತಿಳಿಸಿದರು. ಇದಕ್ಕುತ್ತರವಾಗಿ ಡಾ. ಸುಷ್ಮರವರು, ಸಹಾಯಕ ನಿರ್ದೇಶಕರು ಇವರು ಮಾತನಾಡಿ, 2022-2023ರ ಶೈಕ್ಷಣಿಕ ಸಾಲಿಗೆ |

| | |
|---|---|
| | ಸಂಬಂಧಿಸಿದಂತೆ ಸಿದ್ಧಪಡಿಸಿರುವ ಅಂದಾಜು ಪಟ್ಟಿಯನ್ನು ತಾವು ಸಲ್ಲಿಸುವುದಾಗಿ ತಿಳಿಸಿದರು. |
| ತೀರ್ಮಾನ | ಮೆಸ್ ಮೆನುವಿನ ಪರಿಷ್ಕರಣೆಗೆ ಸಂಬಂಧಿಸಿದಂತೆ ಮುಂದಿನ ದಿನಗಳಲ್ಲಿ ಕ್ರಮ ತೆಗೆದುಕೊಳ್ಳಲಾಗುವುದು ಹಾಗೂ ಪ್ರಸ್ತುತ ನೀಡಲಾಗುತ್ತಿರುವ ಮೆಸ್ ಮೆನುವನ್ನೆ ಮುಂದುವರಿಸಲು ಮತ್ತು ಸದರಿ ಮೆನುವಿನಲ್ಲಿ ನೀಡಲಾಗುತ್ತಿರುವ ಅಹಾರದ ಗುಣಮಟ್ಟ ಕಾಪಾಡಿಕೊಳ್ಳಲು ಸಭೆಯು ಒಪ್ಪಿತು ಹಾಗೂ 2023-24ನೇ ಶೈಕ್ಷಣಿಕ ಸಾಲಿನಿಂದ ಭೋಜನ ಶುಲ್ಕದಲ್ಲಿ ರೂ.1,900/-ಗಳಿಂದ ರೂ.2,050/-ಗಳಿಗೆ ಹೆಚ್ಚಿಸಲು ಹಾಗೂ ಸದರಿ ಭೋಜನ ಶುಲ್ಕವನ್ನು ಸಾಮಾನ್ಯ ವರ್ಗದ ವಿದ್ಯಾರ್ಥಿಗಳಿಗೂ ಸಹ ಅನ್ವಯವಾಗುವಂತೆ ಪಾವತಿಸಿಕೊಳ್ಳಲು ಸಭೆಯಲ್ಲಿ ತೀರ್ಮಾನಿಸಲಾಯಿತು. |
| **3.** | **2023-24ನೇ ಶೈಕ್ಷಣಿಕ ಸಾಲಿಗೆ ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಡುವ ಸ್ನಾತಕ ಮತ್ತು ಸ್ನಾತಕೋತ್ತರ ವಿದ್ಯಾರ್ಥಿನಿಲಯಗಳ ಪ್ರವೇಶಾತಿ ಕುರಿತು.** |
| ಪ್ರಸ್ತಾವಾನೆ | ಶ್ರೀ.ಎಂ.ಬಿ.ಗಪ್ಪಣ್ಣ, ಸಿಂಡಿಕೇಟ್ ಸದಸ್ಯರು ಮಾತನಾಡಿ, ವಿದ್ಯಾರ್ಥಿನಿಲಯಗಳ ಕೊಠಡಿಗನುಗುಣವಾಗಿ ಮಾತ್ರ ವಿದ್ಯಾರ್ಥಿಗಳನ್ನು ಪ್ರವೇಶಾತಿ ಮಾಡಿಕೊಳ್ಳುವುದು ಸೂಕ್ತವೆಂದು ಸಲಹೆ ನೀಡಿದರು.<br>ಕುಲಸಚಿವರು ಮಾತನಾಡಿ, ಕಾನೂನು ವಿಭಾಗ ಹಾಗೂ ಇಂಜಿನಿಯರಿಂಗ್ ವಿಭಾಗ ವ್ಯಾಸಂಗ ಮಾಡುವ ವಿದ್ಯಾರ್ಥಿಗಳು ಸಹ ವಿದ್ಯಾರ್ಥಿನಿಲಯಗಳಲ್ಲಿ ಪ್ರವೇಶಾತಿ ಕೋರುವುದರಿಂದ ಸದರಿಯವರಿಗೂ ಸಹ ವಿದ್ಯಾರ್ಥಿನಿಲಯಗಳಲ್ಲಿ ಪ್ರವೇಶಾತಿ ನೀಡುತ್ತಿರುವುದಾಗಿ ಸಭೆಯ ಗಮನಕ್ಕೆ ತಂದರು. |
| ತೀರ್ಮಾನ | ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ವಾಸಮಾಡುತ್ತಿರುವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿನಿಲಯಗಳಲ್ಲಿ ಪ್ರವೇಶಾತಿ ನೀಡದಂತೆ ಹಾಗೂ ಗ್ರಾಮಾಂತರ ಪ್ರದೇಶದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿನಿಲಯಗಳಲ್ಲಿ ಪ್ರವೇಶಾತಿ ನೀಡುವುದರಲ್ಲಿ ಪ್ರಮುಖ್ಯತೆ ನೀಡಬೇಕೆಂದು ಹಾಗೂ ಸ್ನಾತಕ/ಸ್ನಾತಕೋತ್ತರ ಪದವಿ/ಸಂಶೋಧನಾ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿನಿಲಯದಲ್ಲಿ ಒಂದು ಬಾರಿ ಮಾತ್ರ ಪ್ರವೇಶಾತಿಗೆ ಅವಕಾಶವನ್ನು ಕಲ್ಪಿಸುವುದೆಂದು ಸಭೆಯಲ್ಲಿ ನಿರ್ಧರಿಸಲಾಯಿತು. ವಿದ್ಯಾರ್ಥಿನಿಲಯಗಳಲ್ಲಿ ಅನಧಿಕೃತ ವ್ಯಕ್ತಿಗಳು ವಾಸ ಮಾಡುತ್ತಿರುವುದು ಕಂಡು ಬಂದಲ್ಲಿ ಅವರನ್ನು ತಕ್ಷಣ ತೆರವುಗೊಳಿಸಲು ಕ್ರಮಕೈಗೊಳ್ಳಬೇಕೆಂದು ಹಾಗೂ ವಿದ್ಯಾರ್ಥಿನಿಯಗಳಲ್ಲಿ ಸ್ನಾತಕ ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗಿರುವ ಕಾರಣ ಹಾಗೂ ಡಿಪ್ಲೊಮಾನಲ್ಲಿ ವ್ಯಾಸಂಗ ಮಾಡುತ್ತಿರುವ ಹಲವು ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಮಂಜೂರಾಗದ ಕಾರಣ ಈಗಾಗಲೇ ಡಿಪ್ಲೊಮಾ ಮತ್ತು ಸ್ನಾತಕೋತ್ತರ ಡಿಪ್ಲೊಮಾ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿನಿಲಯಗಳಿಗೆ ಪ್ರವೇಶಾತಿ ನೀಡಬಾರದೆಂದು ಸರ್ವಾನುಮತದಿಂದ ಸಭೆಯಲ್ಲಿ ತೀರ್ಮಾನಿಸಲಾಯಿತು. |
| 4. | **2022-23ನೇ ಶೈಕ್ಷಣಿಕ ಸಾಲಿನ ವಿದ್ಯಾರ್ಥಿನಿಲಯದ ಸ್ನಾತಕ/ಸ್ನಾತಕೋತ್ತರ/ಡಿಪ್ಲೋಮಾ ಪದವಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟಜಾತಿ/ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳ ಪರೀಕ್ಷಾ ಅವಧಿಯ ಭೋಜನ ವೆಚ್ಚವನ್ನು ವಿಶ್ವವಿದ್ಯಾನಿಲಯದ ವತಿಯಿಂದ ಪಾವತಿಸುವ ಬಗ್ಗೆ.** |
| ಪ್ರಸ್ತಾವಾನೆ | ಕುಲಸಚಿವರು (ಪರೀಕ್ಷಾಂಗ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ರವರು ಮಾತನಾಡಿ, ಈಗಾಗಲೇ ಸ್ನಾತಕ ಪದವಿ ಪರೀಕ್ಷೆಗಳನ್ನು ಈಗಾಗಲೇ ಮುಂದೂಡಿರುವುದಾಗಿ ಸಭೆಯ ಗಮನಕ್ಕೆ ತಂದರು.<br>ಕುಲಸಚಿವರು ಮಾತನಾಡಿ, ಪರೀಕ್ಷಾ ಅವಧಿಯ ಭೋಜನ ವೆಚ್ಚವನ್ನು ವಿಶ್ವವಿದ್ಯಾನಿಲಯದ ವತಿಯಿಂದ ಪಾವತಿಸಬೇಕಾದರೆ ಅಂದಾಜು 15 ರಿಂದ 20 ದಿನಗಳಿಗೆ ಸುಮಾರು 20 ರಿಂದ 30 ಲಕ್ಷ ರೂಪಾಯಿಗಳನ್ನು ವಿಶ್ವವಿದ್ಯಾನಿಲಯದ ವತಿಯಿಂದ ಪಾವತಿಸಬೇಕಾಗಿದ್ದು ಇದರಿಂದ ವಿಶ್ವವಿದ್ಯಾನಿಲಯಕ್ಕೆ ಆರ್ಥಿಕವಾಗಿ ಹೊರೆಯಾಗುವುದಾಗಿ ಸಭೆಯ ಗಮನಕ್ಕೆ ತಂದರು ಹಾಗೂ ಸಮಾಜ ಕಲ್ಯಾಣ |

| | |
|---|---|
| | ಇಲಾಖೆಯಿಂದ ನೇರವಾಗಿ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳ ಖಾತೆಗೆ ಹಣ ವರ್ಗಾವಣೆಯಾಗುತ್ತಿದ್ದು ಸಂಬಂಧಪಟ್ಟ ವಿದ್ಯಾರ್ಥಿನಿಲಯಗಳ ಶಿಕ್ಷಕ ಸಲಹೆಗಾರರು ಸದರಿ ವಿದ್ಯಾರ್ಥಿಗಳಿಂದ ಮೆಸ್ ಹಣವನ್ನು ವಸೂಲಾತಿ ಮಾಡಿ ಅವರಿಗೆ ಬೇಬಾಕಿ ಪತ್ರವನ್ನು ನೀಡಬೇಕೆಂದು ಸೂಚಿಸಿದರು. ಇದಕ್ಕುತ್ತರವಾಗಿ ವಿ.ಕ್ಷೇ.ಪಾ ನಿರ್ದೇಶಕರು, ಈಗಾಗಲೇ ತಾವು ಎಲ್ಲಾ ವಿದ್ಯಾರ್ಥಿನಿಲಯಗಳ ಶಿಕ್ಷಕ ಸಲಹೆಗಾರರಿಗೆ ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಪತ್ರವನ್ನು ರವಾನಿಸಲಾಗಿದೆ ಎಂದು ತಿಳಿಸಿದರು. |
| ತೀರ್ಮಾನ | ಸ್ನಾತಕ ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳ ಪರೀಕ್ಷಾ ಅವಧಿಯು ವಿದ್ಯಾರ್ಥಿವೇತನ ಮಂಜೂರಾಗುವ ದಿನದೊಳಗೆ ಪರೀಕ್ಷೆಯು ಅಂತ್ಯಗೊಳ್ಳಬಹುದು ಒಂದು ಪಕ್ಷದಲ್ಲಿ ವಿದ್ಯಾರ್ಥಿವೇತನ ಮಂಜೂರಾಗುವ ದಿನಗಳು ಮೀರಿ ಪರೀಕ್ಷೆಯು ನಡೆದಿದ್ದಲ್ಲಿ ಅಂತಹ ದಿನಗಳ ಎಷ್ಟು ಪ.ಜಾ/ಪ.ವ ವಿದ್ಯಾರ್ಥಿಗಳು ವಿದ್ಯಾರ್ಥಿನಿಲಯದಲ್ಲಿ ವಾಸ್ತವ್ಯ ಹೂಡಿರುತ್ತಾರೋ ಸದರಿ ವಿದ್ಯಾರ್ಥಿಗಳ ಪಟ್ಟಿಯನ್ನು ಸಿದ್ದಪಡಿಸಿ ವಿಶ್ವವಿದ್ಯಾನಿಲಯಕ್ಕೆ ಮಂಡಿಸುವುದು ಹಾಗೂ ಈ ಪರೀಕ್ಷಾ ಅವಧಿಯ ವೆಚ್ಚವನ್ನು ವಿಶ್ವವಿದ್ಯಾನಿಲಯದ ವತಿಯಿಂದಲೇ ಭರಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು. |

ಅಂತಿಮವಾಗಿ ಡಾ.ಸುಷ್ಮರವರು ವಂದನೆಗಳನ್ನರ್ಪಿಸುವ ಮೂಲಕ ಸಭೆಯನ್ನು ಮುಕ್ತಾಯಗೊಳಿಸಲಾಯಿತು

ನಿರ್ದೇಶಕರು
ವಿದ್ಯಾರ್ಥಿ ಕ್ಷೇಮಪಾಲನಾ
ನಿರ್ದೇಶನಾಲಯ
ಮಾನಸಗಂಗೋತ್ರಿ, ಮೈಸೂರು

ಕುಲಸಚಿವರು
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು

Subject No. 2024/3.26

**ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಶ್ರೀ ವಾಲ್ಮೀಕಿ ಸಂಶೋಧನಾ ಮತ್ತು ವಿಸ್ತರಣ ಕೇಂದ್ರವನ್ನು ಸ್ಥಾಪಿಸುವ ಕುರಿತು.**

ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಶ್ರೀ ಮಹರ್ಷಿ ವಾಲ್ಮೀಕಿ ಅಧ್ಯಯನ ಪೀಠವನ್ನು ಸ್ಥಾಪಿಸುವ ಹಾಗೂ ಸರ್ಕಾರದಿಂದ ಅನುದಾನವನ್ನು ಪಡೆದುಕೊಳ್ಳುವ ನಿಟ್ಟಿನಲ್ಲಿ 2019ನೇ ಇಸವಿಯಿಂದ ಕರ್ನಾಟಕ ಸರ್ಕಾರದೊಂದಿಗೆ ಹಲವು ಬಾರಿ ಪತ್ರವ್ಯವಹಾರವನ್ನು ಮಾಡಿದ್ದು, ಅದನ್ನು ಕೆಳಕಂಡಂತೆ ಸಂಕ್ಷಿಪ್ತವಾಗಿ ವಿವರಿಸಲಾಗಿದೆ.

1) ಅಂದಿನ ಲೋಕಸಭಾ ಸದಸ್ಯರಾದ ಶ್ರೀ ಪ್ರತಾಪ್ ಸಿಂಹ, ಅಂದಿನ ವಿಧಾನಸಭಾ ಸದಸ್ಯರಾದ ಶ್ರೀ ಎಲ್. ನಾಗೇಂದ್ರ ಮತ್ತು ಮೈಸೂರು ನಾಯಕ ಪಡೆಯ ಅಧ್ಯಕ್ಷರು ಮತ್ತು ವಕೀಲರಾದ ಶ್ರೀ ಪಡುವಾರಹಳ್ಳಿ ಎಂ ರಾಮಕೃಷ್ಣ ಅವರ ಮನವಿಯ ಮೇರೆಗೆ ಶ್ರೀ ಮಹರ್ಷಿ ವಾಲ್ಮೀಕಿ ಅಧ್ಯಯನ ಪೀಠವನ್ನು ಸ್ಥಾಪಿಸಲು ದಿ. 23.10.2019ರಂದು ನಡೆದ ಸಿಂಡಿಕೇಟ್ ತೀರ್ಮಾನದ ಮೇರೆಗೆ ಸರ್ಕಾರದ ಅಪರ ಮುಖ್ಯಕಾರ್ಯದರ್ಶಿ, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ), ಇವರಿಗೆ ದಿ. 26.11.2019ರಂದು ಪತ್ರವನ್ನು ಬರೆದು ಸದರಿ ಪೀಠ ಸ್ಥಾಪಿಸಲು ಅನುಮತಿ ಕೋರಿ ಹಾಗೂ ರೂ. 5.00 ಕೋಟಿಗಳ ಅನುದಾನವನ್ನು ಮಂಜೂರು ಮಾಡುವಂತೆ ಕೋರಲಾಗಿತ್ತು **(ಅನುಬಂಧ 'ಅ')**. ಇದಕ್ಕೆ ಉತ್ತರವಾಗಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ದಿ. 1.7.2020ರಂದು ಕುಲಸಚಿವರಿಗೆ ಪತ್ರ ಬರೆದು ಪ್ರಸ್ತಾವನೆಯನ್ನು ಪರಿಶೀಲಿಸಿರುವುದಾಗಿ, ವಾಲ್ಮೀಕಿ ಅಧ್ಯಯನ ಪೀಠವು ಗುಲ್ಬರ್ಗಾ ವಿಶ್ವವಿದ್ಯಾನಿಲಯದಲ್ಲಿ ಈಗಾಗಲೇ ಕಾರ್ಯನಿರ್ವಹಿಸುತ್ತಿರುವುದರಿಂದ, ಪ್ರಸ್ತಾವನೆಯ ಮುಖ್ಯ ಉದ್ದೇಶ, ಹುದ್ದೆಗಳ ಸೃಜನೆಯಾಗಿರುವುದರಿಂದ ಹಾಗೂ ಆರ್ಥಿಕ ನಿರ್ಬಂಧಗಳು ಜಾರಿಯಲ್ಲಿರುವುದರಿಂದ, ಪ್ರಸ್ತಾವನೆಯನ್ನು ಪರಿಗಣಿಸಲು ಸಾಧ್ಯವಿಲ್ಲವೆಂದು ತಿಳಿಸಿದ್ದರು **(ಅನುಬಂಧ 'ಆ')**.

2) ದಿನಾಂಕ 23.11.2020ರಂದು ಮತ್ತೆ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರಿಗೆ ಪತ್ರವನ್ನು ಬರೆದು, ದಿ. 1.10.2020ರ ಸಿಂಡಿಕೇಟ್ ತೀರ್ಮಾನದನ್ವಯ ಮೈಸೂರು ವಿಶ್ವವಿದ್ಯಾನಿಲಯದಲ್ಲಿ "ಶ್ರೀ ಮಹರ್ಷಿ ವಾಲ್ಮೀಕಿ ಹಾಗೂ ವ್ಯಾಸ" ಇಬ್ಬರು ಮಹನೀಯರನ್ನು ಆಳವಾಗಿ ಅಧ್ಯಯನ ನಡೆಸಲು ಪೀಠವನ್ನು ಸ್ಥಾಪಿಸಲು ಅನುಮತಿ ಹಾಗೂ ಅನುಮದಾನ ಬಿಡುಗಡೆ ಮಾಡಲು ಕೋರಲಾಗಿತ್ತು **(ಅನುಬಂಧ 'ಇ')**. ಇದಕ್ಕೆ ಉತ್ತರವಾಗಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ದಿ. 27.1.2021 ರ ತಮ್ಮ ಪತ್ರದಲ್ಲಿ, ಯಾವುದೇ ಸಕಾರಣ ಅಥವಾ ಸೂಕ್ತ ಸಮರ್ಥನೆಗಳಿಲ್ಲದೆ ವಿಶ್ವವಿದ್ಯಾನಿಲಯವು ಮತ್ತೆ ಪತ್ರ ಬರೆದಿರುವುದರಿಂದ ಸದರಿ ಪ್ರಸ್ತಾವನೆಯನ್ನು ಪರಿಗಣಿಸಲು ಸಾಧ್ಯವಿಲ್ಲವೆಂದು ತಿಳಿಸಿದ್ದರು **(ಅನುಬಂಧ 'ಈ')**.

3) ಈ ಸಂಬಂಧ ದಿ. 25.3.2021ರಲ್ಲಿ ನಡೆದ ಸಿಂಡಿಕೇಟ್ ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಿ, "ಶ್ರೀ ವ್ಯಾಸ ವಾಲ್ಮೀಕಿ ಅಧ್ಯಯನ ಪೀಠ" ಸ್ಥಾಪನೆಯ ಸಂಬಂಧ ಮೈಸೂರು ವಿಶ್ವವಿದ್ಯಾನಿಲಯದ ಆಂತರಿಕ ಅನುದಾನದಿಂದ ರೂ. 5.00 ಲಕ್ಷಗಳನ್ನು ಮೀಸಲಿಟ್ಟು ಪೀಠವನ್ನು ಸ್ಥಾಪಿಸಲು ಸರ್ವಾನುಮತದಿಂದ ಅನುಮೋದಿಸಲಾಯಿತು **(ಅನುಬಂಧ 'ಉ')**. ಈ ಸಂಬಂಧ ವಿಶ್ವವಿದ್ಯಾನಿಲಯವು ಡಾ. ಸಿ.ಪಿ. ರಾಮಶೇಷ್, ವಿಶ್ರಾಂತ ಗ್ರಂಥಪಾಲಕರು (ಪ್ರಭಾರ), ಮೈಸೂರು ವಿಶ್ವವಿದ್ಯಾನಿಲಯ ಗ್ರಂಥಾಲಯ, ಮಾನಸಗಂಗೋತ್ರಿ, ಇವರನ್ನು ತಾತ್ಕಾಲಿಕವಾಗಿ ಸದರಿ ಪೀಠದ ಸಂದರ್ಶಕ ಪ್ರಾಧ್ಯಾಪಕರನ್ನಾಗಿ ರೂ. 8,000/- ಗಳ ಗೌರವ ಸಂಭಾವನೆಯೊಂದಿಗೆ ಆಹ್ವಾನಿಸಿ, ಸದರಿ ಪೀಠದ ಸ್ಥಾಪನೆ ಕುರಿತಂತೆ ಪೂರ್ವಭಾವಿ ಸಿದ್ಧತೆ ಹಾಗೂ ಪ್ರಸ್ತಾವನೆ ಸಲ್ಲಿಸುವಂತೆ ಹಾಗೂ ಡಾ. ರಾಧಕೃಷ್ಣನ್ ತತ್ವಶಾಸ್ತ್ರ ಮತ್ತು ಭಾರತೀಯ ಸಂಸ್ಕೃತಿ ಅಧ್ಯಯನ ಕೇಂದ್ರದಲ್ಲಿ ಕಾರ್ಯನಿರ್ವಹಿಸುವಂತೆ ತಿಳಿಸಿ, ದಿನಾಂಕ 26.11.2021ರಂದು ಆದೇಶವನ್ನು ಹೊರಡಿಸಲಾಗಿತ್ತು **(ಅನುಬಂಧ 'ಊ')**. ಆಂತರಿಕ ಅನುದಾನ ರೂ. 5.00 ಲಕ್ಷಗಳನ್ನು ವಿಶ್ವವಿದ್ಯಾನಿಲಯದ "ಸಹೋದ್ಯಮ ಶೀರ್ಷಿಕೆ"ಯಿಂದ ಭರಿಸುವಂತೆ ದಿ. 30.3.2022ರಂದು ಹಣಕಾಸು ಅಧಿಕಾರಿಗಳಿಗೆ ಟಿಪ್ಪಣಿಯನ್ನು ಕಳುಹಿಸ ಲಾಗಿತ್ತು **(ಅನುಬಂಧ 'ಋ')**.

... 2

4) ತದನಂತರ, ಡಾ. ಸಿ.ಪಿ. ರಾಮಶೇಷ್, ಸಂದರ್ಶಕ ಪ್ರಾಧ್ಯಾಪಕರವರು ದಿ. 18.10.2022ರಂದು ಶ್ರೀ ವ್ಯಾಸ ವಾಲ್ಮೀಕಿ ಅಧ್ಯಯನ ಪೀಠದ ಸ್ಥಾಪನೆ ಕುರಿತಂತೆ ಪೂರ್ವಭಾವಿ ಸಿದ್ಧತೆಯ ವರದಿ ಹಾಗೂ ಪ್ರಸ್ತಾವನೆಯನ್ನು ಕುಲಸಚಿವರಿಗೆ ಸಲ್ಲಿಸಿದ್ದರು **(ಅನುಬಂಧ 'ಎ').**

5) ಈ ಮಧ್ಯೆ, ಸರ್ಕಾರದ ಪ್ರಧಾನ ಕಾರ್ಯದರ್ಶಿ (ಉನ್ನತ ಶಿಕ್ಷಣ) ಇವರು ದಿನಾಂಕ 23.9.2022 ಎಲ್ಲಾ ವಿಶ್ವವಿದ್ಯಾನಿಲಯಗಳಿಗೆ ಪತ್ರವನ್ನು ಬರೆದು, ವಿಶ್ವವಿದ್ಯಾನಿಲಯದಲ್ಲಿ ಅಧ್ಯಯನ ಪೀಠಗಳನ್ನು ಸ್ಥಾಪಿಸುವ ಬಗೆಗೆ ಹಾಗೂ ಇರಬೇಕಾದ ಪೀಠಗಳ ಸಂಖ್ಯೆಯನ್ನು ನಿರ್ಧರಿಸುವ ಸಂಬಂಧ ಕರ್ನಾಟಕ ರಾಜ್ಯ ಶಿಕ್ಷಣ ಪರಿಷತ್ತಿನಿಂದ ಸಮಗ್ರ ಪರಿಯೋಜನೆಯನ್ನು/ಕಾರ್ಯನೀತಿಯನ್ನು ರೂಪಿಸಲಾಗುತ್ತಿದ್ದು ಅಲ್ಲಿಯವರೆವಿಗೂ ಪ್ರಸ್ತಾವನೆ ಸಲ್ಲಿಸುವುದನ್ನು ತಡೆಯಿಡಿಯುವಂತೆ ತಿಳಿಸಿದ್ದರು **(ಅನುಬಂಧ 'ಏ').**

6) ತದನಂತರ, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ವಿಶ್ವವಿದ್ಯಾನಿಲಯಗಳ ಕುಲಸಚಿವರುಗಳಿಗೆ ಬರೆದಿರುವ ದಿನಾಂಕ 12.9.2023ರ ಪತ್ರದಲ್ಲಿ, ಸರ್ಕಾರವು ಪ್ರೊ. ಓ. ಅನಂತರಾಮಯ್ಯ, ವಿಶ್ರಾಂತ ಕುಲಪತಿಗಳು, ಇವರ ಅಧ್ಯಕ್ಷತೆಯಲ್ಲಿ ರಚಿಸಿದ್ದ ಸಮಿತಿಯ ವರದಿಯನ್ನು ಸರ್ಕಾರವು ಒಪ್ಪಿಕೊಂಡಿದ್ದು, ಅದರ ಶಿಫಾರಸ್ಸಿನಂತೆ, ನಿಯಮಾನುಸಾರ ಅಗತ್ಯ ಕ್ರಮವಹಿಸುವಂತೆ ನಿರ್ದೇಶಿಸಿದ್ದರು **(ಅನುಬಂಧ 'ಐ').** ಸದರಿ ಶಿಫಾರಸ್ಸಿನ ಹಲವು ಮುಖ್ಯಾಂಶಗಳು ಕೆಳಕಂಡಂತಿದೆ:

7) ಈ ಸಂಬಂಧ ವಿಶ್ವವಿದ್ಯಾನಿಲಯವು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಇವರಿಗೆ ದಿನಾಂಕ 27.11.2023ರಂದು ಪತ್ರವನ್ನು ಬರೆದು, ಸದರಿ ವರದಿಯಲ್ಲಿ ತಿಳಿಸಿರುವ ಈ ಕೆಳಕಂಡ ಅಂಶಕ್ಕೆ ಸಂಬಂಧಿಸಿದಂತೆ ಸರ್ಕಾರದ ವತಿಯಿಂದ ಸಿದ್ಧಪಡಿಸಬೇಕಾಗಿರುವ Module Statute ಅಧಿನಿಯಮದ ಬಗೆಗೆ ಗಮನಸೆಳೆದು, ಮುಂದಿನ ನಿರ್ದೇಶನವನ್ನು ಕೋರಲಾಗಿತ್ತು **(ಅನುಬಂಧ 'ಒ').**

"The Council should prepare a module statute by constituting three members committee to be adopted by each University and the State Government should approve such statutes to give them official status and guide them to contribute as a mandatory responsibility in the higher education sector of the state".

ಆದರೆ, ಈ ಸಂಬಂಧ ಸರ್ಕಾರದಿಂದ ಇದುವರೆವಿಗೂ ಯಾವುದೇ ಪತ್ರವನ್ನು ಸ್ವೀಕರಿಸಲಾಗಿರುವುದಿಲ್ಲ.

ಮೇಲಿನ ಅಂಶಗಳನ್ನು ಸಿಂಡಿಕೇಟ್ ಸಭೆಯ ಗಮನಕ್ಕೆ ತರಬಯಸುತ್ತಾ, ಪ್ರಸ್ತುತ, ಶ್ರೀ ಕ್ಯಾತನಹಳ್ಳಿ ಸಿ. ನಾಗರಾಜು, ಮಾನ್ಯ ಸಿಂಡಿಕೇಟ್ ಸದಸ್ಯರು, ರವರು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಶ್ರೀ ವಾಲ್ಮೀಕಿ ಸಂಶೋಧನ ಮತ್ತು ವಿಸ್ತರಣ ಕೇಂದ್ರವನ್ನು ಸ್ಥಾಪಿಸುವ ಕುರಿತು ದಿನಾಂಕ 6.6.2024 ರಂದು ಸಲ್ಲಿಸಿರುವ ಪತ್ರದ ಸಂಬಂಧ ಸಭೆಯ ನಿರ್ಣಯಕ್ಕಾಗಿ ಮಂಡಿಸಿದೆ.

ತಂತಿ ವಿಳಾಸ : ಯುನಿವರ್ಸಿಟಿ
ದೂರವಾಣಿ ಸಂಖ್ಯೆ : 2419677/2419361
ಫ್ಯಾಕ್ಸ್ : 0821-2419363/2419301

e-mail : registar@uni-mysore.ac.in
www.uni.-mysore.ac.in

-143-

ಅನುಬಂಧ 'ಡ'

# ಮೈಸೂರು ವಿಶ್ವವಿದ್ಯಾನಿಲಯ

Estd. 1916

ವಿಶ್ವವಿದ್ಯಾನಿಲಯ ಕಾರ್ಯಸೌಧ
ಕ್ರಾಫರ್ಡ್ ಭವನ, ಅಂಚೆ ಪೆಟ್ಟಿಗೆ ಸಂಖ್ಯೆ: 406
ಮೈಸೂರು – 570 005

ಸಂಖ್ಯೆ:ಡಿವಿ7/296/2019-20

ದಿನಾಂಕ: 26-11-2019

ಸರ್ಕಾರದ ಅಪರ ಮುಖ್ಯಕಾರ್ಯದರ್ಶಿ
ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ)
ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ
ಬೆಂಗಳೂರು-560 005

ಮಾನ್ಯರೆ,

ವಿಷಯ: ಮೈಸೂರು ವಿಶ್ವವಿದ್ಯಾನಿಲಯದಲ್ಲಿ " ಶ್ರೀ ಮಹರ್ಷಿ ವಾಲ್ಮೀಕಿ ಅಧ್ಯಯನ ಪೀಠ" ತೆರೆಯುವ ಕುರಿತು.

ಉಲ್ಲೇಖ:-1)ಮೈಸೂರು ನಾಯಕರ ಪಡೆ( ರಿ) ಇವರ ಪತ್ರ ದಿನಾಂಕ:15-10-2019.
2)ಸನ್ಮಾನ್ಯ ಶ್ರೀ.ಎಲ್.ನಾಗೇಂದ್ರ, ವಿಧಾನಸಭಾ ಸದಸ್ಯರು, ಚಾಮರಾಜ ಕ್ಷೇತ್ರ, ಮೈಸೂರು ಇವರ ಪತ್ರ ದಿನಾಂಕ 16-10-2019.
3)ಸನ್ಮಾನ್ಯ ಶ್ರೀ.ಪ್ರತಾಪ್ ಸಿಂಹ, ಲೋಕಸಭಾ ಸದಸ್ಯರು, ಮೈಸೂರು ಇವರ ಪತ್ರ ಸಂಖ್ಯೆ:ಲೋಸ/ಮೈ-ಕೊ/1322/2019-20, ದಿನಾಂಕ:18-10-2019.
4)ದಿನಾಂಕ:23-10-2019 ರಂದು ಜರುಗಿದ ಸಿಂಡಿಕೇಟ್ ಸಭೆಯ ನಡಾವಳಿ.

*****

ಮೇಲಿನ ವಿಷಯವಾಗಿ ಈ ಮೂಲಕ ತಮ್ಮ ಗಮನಕ್ಕೆ ತರಬಯಸುವುದೇನೆಂದರೆ ಉಲ್ಲೇಖಿತ (1) (2) (3) ಗಳಲ್ಲಿ ಲೋಕಸಭಾ ಸದಸ್ಯರಾದ ಸನ್ಮಾನ್ಯ ಶ್ರೀ.ಪ್ರತಾಪ್ ಸಿಂಹ, ಹಾಗೂ ವಿಧಾನಸಭಾ ಸದಸ್ಯರಾದ ಸನ್ಮಾನ್ಯ ಶ್ರೀ.ಎಲ್.ನಾಗೇಂದ್ರ ಮತ್ತು ಮೈಸೂರು ನಾಯಕ ಪಡೆಯ ಅಧ್ಯಕ್ಷರು ಹಾಗೂ ವಕೀಲರಾದ ಶ್ರೀ.ಪಡುವಾರಹಳ್ಳಿ ಎಂ ರಾಮಕೃಷ್ಣ ಅವರು ಮೈಸೂರು ವಿಶ್ವವಿದ್ಯಾನಿಲಯದಲ್ಲಿ "ಶ್ರೀ ಮಹರ್ಷಿ ವಾಲ್ಮೀಕಿ" ಅಧ್ಯಯನ ಪೀಠ ಸ್ಥಾಪಿಸಲು ಮನವಿಯನ್ನು ಸಲ್ಲಿಸಲಾಗಿದ್ದು, ಸದರಿಯವರ ಮನವಿ ಪತ್ರಗಳನ್ನು ಲಗತ್ತಿಸಲಾಗಿದೆ.

ಈ ರೀತಿಯಾಗಿ ಸಲ್ಲಿಸಲಾದ ಮನವಿಯನ್ನು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸಭೆಯಲ್ಲಿ ಚರ್ಚಿಸಲಾಗಿ ಈ ಕೆಳಗಿನಂತೆ ತೀರ್ಮಾನಿಸಲಾಗಿರುತ್ತದೆ.

"Regarding Valmiki Chair/Institution at University of Mysore, representation given from Legislative Members has been discussed and resolved that the University administrative authority will approach the State Government for the Corpus fund about FIVE CRORES. If the government releases the amount further action will be takenup"

ಸಿಂಡಿಕೇಟ್ ಸಭೆಯ ಧೃಡೀಕೃತ ನಡಾವಳಿ ಪ್ರತಿಯನ್ನು ಲಗತ್ತಿಸಲಾಗಿದೆ.

ಈ ಹಿನ್ನೆಲೆಯಲ್ಲಿ ಮೇಲಿನ ಉದ್ದೇಶಿತ ಕಾರ್ಯಕ್ರಮಕ್ಕಾಗಿ ಅಧ್ಯಯನ ಪೀಠವನ್ನು ಸ್ಥಾಪಿಸಲು ಅನುಮತಿಸಿ, ಸದರಿ ಪೀಠದ ಕಾರ್ಯಚಟುವಟಿಕೆಗಳಗಾಗಿ ರೂ.5,00,00,000/- ( ಐದು ಕೋಟಿ ರೂಪಾಯಿಗಳು ಮಾತ್ರ) ಗಳನ್ನು ಮಂಜೂರು ಮಾಡಲು ಕೋರಲಾಗಿದೆ. ಅನುದಾನವನ್ನು ಬಿಡುಗಡೆಗೊಳಿಸಿದ್ದಲ್ಲಿ ಅನುದಾನವನ್ನು ನಿಶ್ಚಿತ ಠೇವಣಿಯಲ್ಲಿರಿಸಿ ಅದರಲ್ಲಿ ಬರುವಂತಹ ವಾರ್ಷಿಕ ಬಡ್ಡಿಯ ಮೊತ್ತದಿಂದ ವಿವಿಧ ಉದ್ದೇಶಗಳನ್ನು ಈಡೇರಿಸಲಾಗುವುದು. ಸರ್ಕಾರವು ಅನುಮತಿಯನ್ನು ನೀಡಿದ ನಂತರ ಪೂರ್ಣ ಮಾಹಿತಿಗಳನ್ನೊಳಗೊಂಡ ಪ್ರಸ್ತಾವನೆಯನ್ನು ಸಿಂಡಿಕೇಟ್ ಸಭೆಯ ಅನುಮೋದನೆಯೊಂದಿಗೆ ಸಲ್ಲಿಸಲಾಗುವುದು.

ವಂದನೆಗಳೊಂದಿಗೆ

ನಿಮ್ಮ ನಂಬುಗೆಯ

26/11/19

ಕುಲಸಚಿವ

ಪ್ರತಿ:
1. ಸನ್ಮಾನ್ಯ ಶ್ರೀ.ಪ್ರತಾಪ್ ಸಿಂಹ, ಲೋಕಸಭಾ ಸದಸ್ಯರು, ಜಲದರ್ಶಿನಿ, ಡಿಸಿ-2 ಕಾಟೇಜ್, ಹುಣಸೂರು ಮುಖ್ಯ ರಸ್ತೆ, ಮೈಸೂರು-570 005.
2. ಸನ್ಮಾನ್ಯ ಶ್ರೀ.ಎಲ್.ನಾಗೇಂದ್ರ, ವಿಧಾನಸಭಾ ಸದಸ್ಯರು, ಚಾಮರಾಜ ಕ್ಷೇತ್ರ, ಜಲದರ್ಶಿನಿ, ಸಿ.ಎಸ್-1 ಕಾಟೇಜ್, ಹುಣಸೂರು ರಸ್ತೆ, ಮೈಸೂರು-570 005.
3. ಶ್ರೀ.ಪಡುವಾರಹಳ್ಳಿ ಎಂ ರಾಮಕೃಷ್ಣ, ವಕೀಲರು ಹಾಗೂ ಅಧ್ಯಕ್ಷರು, ಮೈಸೂರು ನಾಯಕರ ಪಡೆ, #2502, 3ನೇ ಮುಖ್ಯ ರಸ್ತೆ, ಪಡುವಾರಹಳ್ಳಿ, ಮೈಸೂರು.
4. ಮಾನ್ಯ ಕುಲಪತಿಯವರ/ಕುಲಸಚಿವರ ಆಪ್ತ ಸಹಾಯಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
5. ಕಛೇರಿ ಪ್ರತಿ.

-144-

ಅನುಬಂಧ '೮'

ಕರ್ನಾಟಕ ಸರ್ಕಾರ

ಸಂಖ್ಯೆ: ಇಡಿ 26 ಯುಎಂವಿ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 01.07.2020.

ಇವರಿಂದ,
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ)
ಬೆಂಗಳೂರು-560 001.

ಇವರಿಗೆ,
ಕುಲಸಚಿವರು,
ಮೈಸೂರು ವಿಶ್ವವಿದ್ಯಾಲಯ,
ಮಾನಸ ಗಂಗೋತ್ರಿ, ಮೈಸೂರು-570 006.

ಮಾನ್ಯರೇ,

ವಿಷಯ: ಮಹರ್ಷಿ ವಾಲ್ಮೀಕಿ ಅಧ್ಯಯನ ಕೇಂದ್ರವನ್ನು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಪ್ರಾರಂಭ ಮಾಡುವ ಕುರಿತು.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪ್ರಸ್ತಾವನೆಯನ್ನು ಪರಿಶೀಲಿಸಿದೆ. ಈಗಾಗಲೇ ವಾಲ್ಮೀಕಿ ಅಧ್ಯಯನ ಪೀಠವು ಗುಲ್ಬರ್ಗಾ ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸುತ್ತಿರುವುದರಿಂದ, ಪ್ರಸ್ತಾವನೆಯ ಮುಖ್ಯ ಉದ್ದೇಶ, ಹುದ್ದೆಗಳ ಸೃಜನೆಯಾಗಿರುವುದರಿಂದ ಹಾಗೂ ಪ್ರಸ್ತುತ ಆರ್ಥಿಕ ನಿರ್ಬಂಧಗಳು ಜಾರಿಯಲ್ಲಿರುವುದರಿಂದ ಪ್ರಸ್ತಾವನೆಯನ್ನು ಪರಿಗಣಿಸಲು ಸಾಧ್ಯವಿಲ್ಲವೆಂದು ತಿಳಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,

Sheetal M. Hiremath

(ಶೀತಲ್ ಎಂ. ಹಿರೇಮಠ)
ಸರ್ಕಾರದ ಅಧೀನ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ
(ವಿಶ್ವವಿದ್ಯಾನಿಲಯ-1)

Registrar Personal Section
University of Mysore
No. 3013
Dt. 13/7/202

JR(PD-I)

-115-

ತಂತಿ ವಿಳಾಸ : ಯೂನಿರಜ್
ದೂರವಾಣಿ ಸಂಖ್ಯೆ : 2419677/2419361
ಫ್ಯಾಕ್ಸ್ : 0821-2419363/2419301

e-mail : registar@uni-mysore.ac.in
www.uni.-mysore.ac.in

# ಮೈಸೂರು ವಿಶ್ವವಿದ್ಯಾನಿಲಯ

Estd. 1916

ಅನುಬಂಧ-'ಐ'

ವಿಶ್ವವಿದ್ಯಾನಿಲಯ ಕಾರ್ಯಸೌಧ
ಕ್ರಾಫರ್ಡ್ ಭವನ, ಅಂಚೆ ಪೆಟ್ಟಿಗೆ ಸಂಖ್ಯೆ: 406
ಮೈಸೂರು - 570-005

ಸಂಖ್ಯೆ:ಡಿವಿ7/296/2019-20 1

ದಿನಾಂಕ: 23 .-11-2020

ಸರ್ಕಾರದ ಅಪರ ಮುಖ್ಯಕಾರ್ಯದರ್ಶಿ
ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ)
ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ
ಬೆಂಗಳೂರು-560 005

ಮಾನ್ಯರೆ,

ವಿಷಯ: ಮೈಸೂರು ವಿಶ್ವವಿದ್ಯಾನಿಲಯದಲ್ಲಿ " ಶ್ರೀ ಮಹರ್ಷಿ ವಾಲ್ಮೀಕಿ ಹಾಗೂ ವ್ಯಾಸ ಇವರುಗಳನ್ನೊಳಗೊಳಂಡಂತೆ ಅಧ್ಯಯನ ಪೀಠ" ಸ್ಥಾಪಿಸುವ ಕುರಿತು.

ಉಲ್ಲೇಖ: 1)ಶ್ರೀ.ಆರ್.ಪ್ರದೀಪ್‌ಕುಮಾರ್ ಧೀಕ್ಷಿತ್, ಸಿಂಡಿಕೇಟ್ ಸದಸ್ಯರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಅವರ ಪತ್ರ ದಿನಾಂಕ:22-09-2020.
2)ನಿಮ್ಮ ಪತ್ರ ಸಂಖ್ಯೆ ಇಡಿ/26/ಯುಎಂವಿ/2020, ದಿನಾಂಕ 01-07-2020.
3)ದಿನಾಂಕ:01-10-2020 ರಂದು ಜರುಗಿದ ಸಿಂಡಿಕೇಟ್ ಸಭೆಯ ತೀರ್ಮಾನ.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಈ ಮೂಲಕ ತಮ್ಮ ಗಮನಕ್ಕೆ ತರಬಯಸುವುದೇನೆಂದರೆ ಈ ಹಿಂದೆ ಮೈಸೂರು ವಿಶ್ವವಿದ್ಯಾನಿಲಯದಲ್ಲಿ " ಶ್ರೀ ಮಹರ್ಷಿ ವಾಲ್ಮೀಕಿ" ಅಧ್ಯಯನ ಪೀಠವನ್ನು ಸ್ಥಾಪಿಸುವ ಕುರಿತು ಅನುಮತಿ ಹಾಗೂ ಅನುದಾನ ಬಿಡುಗಡೆ ಕೋರಿ ಪತ್ರ ವ್ಯವಹರಿಸಲಾಗಿರುವುದಕ್ಕೆ ಉಲ್ಲೇಖಿತ (2) ರ ಪತ್ರದಲ್ಲಿ ಈಗಾಗಲೇ ಶ್ರೀ ಮಹರ್ಷಿ ವಾಲ್ಮೀಕಿ" ಅಧ್ಯಯನ ಪೀಠವನ್ನು ಗುಲ್ಬರ್ಗಾ ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸುತ್ತಿರುವುದರಿಂದ ಪ್ರಸ್ತಾವನೆಯನ್ನು ಪರಿಗಣಿಸಲು ಸಾಧ್ಯವಿಲ್ಲವೆಂದು ತಿಳಿಸಿರುತ್ತೀರಿ.

ದಿನಾಂಕ 01-10-2020 ರಂದು ಜರುಗಿದ ಸಿಂಡಿಕೇಟ್ ಸಭೆಯಲ್ಲಿ ಅಧ್ಯಯನ ಪೀಠದ ಸ್ಥಾಪನೆಗೆ ಸಂಬಂಧಿಸಿದಂತೆ ಚರ್ಚಿಸಲಾಗಿ ಅಂತಿಮವಾಗಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ " ಶ್ರೀ ಮಹರ್ಷಿ ವಾಲ್ಮೀಕಿ ಹಾಗೂ ವ್ಯಾಸ" ಇಬ್ಬರು ಮಹನೀಯರನ್ನೊಳಗೊಂಡಂತೆ ಆಳವಾಗಿ, ಅಧ್ಯಯನ ನಡೆಸಲು ತೀರ್ಮಾನಿಸಲಾಗಿರುವುದನ್ನು ತಮ್ಮ ಗಮನಕ್ಕೆ ತರುತ್ತಾ, ಈ ಸಂಬಂಧವಾಗಿ ಅನುಮೋದನೆಯನ್ನು ಹಾಗೂ ಅಗತ್ಯ ಅನುದಾನ ಬಿಡುಗಡೆಗಾಗಿ ಮತ್ತೊಮ್ಮೆ ಪತ್ರ ವ್ಯವಹರಿಸಲು ನಿರ್ದೇಶಿತನಾಗಿದ್ದೇನೆ.

ವಂದನೆಗಳೊಂದಿಗೆ

ನಿಮ್ಮ ನಂಬುಗೆಯ

23/11/2020

ಕುಲಸಚಿವ

ಪ್ರತಿ:

1. ಮಾನ್ಯ ಕುಲಪತಿಯವರ/ಕುಲಸಚಿವರ ಆಪ್ತ ಸಹಾಯಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

-146 (II)

ಕರ್ನಾಟಕ ಸರ್ಕಾರ

ಅನುಬಂಧ 'ಈ'

ಸಂಖ್ಯೆ: ಇಡಿ 26 ಯುಎಂವಿ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 27.01.2021.

ಇವರಿಂದ,
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ)
ಬೆಂಗಳೂರು-560 001.

ಇವರಿಗೆ,
ಕುಲಸಚಿವರು,
ಮೈಸೂರು ವಿಶ್ವವಿದ್ಯಾಲಯ,
ಮಾನಸ ಗಂಗೋತ್ರಿ, ಮೈಸೂರು-570 006.

Bring it to notice of Syndicate of UOM

9/2/2021

ಮಾನ್ಯರೇ,

ವಿಷಯ: ಮಹರ್ಷಿ ವಾಲ್ಮೀಕಿ ಅಧ್ಯಯನ ಕೇಂದ್ರವನ್ನು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಪ್ರಾರಂಭ ಮಾಡುವ ಕುರಿತು.

ಉಲ್ಲೇಖ: 1. ಸರ್ಕಾರದ ಸಮಸಂಖ್ಯೆಯ ಪತ್ರ ದಿನಾಂಕ: **01.07.2020.**
2. ತಮ್ಮ ಕಛೇರಿ ಪತ್ರ ಸಂಖ್ಯೆ: **ಡಿವಿ7/296/2019-20,** ದಿನಾಂಕ: **23.11.2020.**

******

DV-7

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಶ್ರೀ ಮಹರ್ಷಿ ವಾಲ್ಮೀಕಿ ಹಾಗೂ ವ್ಯಾಸ ಅಧ್ಯಯನ ಪೀಠ ಸ್ಥಾಪಿಸುವ ಕುರಿತಾದ ಪ್ರಸ್ತಾವನೆಯನ್ನು ಪರಿಶೀಲಿಸಿ, ಪರಿಗಣಿಸಲು ಸಾಧ್ಯವಿಲ್ಲವೆಂದು ಉಲ್ಲೇಖ(1)ರ ಪತ್ರದಲ್ಲಿ ವಿಶ್ವವಿದ್ಯಾನಿಲಯಕ್ಕೆ ತಿಳಿಸಲಾಗಿದೆ. ಆದರ ಯಾವುದೇ ಸಕಾರಣ ಅಥವಾ ಸೂಕ್ತ ಸಮರ್ಥನೆಗಳಿಲ್ಲದೇ ಸದರಿ ವಿಷಯವಾಗಿ ಉಲ್ಲೇಖ(2)ರಲ್ಲಿ ಮತ್ತೊಮ್ಮೆ ಪತ್ರವನ್ನು ಬರೆಯಲಾಗಿರುತ್ತದೆ.

ಆದ್ದರಿಂದ ಉಲ್ಲೇಖ(೧) ರ ಪತ್ರದಲ್ಲಿ ಈಗಾಗಲೇ ವಾಲ್ಮೀಕಿ ಅಧ್ಯಯನ ಪೀಠವು ಗುಲ್ಬರ್ಗಾ ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸುತ್ತಿರುವುದರಿಂದ, ಪ್ರಸ್ತಾವನೆಯ ಮುಖ್ಯ ಉದ್ದೇಶ, ಹುದ್ದೆಗಳ ಸೃಜನೆಯಾಗಿರುವುದರಿಂದ ಹಾಗೂ ಪ್ರಸ್ತುತ ಆರ್ಥಿಕ ನಿರ್ಬಂಧಗಳು

No. 1130
9/2/21

ಜಾರಿಯಲ್ಲಿರುವುದರಿಂದ ಪ್ರಸ್ತಾವನೆಯನ್ನು ಪರಿಗಣಿಸಲು ಸಾಧ್ಯವಿಲ್ಲವೆಂದು ಮತ್ತೊಮ್ಮೆ ತಿಳಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,

(ಶೀತಲ್ ಎಂ. ಹಿರೇಮಠ)
ಸರ್ಕಾರದ ಅಧೀನ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾನಿಲಯ-1)

UNIVERSITY OF MYSORE

EXTRACT FROM THE PROCEEDINGS OF THE ORDINARY/~~SPECIAL~~ SYNDICATE MEETING HELD ON 25-03-2021

ಮೈಸೂರು ವಿಶ್ವವಿದ್ಯಾನಿಲಯದಲ್ಲಿ ವ್ಯಾಸ ವಾಲ್ಮೀಕಿ ಅಧ್ಯಯನ ಪೀಠ ಸ್ಥಾಪಿಸುವ ಬಗ್ಗೆ.

ಅನುಬಂಧ 'ಉ'

***

ಮೈಸೂರು ವಿಶ್ವವಿದ್ಯಾನಿಲಯದಲ್ಲಿ ವ್ಯಾಸ ವಾಲ್ಮೀಕಿ ಅಧ್ಯಯನ ಪೀಠ ಸ್ಥಾಪಿಸುವ ಬಗ್ಗೆ ದಿನಾಂಕ 01-10-2020 ರಂದು ಜರುಗಿದ ಸಿಂಡಿಕೇಟ್ ಸಭೆಯ ತೀರ್ಮಾನದನ್ವಯ " ಶ್ರೀ.ಮಹರ್ಷಿ ವಾಲ್ಮೀಕಿ ಹಾಗೂ ವ್ಯಾಸ" ಇಬ್ಬರು ಮಹನೀಯರನ್ನೊಳಗೊಂಡಂತೆ ಆಳವಾಗಿ ಅಧ್ಯಯನ ನಡೆಸಲು ತೀರ್ಮಾನಿಸಿದ ಹಿನ್ನೆಲೆಯಲ್ಲಿ ಸರ್ಕಾರದ ಅನುಮೋದನೆಗಾಗಿ ~~ಹಾಗೂ~~ ಅನುದಾನ ಬಿಡುಗಡೆಗಾಗಿ ಸರ್ಕಾರಕ್ಕೆ ಮತ್ತೊಮ್ಮೆ ದಿನಾಂಕ 23-11-2020 ರಂದು ಪತ್ರ ವ್ಯವಹರಿಸಲಾಗಿತ್ತು.

ಸದರಿ ಪತ್ರಕ್ಕೆ ದಿನಾಂಕ 27-01-2021ರಂದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ), ಬೆಂಗಳೂರು ಇವರು ಪತ್ರ ಬರೆದು ಈ ಕೆಳಗಿನಂತೆ ತಿಳಿಸಿರುತ್ತಾರೆ.(ಪತ್ರದ ಪ್ರತಿಯನ್ನು ಲಗತ್ತಿಸಿದೆ)

"ಮೈಸೂರು ವಿಶ್ವವಿದ್ಯಾನಿಲಯಲದ್ಲಿ ಶ್ರೀಮಹರ್ಷಿ ವಾಲ್ಮೀಕಿ ಹಾಗೂ ವ್ಯಾಸ ಅಧ್ಯಯನ ಪೀಠ ಸ್ಥಾಪಿಸುವ ಕುರಿತಾದ ಪ್ರಸ್ತಾವನೆಯನ್ನು ಪರಿಶೀಲಿಸಿ, ಪರಿಗಣಿಸಲು ಸಾಧ್ಯವಿಲ್ಲವೆಂದು ಉಲ್ಲೇಖ (1) ರ ಪತ್ರದಲ್ಲಿ ವಿಶ್ವವಿದ್ಯಾನಿಲಯಕ್ಕೆ ತಿಳಿಸಲಾಗಿದೆ. ಆದರೆ ಯಾವುದೇ ಸಕಾರಣ ಅಥವಾ ಸೂಕ್ತ ಸಮರ್ಥನೆಗಳಿಲ್ಲದೇ ಸದರಿ ವಿಷಯವಾಗಿ ಉಲ್ಲೇಖ (2) ರಲ್ಲಿ ಮತ್ತೊಮ್ಮೆ ಪತ್ರವನ್ನು ಬರೆಯಲಾಗಿರುತ್ತದೆ.

ಆದರೆ ದಿನಾಂಕ 29-01-2021 ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ಈ ಕೆಳಕಂಡಂತೆ ತೀರ್ಮಾನಿಸಲಾಗಿರುತ್ತದೆ.

| | |
|---|---|
| ಸಾಮಾನ್ಯ ಸಭೆ 2021/3.3 | ಮೈಸೂರು ವಿಶ್ವವಿದ್ಯಾನಿಲಯದಲ್ಲಿ ವ್ಯಾಸ ವಾಲ್ಮೀಕಿ ಅಧ್ಯಯನ ಪೀಠ ಸ್ಥಾಪಿಸುವ ಬಗ್ಗೆ |
| | ಮೈಸೂರು ವಿಶ್ವವಿದ್ಯಾನಿಲಯದ ಆಂತರಿಕ ಅನುದಾನದಿಂದ ವ್ಯಾಸ ವಾಲ್ಮೀಕಿ ಅಧ್ಯಯನ ಪೀಠ ಸ್ಥಾಪಿಸುವುದೆಂದು, ಹೆಚ್ಚುವರಿ ಅನುದಾನಕ್ಕಾಗಿ ಪೀಠ ಸ್ಥಾಪನೆಯ ಉದ್ದೇಶವನ್ನು ವಿಸ್ತೃತವಾಗಿ ಸಭಾ ಸದಸ್ಯರುಗಳು ಚರ್ಚಿಸಿದರು.<br><br>ಡಾ. ಆರ್.ಪ್ರದೀಪ್‌ಕುಮಾರ್ ದೀಕ್ಷಿತ್ ಮಾತನಾಡಿ, ಸರ್ಕಾರಕ್ಕೆ ಬರೆದಿರುವ ಪತ್ರದಲ್ಲಿ ಪೀಠ ಸ್ಥಾಪನೆಯ ಉದ್ದೇಶಗಳೊಡನೆ ವಿಸ್ತೃತವಾಗಿ ಪೂರ್ಣ ವಿವರಗಳೊಡನೆ ಬರೆದಿರುವುದಿಲ್ಲ. ಸದರಿ ಪೀಠವನ್ನು ಪ್ರಾರಂಭಿಸಲು ಮೈಸೂರು ವಿಶ್ವವಿದ್ಯಾನಿಲಯದ ಸಂಪನ್ಮೂಲದಿಂದ ಅನುದಾನ ನೀಡಿ ಹೆಚ್ಚಿನ ಅನುದಾನಕ್ಕೆ ಸಿಂಡಿಕೇಟ್ ಸದಸ್ಯರುಗಳ ನಿಯೋಗ ತೆರಳಿ ಸರ್ಕಾರಕ್ಕೆ ಮನವಿ ಸಲ್ಲಿಸಲು ನಿರ್ಣಯಿಸಲಾಗಿತ್ತು. ಆದರೆ, ಪತ್ರದಲ್ಲಿ ಪೀಠ ಸ್ಥಾಪನೆಗೆ ನೇರ ಅನುದಾನದ ಪ್ರಸ್ತಾವನೆ ಸಲ್ಲಿಸಿರುವುದು ಸರಿಯಲ್ಲ ಎಂದರು.<br>ಇದಕ್ಕೆ ಧನಿಗೂಡಿಸಿದ ಡಾ. ದಾಮೋದರರವರು ಮಾತನಾಡಿ, ಈ ಹಿಂದೆ ನಡೆದ ಸಿಂಡಿಕೇಟ್ ಸಭೆಯಲ್ಲೇ ನಮ್ಮ ವಿಶ್ವವಿದ್ಯಾನಿಲಯದಿಂದಲೇ ಪ್ರಾರಂಭಿಕ 5.00 ಲಕ್ಷ ಅನುದಾನದೊಂದಿಗೆ ಪ್ರಾರಂಭಿಸಲು ತೀರ್ಮಾನಿಸಲಾಗಿದೆ. ಅದರಂತೆ ಪೀಠ ಸ್ಥಾಪಿಸುವುದು ಸೂಕ್ತವೆಂದು ತಿಳಿಸಿದರು. |
| ತೀರ್ಮಾನ | ಮೈಸೂರು ವಿಶ್ವವಿದ್ಯಾನಿಲಯದಲ್ಲಿ ವ್ಯಾಸ ವಾಲ್ಮೀಕಿ ಅಧ್ಯಯನ ಪೀಠ ಸ್ಥಾಪನೆಗೆ ಆಂತರಿಕ ಅನುದಾನ ಐದು ಲಕ್ಷ ರೂಪಾಯಿಗಳನ್ನು ಮೀಸಲಿಟ್ಟು ಪೀಠ ಪ್ರಾರಂಭಿಸಲು ಸರ್ವಾನುಮತದಿಂದ ಸಭೆಯಲ್ಲಿ ಅನುಮೋದಿಸಲಾಯಿತು. |

Lingaraju 01/4/2021

DEPUTY REGISTRAR (Authorities)
UNIVERSITY OF MYSORE
MYSORE - 570 005

1/4

# ಮೈಸೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಸೌಧ,
ಕ್ರಾಫರ್ಡ್ ಭವನ, ಮೈಸೂರು-570005.

ಅನುಬಂಧ 'ಲ್ಲ'

ಪ್ರಸ್ತಾವನೆ:

ದಿನಾಂಕ 25-03-2021ರಂದು ಜರುಗಿದ ಸಿಂಡಿಕೇಟ್ ಸಭೆಯಲ್ಲಿ "ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಶ್ರೀ ವ್ಯಾಸ ವಾಲ್ಮೀಕಿ ಅಧ್ಯಯನ ಪೀಠ"ದ ಸ್ಥಾಪನೆಗೆ ಆಂತರಿಕ ಅನುದಾನ ಐದು ಲಕ್ಷ ರೂಪಾಯಿಗಳನ್ನು ಮೀಸಲಿಟ್ಟು ಪೀಠ ಪ್ರಾರಂಭಿಸಲು ಸರ್ವಾನುಮತದಿಂದ ಸಭೆಯಲ್ಲಿ ಅನುಮೋದಿಸಲಾಗಿರುತ್ತದೆ.

ಈ ಹಿನ್ನೆಲೆಯಲ್ಲಿ, ಸನ್ಮಾನ್ಯ ಕುಲಪತಿಯವರ ಟಿಪ್ಪಣಿ ದಿನಾಂಕ: 19-11-2021ರಲ್ಲಿ ಪೂರ್ವಭಾವಿಯಾಗಿ ಸದರಿ ಪೀಠದ ಸಂದರ್ಶಕ ಪ್ರಾಧ್ಯಾಪಕರಾಗಿ ಡಾ. ಸಿ.ಪಿ. ರಾಮಶೇಷ್, ವಿಶ್ರಾಂತ ಗ್ರಂಥಪಾಲಕರು (ಪ್ರಭಾರ), ಮೈಸೂರು ವಿಶ್ವವಿದ್ಯಾನಿಲಯ ಗ್ರಂಥಾಲಯ, ಮಾನಸಗಂಗೋತ್ರಿ, ಮೈಸೂರು, ಇವರನ್ನು ತಾತ್ಕಾಲಿಕವಾಗಿ ರೂ. 8,000/-ಗಳ ಗೌರವ ಸಂಭಾವನೆಯೊಂದಿಗೆ ನೇಮಿಸಲು ಹಾಗೂ ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರೊಂದಿಗೆ ಸಮಾಲೋಚಿಸಿ ಪ್ರಸ್ತಾವನೆಯನ್ನು ಪಡೆಯಲು ನಿರ್ದೇಶನ ನೀಡಿರುವ ಸಂಬಂಧ ಈ ಕೆಳಕಂಡ ಆದೇಶ ಹೊರಡಿಸಲಾಗಿದೆ.

## ಆದೇಶ ಸಂಖ್ಯೆ: ಡಿವಿ.7/296/2019-20, ದಿನಾಂಕ: 26-11-2021

ಸನ್ಮಾನ್ಯ ಕುಲಪತಿಯವರ ಆದೇಶದ ಮೇರೆಗೆ, ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಶ್ರೀ ವ್ಯಾಸ ವಾಲ್ಮೀಕಿ ಅಧ್ಯಯನ ಪೀಠ ಸ್ಥಾಪನೆಗೆ ಕುರಿತಂತೆ, ಪೂರ್ವಭಾವಿ ಸಿದ್ಧತೆಗಾಗಿ ಹಾಗೂ ಪ್ರಸ್ತಾವನೆ ಸಲ್ಲಿಸುವುದಕ್ಕಾಗಿ ಡಾ. ಸಿ.ಪಿ. ರಾಮಶೇಷ್ ವಿಶ್ರಾಂತ ಗ್ರಂಥಪಾಲಕರು (ಪ್ರಭಾರ), ಮೈಸೂರು ವಿಶ್ವವಿದ್ಯಾನಿಲಯ ಗ್ರಂಥಾಲಯ, ಮಾನಸಗಂಗೋತ್ರಿ, ಮೈಸೂರು ಇವರನ್ನು ತಾತ್ಕಾಲಿಕವಾಗಿ ಪೀಠದ ಸಂದರ್ಶಕ ಪ್ರಾಧ್ಯಾಪಕರಾಗಿ ರೂ. 8,000/-ಗಳ ಗೌರವ ಸಂಭಾವನೆಯೊಂದಿಗೆ ಮುಂದಿನ ಆದೇಶದವರೆಗೆ ಆಹ್ವಾನಿಸಲಾಗಿದೆ.

ಸಂದರ್ಶಕ ಪ್ರಾಧ್ಯಾಪಕರು ಮೈಸೂರು ವಿಶ್ವವಿದ್ಯಾನಿಲಯದ ಡಾ. ರಾಧಕೃಷ್ಣನ್ ತತ್ವಶಾಸ್ತ್ರ ಮತ್ತು ಭಾರತೀಯ ಸಂಸ್ಕೃತಿ ಅಧ್ಯಯನ ಕೇಂದ್ರದಲ್ಲಿ ಕಾರ್ಯನಿರ್ವಹಿಸುವುದು.

ಸಂದರ್ಶಕ ಪ್ರಾಧ್ಯಾಪಕರು ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರಲ್ಲಿ ವರದಿ ಮಾಡಿಕೊಳ್ಳುವುದು ಮತ್ತು ಸದರಿಯುವರು ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರೊಂದಿಗೆ ಸಮಾಲೋಚಿಸಿ, ಪ್ರಸ್ತಾವನೆಯನ್ನು ಸಲ್ಲಿಸುವುದು.

ಆದೇಶದ ಮೇರೆಗೆ,

26/11/2021

ಕುಲಸಚಿವರು.

ಗೆ:

1. ಡಾ. ಸಿ.ಪಿ. ರಾಮಶೇಷ್, ವಿಶ್ರಾಂತ ಗ್ರಂಥಪಾಲಕರು (ಪ್ರಭಾರ), ಮೈಸೂರು ವಿಶ್ವವಿದ್ಯಾನಿಲಯ ಗ್ರಂಥಾಲಯ, ಮಾನಸಗಂಗೋತ್ರಿ, ಮೈಸೂರು
2. ನಿರ್ದೇಶಕರು, ಡಾ. ರಾಧಕೃಷ್ಣನ್ ತತ್ವಶಾಸ್ತ್ರ ಮತ್ತು ಭಾರತೀಯ ಸಂಸ್ಕೃತಿ ಅಧ್ಯಯನ ಕೇಂದ್ರ, ಅಂತರ್ರಾಷ್ಟ್ರೀಯ ವಿದ್ಯಾರ್ಥಿನಿಲಯದ ಪಕ್ಕ, ಮೈಸೂರು.
3. ನಿರ್ದೇಶಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು.
4. ಹಣಕಾಸು ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
5. ಅಪರ ನಿರ್ದೇಶಕರು, ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ, ಪ್ರಾಂತೀಯ ಕಛೇರಿ, ಮೈಸೂರು ವಿಭಾಗ, ಮೈಸೂರು.
6. ಮಾನ್ಯ ಕುಲಪತಿ/ಕುಲಸಚಿವರ ಆಪ್ತ ಸಹಾಯಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
7. ಕಛೇರಿ ಪ್ರತಿ.

DV-7. E//Chair/etts/MBR

ಮೈಸೂರು ವಿಶ್ವವಿದ್ಯಾನಿಲಯ

-150-
11/4/2022

ವಿಶ್ವವಿದ್ಯಾನಿಲಯ ಕಾರ್ಯಸೌಧ,
ಕ್ರಾಫರ್ಡ್ ಭವನ, ಮೈಸೂರು-570005.

ಸಂಖ್ಯೆ: ಡಿವಿ7/296/2019-20

ದಿನಾಂಕ: 30-03-2022

ಅನುಬಂಧ 'ಖ'

## ಟಿಪ್ಪಣಿ

ವಿಷಯ: ಶ್ರೀ ವ್ಯಾಸ ವಾಲ್ಮೀಕಿ ಅಧ್ಯಯನ ಪೀಠಕ್ಕೆ ಆಂತರಿಕ ಅನುದಾನ ರೂ. 5.00 ಲಕ್ಷಗಳನ್ನು ಮೀಸಲಿಡುವ ಬಗ್ಗೆ.

ಉಲ್ಲೇಖ: 1. ಈ ಕಛೇರಿ ಟಿಪ್ಪಣಿ ಪತ್ರ ಸಮ ಸಂಖ್ಯೆ, ದಿನಾಂಕ:26-11-2021.
2. ನಿಮ್ಮ ಕಛೇರಿ ಟಿಪ್ಪಣಿ ಸಂಖ್ಯೆ: ಹಶಾ40/ದನಿ/2021-22, ದಿನಾಂಕ: 25-03-2022.

*****

ಡಾ. ಎಸ್. ರಾಧಾಕೃಷ್ಣನ್ ತತ್ತ್ವಶಾಸ್ತ್ರ ಮತ್ತು ಭಾರತೀಯ ಸಂಸ್ಕೃತಿ ಅಧ್ಯಯನ ಕೇಂದ್ರ, ಸರಸ್ವತಿಪುರಂ, ಮೈಸೂರು, ಇಲ್ಲಿ ಸ್ಥಾಪಿಸಲಾಗಿರುವ ಶ್ರೀ ವ್ಯಾಸ ವಾಲ್ಮೀಕಿ ಅಧ್ಯಯನ ಪೀಠವನ್ನು ಕಾರ್ಯೋನ್ಮುಖಗೊಳಿಸುವ ಉದ್ದೇಶದಿಂದ ದಿನಾಂಕ: 25-03-2021ರ ಸಿಂಡಿಕೇಟ್ ಸಭೆಯ ನಿರ್ಣಯದನ್ವಯ ಹಾಗೂ ಸನ್ಮಾನ್ಯ ಕುಲಪತಿಯವರ ನಿರ್ದೇಶನದನ್ವಯ, ಸದರಿ ಪೀಠಕ್ಕೆ ರೂ. 5.00ಲಕ್ಷ (ಐದು ಲಕ್ಷ ರೂಗಳು ಮಾತ್ರ)ಗಳನ್ನು ಸಹೋದ್ಯಮ ಶೀರ್ಷಿಕೆಯಿಂದ ಮೀಸಲಿಡಲು ಉಲ್ಲೇಖಿತ 1ರ ಟಿಪ್ಪಣಿಯಲ್ಲಿ ತಿಳಿಸಲಾಗಿತ್ತು.

ಅದರಂತೆ ಸದರಿ ಪೀಠಕ್ಕೆ ಸಂಬಂಧಿಸಿದಂತೆ, ಕಾರ್ಪಸ್ ನಿಧಿಯ ಒಂದು ನಿರ್ದಿಷ್ಟ ಮೊತ್ತವು ವಿಶ್ವವಿದ್ಯಾನಿಲಯಕ್ಕೆ ಬರುವವರೆಗೂ, ವಿಶ್ವವಿದ್ಯಾನಿಲಯದ **'ಸಹೋದ್ಯಮ ಶೀರ್ಷಿಕೆ'**ಯಿಂದ **ರೂ. ೫.೦೦ಲಕ್ಷ (ರೂಪಾಯಿ ಐದು ಲಕ್ಷಗಳು ಮಾತ್ರ)**ಗಳನ್ನು ವಿಶ್ವವಿದ್ಯಾನಿಯುದ ದತ್ತಿ ನಿಧಿ ಖಾತೆಗೆ **'ಶ್ರೀ ವ್ಯಾಸ ವಾಲ್ಮೀಕಿ ಅಧ್ಯಯನ ಪೀಠದ ಕಾರ್ಯಚಟುವಟಿಕೆ ಮತ್ತು ಗೌರವ ಸಂಭಾವನೆ'** ಎಂಬ ಹೆಸರಿನಲ್ಲಿ ತಾತ್ಕಾಲಿಕವಾಗಿ ವರ್ಗಾವಣೆ ಮಾಡಿಕೊಂಡು ಪೀಠದ ಕಾರ್ಯಚಟುವಟಿಕೆಗಳಿಗೆ ಬಳಸಲು ಸೂಕ್ತ ಕ್ರಮ ತೆಗೆದುಕೊಳ್ಳಲು ತಿಳಿಸಲು ನಿರ್ದೇಶಿತನಾಗಿದ್ದೇನೆ.

ಕುಲಸಚಿವ.

ಇವರಿಗೆ:
ಹಣಕಾಸು ಅಧಿಕಾರಿ,
ಮೈಸೂರು ವಿಶ್ವವಿದ್ಯಾನಿಲಯ,
ಮೈಸೂರು.

ಪ್ರತಿ:

1. ಮಾನ್ಯ ಕುಲಪತಿ/ಕುಲಸಚಿವರ ಆಪ್ತಸಹಾಯಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
2. ಕಛೇರಿ ಪ್ರತಿ.

DV-7, E//Chairsletts/MBR

-151-

No. CS/MG/74/2022-23

ಕುಲಸಚಿವರ ಕಛೇರಿ
ಮೈ. ವಿ. ವಿ ಮೈಸೂರು
ಇಂದ ಸಂ. 6-3205
ತಾ. 19/10/2022

ದಿನಾಂಕ : ೧೮-೧೦-೨೦೨೨

ಅನುಬಂಧ 'ಎ'

DV-7
18/10/22

ಇವರಿಗೆ,

ಕುಲಸಚಿವರು
ಮೈಸೂರು ವಿಶ್ವ ವಿದ್ಯಾನಿಲಯ
ಮೈಸೂರು

ಮೂಲಕ

ಸಂಯೋಜಕರು,
ಡಾ. ಎಸ್. ರಾಧಾಕೃಷ್ಣನ್ ತತ್ತ್ವಶಾಸ್ತ್ರ ಕೇಂದ್ರ

ಮಾನ್ಯರೇ,

ವಿಷಯ: ಶ್ರೀವ್ಯಾಸ – ವಾಲ್ಮೀಕಿ ಅಧ್ಯಯನ ಪೀಠಕ್ಕೆ ಸಂಬಂಧಿಸಿದ ಪ್ರಸ್ತಾವನೆ ಕುರಿತು.

ಉಲ್ಲೇಖ : ಕುಲಸಚಿವರ ಆದೇಶ ಸಂಖ್ಯೆ ಡಿ. ವಿ . ೭/೨೭೬/೨೦೧೯-೨೦ ದಿನಾಂಕ : ೨೬-೧೧-೨೦೨೧.

DV-7
18/10/22.

ಕುಲಸಚಿವರ ಆದೇಶನುಸಾರ ಶ್ರೀ ವ್ಯಾಸ-ವಾಲ್ಮೀಕಿ ಅಧ್ಯಯನ ಪೀಠ ಸ್ಥಾಪನೆಗೆ ಕುರಿತಂತೆ ಪೂರ್ವಭಾವಿ ಸಿದ್ಧತೆಯ ವರದಿ ಹಾಗೂ ಪ್ರಸ್ತಾವನೆಯನ್ನು ಇದರ ಜೊತೆಯಲ್ಲಿ ಲಗತ್ತಿಸಿ ಸಲ್ಲಿಸಲಾಗಿದೆ. ಧ್ಯೇಯೋದ್ದೇಶ ಮತ್ತು ಕಾರ್ಯಚಟುವಟಚಿಕೆಗಳನ್ನು ಕುರಿತು ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರೊಡನೆ ಚರ್ಚಿಸಿ ನೀಡಲಾಗಿದೆ.

ವಂದನೆಗಳೊಡನೆ

ತಮ್ಮ ನಂಬುಗೆಯ

(ಸಿ.ಪಿ. ರಾಮಶೇಷ)
